ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 2 ಶನಿವಾರ 2025

₹4

ಸಂಪುಟ: 46 | ಸಂಚಿಕೆ: 107 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ಮೈಸೂರು ಮಿತ್ರ

ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆ



ಮೈಸೂರಿನಲ್ಲಿರುವ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ 63ನೇ ಸಂಸ್ಥಾಪನಾ ದಿನ ಆಚರಿಸಲಾಯಿತು.

ಮೈಸೂರು, ಆ.1(ಎಂಕೆ)– ಮೈಸೂರಿನಲ್ಲಿರುವ ಪ್ರಾದೇಶಿಕ ಶಿಕ್ಷಣ ಸಂಸ್ಥೆ (ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ–ಎನ್‌ಸಿಇಆರ್‌ಟಿ) ಯಲ್ಲಿ ಶುಕ್ರವಾರ 63ನೇ ಸಂಸ್ಥಾಪನಾ ದಿನ ಆಚರಿಸಲಾಯಿತು.

ಈ ವೇಳೆ ಆನ್‌ಲೈನ್ ಮೂಲಕ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಎನ್‌ಸಿಇಆರ್‌ಟಿ ನಿರ್ದೇಶಕ ಪ್ರೊ.ದಿನೇಶ್ ಪ್ರಸಾದ್ ಸಕ್ಲಾನಿ, ಪ್ರಾದೇಶಿಕ ಶಿಕ್ಷಣ ಸಂಸ್ಥೆಯು ಮುಂದಿನ 5 ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಬೇಕಾದ ಗುರಿಗಳು ಏನು ಎಂಬುದನ್ನು ನಿರ್ಧರಿಸಬೇಕು. ರಾಷ್ಟ್ರೀಯ ಶಿಕ್ಷಣ ನೀತಿ–2020 ಶಿಕ್ಷಣ ಕ್ಷೇತ್ರದ ಪ್ರಮುಖ ನೀತಿಯಾಗಿದ್ದು, ಸಂಸ್ಥೆಯ ಬೆಳವಣಿಗೆಗೆ ಹಾಗೂ ದೇಶದ ಬೆಳವಣಿಗೆಗೆ ಸಹಕಾರಿಯಾಗಿದೆ ಎಂಬುದನ್ನು ತಿಳಿಸಿದರು.

ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು ಕೇವಲ ಪಾಠ ಮಾಡುವ ತಾಣಗಳು ಮಾತ್ರವಲ್ಲ, ದೇಶಕ್ಕೆ ಉತ್ತಮ ಶಿಕ್ಷಕರನ್ನು ರೂಪಿಸುವ ಸಂಸ್ಥೆಗಳಾಗಿವೆ. ಹಾಗಾಗಿ ಭವಿಷ್ಯದ ಶಿಕ್ಷಕರು NEP-2020 ಓದಬೇಕು. ಇದರಲ್ಲಿನ ಶಿಫಾರಸುಗಳನ್ನು ಅರ್ಥೈಸಿಕೊಳ್ಳಬೇಕು ಮತ್ತು ಎನ್‌ಸಿಇಆರ್‌ಟಿ ರೂಪಿಸಿರುವ ಕಲಿಕಾ ಮತ್ತು ಬೋಧನಾ ಸಾಮಗ್ರಿಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಪ್ರಭಾರ ನಿರ್ದೇಶಕಿ ಪ್ರೊ.ವಾಂಜುಳಾ, ಇತ್ತೀಚೆಗೆ ಮೊಬೈಲ್ ಬಳಕೆ ಹೆಚ್ಚಾಗಿದ್ದು ನಿರಂತರವಾಗಿ ದೀರ್ಘಕಾಲ ಇಯರ್ ಫೋನ್ ಬಳಕೆ ಮಾಡುವುದರಿಂದ ಭವಿಷ್ಯದಲ್ಲಿ ಕಿವುಡುತನ ಉಂಟಾಗುತ್ತದೆ ಎಂಬ ಗಂಭೀರ ಸಮಸ್ಯೆಯನ್ನು ಪ್ರಸ್ತಾಪಿಸಿದರು. ಈ ಬಗ್ಗೆ ಸೂಕ್ತ ಅರಿವು ಮೂಡಿಸಬೇಕಾದ ಅಗತ್ಯವಿದೆ ಹಾಗೂ ಅಧ್ಯಾಪಕರು ಆರೋಗ್ಯಕರ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ವಹಿಸಬೇಕಾದ ಪಾತ್ರ ದೊಡ್ಡದು ಎಂದು ಹೇಳಿದರು. ಆರ್‌ಐಇ ಪ್ರಾಂಶುಪಾಲ ಪ್ರೊ ಪ್ರದ್ಯುಮ್ನ ಕುಮಾರ್ ಸೇಠಿ, ಡಾ.ಅನಿಲ್ ಕುಮಾರ್, ಡಾ.ವಿ ಪ್ರಸಾದ್, ಡಾ.ಬಿ. ಸುಜಾತ, ಡಾ.ಎಸ್.ಪ್ರವೀಣ್ ಕುಮಾರ್, ಡಾ.ಸರ್ವೇಶ್ ಮೌರ್ಯ ಮತ್ತಿತರರಿದ್ದರು.

ಮುಕ್ತ ವಿಶ್ವವಿದ್ಯಾನಿಲಯದ 80 ಕೋರ್ಸ್‌ಗಳಿಗೆ ಪ್ರವೇಶಾವಕಾಶ

● ಇವುಗಳಲ್ಲಿ 10 ಆನ್‌ಲೈನ್ ಕೋರ್ಸ್ ● ಸೆ.15ರವರೆಗೆ ಕಾಲಾವಕಾಶ ● ಸೈನಿಕರು, ಮಾಜಿ ಸೈನಿಕರು, ದುರ್ಬಲ ವರ್ಗದ ಮಕ್ಕಳಿಗೆ ಶೇ.10 ಶುಲ್ಕ ವಿನಾಯಿತಿ ● ಅಲ್ಪ ಸಂಖ್ಯಾತ ಇಲಾಖೆ ಸಹಯೋಗದಲ್ಲಿ ಆ ವರ್ಗದವರಿಗೆ ಉಚಿತ ಶಿಕ್ಷಣ ● ತೃತೀಯ ಲಿಂಗಿಗಳು, ದೃಷ್ಟಿಹೀನರು, ಕೋವಿಡ್ ಸಂತ್ರಸ್ತರಿಗೆ ಉಚಿತ ಪ್ರವೇಶಾವಕಾಶ ● ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಮಾಹಿತಿ

ಮೈಸೂರು, ಆ.1(ಎಂಟಿವೈ)– ದೂರ ಶಿಕ್ಷಣ ನೀಡುವ ಏಕೈಕ ವಿಶ್ವವಿದ್ಯಾನಿಲಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2025–26ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಈ ಬಾರಿ 10 ಆನ್‌ಲೈನ್ ಕೋರ್ಸ್ ಸೇರಿದಂತೆ ಯುಜಿಸಿ ಅನುಮೋದಿತ 80 ಕೋರ್ಸ್‌ಗಳಿಗೆ ಸೆ.15ರೊಳಗೆ ಪ್ರವೇಶ ಪಡೆಯಬಹುದು ಎಂದು ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ತಿಳಿಸಿದ್ದಾರೆ.

ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಆಶಯದೊಂದಿಗೆ ಕರ್ನಾಟಕದಲ್ಲಿ ದೂರ ಶಿಕ್ಷಣ ನೀಡುವ ನಿಟ್ಟಿನಲ್ಲಿ 1996ರಲ್ಲಿ ಆರಂಭಗೊಂಡ ಮುಕ್ತ ವಿವಿ, ಇದುವರೆಗೂ ಲಕ್ಷಾಂತರ ಮಂದಿಗೆ ಉನ್ನತ ಶಿಕ್ಷಣ ನೀಡುತ್ತಾ ಬಂದಿದೆ. 18ರಿಂದ 80 ವರ್ಷದವರು ಮುಕ್ತ ವಿವಿಯಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ. ಯಶಸ್ವಿಯಾಗಿ ಮೂರು ದಶಕದತ್ತ ಶಿಕ್ಷಣ ನೀಡುವ ಮೂಲಕ ಮುನ್ನಡೆಯುತ್ತಿರುವ ಮುಕ್ತ ವಿವಿಗೆ 2023ರಿಂದ ಯುಜಿಸಿ ಮಾನ್ಯತೆ ಹೊಂದಿದ ಕಾರ್ಯಕ್ರಮಗಳಿಗೆ ಮಾತ್ರ ಪ್ರವೇಶಾತಿ ನೀಡುತ್ತಿದೆ. ಶೈಕ್ಷಣಿಕ ಗುಣಮಟ್ಟಕ್ಕೆ ನ್ಯಾಕ್‌ನಿಂದ ಎ+ ಮಾನ್ಯತೆ ದೊರೆತಿದೆ. ಸಾಂಪ್ರದಾಯಿಕ ವಿವಿಗಳು ನೀಡುವ ಪದವಿಗೆ ಸಮಾನವಾಗಿ ಮುಕ್ತ ವಿವಿ ಪದವಿ ನೀಡುತ್ತಿದೆ ಎಂದು ಹೇಳಿದರು.

ಯುಜಿಸಿ ನಿಯಮಾವಳಿ ಪ್ರಕಾರ ಪೂರ್ಣಾವಧಿಯಲ್ಲಿ ಒಂದು ಕೋರ್ಸ್ ಮತ್ತು ದೂರ ಶಿಕ್ಷಣದಲ್ಲಿ ಮತ್ತೊಂದು ಕೋರ್ಸ್ ಅನ್ನು ಪಡೆಯಲು ಅವಕಾಶ ಇದೆ. ಈ ಮಧ್ಯೆ 69 ಕೋರ್ಸ್‌ಗಳು ಲಭ್ಯ ಇತ್ತು. ಜ್ಯೋತಿಷ್ಯ ಶಾಸ್ತ್ರ ವಿಜ್ಞಾನ ಸೇರಿ ಒಟ್ಟು 70 ಕೋರ್ಸ್‌ಗಳಿವೆ. 10 ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಿದೆ ಎಂದು ಹೇಳಿದರು.

ಶುಲ್ಕದಲ್ಲಿ ರಿಯಾಯಿತಿ: ಈ ಬಾರಿಯಿಂದ ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ಅಭ್ಯರ್ಥಿಗಳಿಗೆ, ಸೈನಿಕರು ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಆಟೋ, ಕ್ಯಾಬ್ ಚಾಲಕರು ಮತ್ತು ಅವರ ಪತಿ, ಪತ್ನಿ ಹಾಗೂ ಇಬ್ಬರು ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ಶೇ. 10ರಿಯಾಯಿತಿ ನೀಡಲಾಗಿದೆ.

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ: ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಈ ಬಾರಿ ಮುಕ್ತ ವಿವಿಯಲ್ಲಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಬುದ್ಧಿಸ್ಟ್, ಜೈನ್ ಹಾಗೂ ಪಾರ್ಸಿ ಸಮುದಾಯ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಶುಲ್ಕ ಪಾವತಿಗಾಗಿ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ 5.5 ಕೋಟಿ ರೂ. ಪಾವತಿಸಿದೆ. ಇದರಿಂದ 2 ರಿಂದ 3 ಸಾವಿರ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಯೋಜನೆ ಜಾರಿಗೊಳಿಸಲಾಗಿದೆ ಎಂದರು.

ತೃತೀಯ ಲಿಂಗರು, ದೃಷ್ಟಿಹೀನ ವಿದ್ಯಾರ್ಥಿಗಳು (ಬಿ.ಇಡಿ, ಎಂಬಿಎ ಹೊರತುಪಡಿಸಿ), ಕೋವಿಡ್ 19ರಲ್ಲಿ ಸಾಂಕ್ರಾಮಿಕ ರೋಗದಿಂದ ತಂದೆ, ತಾಯಿ ಮೃತರಾಗಿದ್ದರೆ ಅಂತಹ ಮಕ್ಕಳಿಗೆ ಉಚಿತ ಪ್ರವೇಶಾತಿ ನೀಡಲಾಗುತ್ತಿದೆ. ಎಸ್‌ಸಿ, ಎಸ್‌ಟಿ, ಒಬಿಸಿ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳನ್ನು ಒದಗಿಸಿದಲ್ಲಿ ಎಸ್‌ಎಸ್‌ಪಿ ಮೂಲಕ ವಿದ್ಯಾರ್ಥಿ ವೇತನವಿರುತ್ತದೆ ಅಥವಾ ಪೂರ್ಣ ಶುಲ್ಕ ಮರುಭರಿಕೆಯಾಗುತ್ತದೆ ಎಂದು ಹೇಳಿದರು.

ರಾಜ್ಯದಲ್ಲಿರುವ 38 ಪ್ರಾದೇಶಿಕ ಕೇಂದ್ರಗಳಲ್ಲೂ ಪ್ರವೇಶಾತಿ ಪಡೆಯಬಹುದಾಗಿದೆ. ವಿವಿಯ ಅಧಿಕೃತ ವೆಬ್‌ಸೈಟ್ www.ksoumysuru.ac.in, http:www.ksoumysuru.ac.in ಅಥವಾ KSOU Admission portal ಮೂಲಕ ಪದಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ ನಂತರ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ ದಾಖಲಾತಿಗಳ ಪರಿಶೀಲನೆ ನಂತರ ಆನ್‌ಲೈನ್ ಮುಖಾಂತರ ಪ್ರವೇಶಾತಿ ಶುಲ್ಕ ಪಾವತಿಸಿ ಸಿದ್ಧಪಾಠಗಳನ್ನು ಪಡೆಯಬಹುದಾಗಿದೆ.

ಪ್ರಾದೇಶಿಕ ಕೇಂದ್ರಕ್ಕೆ ಜಮೀನು ಮಂಜೂರು: ಪ್ರಾದೇಶಿಕ ಕೇಂದ್ರಗಳ ನಿರ್ಮಾಣಕ್ಕಾಗಿ ಯಾದಗಿರಿಯಲ್ಲಿ 2 ಎಕರೆ, ಬಿಜಾಪುರದಲ್ಲಿ 3 ಎಕರೆ, ಶಿರಾದಲ್ಲಿ 2 ಎಕರೆ, ಮಡಿಕೇರಿಯಲ್ಲಿ 1 ಎಕರೆ, ಉಡುಪಿಯಲ್ಲಿ 1 ಎಕರೆ ಜಮೀನು ಮಂಜೂರಾಗಿದೆ ಎಂದು ಇದೇ ವೇಳೆ ತಿಳಿಸಿದರು.

ಸಿದ್ಧ ಪಾಠಕ್ಕೆ 8 ಕೋಟಿ ರೂ. ಮೀಸಲು: ವಿದ್ಯಾರ್ಥಿಗಳಿಗೆ ಸಿದ್ಧಪಾಠವನ್ನು ಒದಗಿಸಲು 8 ಕೋಟಿ ರೂ. ಅನುದಾನ ನೀಡಲಾಗಿದೆ. ಟೆಂಡರ್ ಪ್ರಕ್ರಿಯೆಯೂ ಪೂರ್ಣಗೊಂಡಿದೆ. ಸಂಶೋಧನೆಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಸಿದ್ಧಪಾಠಗಳು ಲಭ್ಯವಿವೆ. ಸಂಶೋಧನೆ ಉತ್ತೇಜನ ನೀಡುವಂತೆ ನ್ಯಾಕ್ ಸಲಹೆ ಮೇರೆಗೆ ಕೆಲವು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ನವೀನ್‌ಕುಮಾರ್, ಶೈಕ್ಷಣಿಕ ಡೀನ್ ಪ್ರೊ.ರಾಮನಾಥಂ ನಾಯ್ಡು, ಪರೀಕ್ಷಾಂಗ ಕುಲಸಚಿವ ಪ್ರೊ.ಆನಂದಕುಮಾರ್, ಹಣಕಾಸು ಅಧಿಕಾರಿ ಪ್ರೊ.ನಿರಂಜನ ರಾವ್, ಪ್ರವೇಶಾತಿ ವಿಭಾಗದ ನಿರ್ದೇಶಕ ಎಂ.ನಂದೀಶ್ ಇನ್ನಿತರರಿದ್ದರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿ ಗೃಹದಲ್ಲಿ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶೇಷ ಹೃದಯ ತಪಾಸಣಾ ಪ್ಯಾಕೇಜ್ ಸೌಲಭ್ಯ

ಮೈಸೂರು, ಆ.1(ಜಿಎ)– ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ವಿಶೇಷ ಹೃದಯ ತಪಾಸಣಾ ಪ್ಯಾಕೇಜ್ ಸೌಲಭ್ಯ ಆರಂಭಿಸಿದೆ ಎಂದು ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಹಾಸನದಲ್ಲಿ ಹೃದಯಾಘಾತದಿಂದ ಸಂಭವಿಸಿದೆ ಎನ್ನಲಾದ ಸರಣಿ ಸಾವುಗಳ ಬಳಿಕ ಜನರಲ್ಲಿ ಹೃದಯ ಆರೋಗ್ಯದ ಬಗ್ಗೆ ಆತಂಕ, ಕಾಳಜಿ ಹೆಚ್ಚಾಗುತ್ತಿದೆ. ಹೀಗಾಗಿ ಹೃದಯಾಘಾತಕ್ಕೆ ಒಳಗಾಗುವ ಸಾಧ್ಯತೆ, ಸದ್ಯದ ಆರೋಗ್ಯ ಪರಿಸ್ಥಿತಿ ಕುರಿತಂತೆ ಕೈಗೆಟುಕುವ ದರದಲ್ಲಿ ಜೆಎಸ್‌ಎಸ್ ಆಸ್ಪತ್ರೆ ವಿಶೇಷ ಹೃದಯ ತಪಾಸಣಾ ಪ್ಯಾಕೇಜ್ ಸೌಲಭ್ಯ ಕಲ್ಪಿಸಿದೆ ಎಂದರು.

150 ರೂ. ಪ್ಯಾಕೇಜ್‌ನಲ್ಲಿ ನೋಂದಣಿ, ಬಿಪಿ, ಆರ್‌ಬಿಎಸ್/ಸಿಬಿಜಿ, ಇಸಿಜಿ, ತಜ್ಞ ವೈದ್ಯರಿಂದ ತಪಾಸಣೆ, 400 ರೂ, ಪ್ಯಾಕೇಜ್‌ನಲ್ಲಿ ನೋಂದಣಿ, ಬಿಪಿ. ಆರ್‌ಬಿಎಸ್/ಸಿಬಿಜಿ, ಇಸಿಜಿ, ಇಕೋ ಸ್ಕ್ರೀನಿಂಗ್, ತಜ್ಞ ವೈದ್ಯರ ತಪಾಸಣೆ, 999 ರೂ., ಪ್ಯಾಕೇಜ್‌ನಲ್ಲಿ ನೋಂದಣಿ, ಬಿಪಿ. ಆರ್‌ಬಿಎಸ್/ಸಿಬಿಜಿ, ಇಕೋ ಸ್ಕ್ರೀನಿಂಗ್, ಟಿಎಂಟಿ, ತಜ್ಞ ವೈದ್ಯರ ತಪಾಸಣೆ ಇರಲಿವೆ ಎಂದು ಮಾಹಿತಿ ನೀಡಿದರು. ಮೈಸೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಜನತೆ ಇದರ ಪ್ರಯೋಜನ ಪಡೆಯಬಹುದಾಗಿದೆ. ಇದರಿಂದಾಗಿ ತಮ್ಮ ಹೃದಯ ಆರೋಗ್ಯ ಪರಿಸ್ಥಿತಿ, ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮ, ಚಿಕಿತ್ಸೆಗಳ ಮಾಹಿತಿ ದೊರೆಯಲಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ವೈದ್ಯರಾದ ಡಾ. ಸುನಿಲ್‌ಕುಮಾರ್, ಡಾ. ಮಂಜಪ್ಪ ಉಪಸ್ಥಿತರಿದ್ದರು.

ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬ



ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವತಿಯಿಂದ ದಿವಂಗತ ಆರ್.ಧ್ರುವನಾರಾಯಣ್ ಅವರ ಹುಟ್ಟುಹಬ್ಬದ ಪ್ರಯುಕ್ತ ಮೈಸೂರು ತಾಲೂಕು ಶ್ರೀರಾಂಪುರ ನವಚೇತನ ಬಸವೇಶ್ವರ ಟ್ರಸ್ಟ್ ವಿಶೇಷ ಮಕ್ಕಳ ಶಾಲೆಯಲ್ಲಿ ಮಕ್ಕಳಿಗೆ ನೋಟ್ ಬುಕ್ಸ್ ಮತ್ತು ಹಣ್ಣು ಹಂಪಲು ವಿತರಣೆ ಮಾಡಲಾಯಿತು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಕೆಪಿಸಿಸಿ ಕಾರ್ಯದರ್ಶಿ ಎನ್.ಭಾಸ್ಕರ್, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮಾವಿನಹಳ್ಳಿ ಸಿ.ರವಿ, ಕಾಂಗ್ರೆಸ್ ಮುಖಂಡರಾದ ಕೆ. ಮುರುಳಿ, ಕುಮಾರ್, ಅನಂತ್‌ನಾಗ್, ಸದಾಶಿವ, ದಿನೇಶ್ ಕೋಟೆ, ರಾಜಶೇಖರ ಮೂರ್ತಿ, ಸಿದ್ದಯ್ಯ, ಸತೀಶ್, ಶಿವು, ರವಿಶಂಕರ್ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಆ.1– ಆ.2 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಮಾದರಿ ಗ್ರಾಮ ಯೋಜನೆ ಕಾಮಗಾರಿ ನಿಮಿತ್ತ ಮೆಲ್ಲಹಳ್ಳಿ, ಹಾರೋಹಳ್ಳಿ, ಶಿವಪುರ, ಲಕ್ಷ್ಮೀಪುರ, ಹಳ್ಳಿಕೆರೆಹುಂಡಿ, ಬನ್ನೂರು ಮುಖ್ಯ ರಸ್ತೆ, ಎಟಿಎಂಇ ಕಾಲೇಜು ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ವರದಕ್ಷಿಣೆ ಕಿರುಕುಳದಿಂದ ಗೃಹಿಣಿ ಆತ್ಮಹತ್ಯೆ: ಪತಿ, ಅತ್ತೆ, ನಾದಿನಿಗೆ ಜೈಲು ಶಿಕ್ಷೆ

ಮೈಸೂರು, ಆ.1–ವರದಕ್ಷಿಣೆ ಕಿರುಕುಳ ನೀಡಿ ಗೃಹಿಣಿ ಆತ್ಮಹತ್ಯೆಗೆ ಕಾರಣರಾದ ಪತಿ, ಅತ್ತೆ ಹಾಗೂ ನಾದಿನಿಗೆ ಜೈಲು ಶಿಕ್ಷೆ ವಿಧಿಸಿ ಮೈಸೂರಿನ ಐದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ಎನ್.ರೂಪಾ ತೀರ್ಪು ನೀಡಿದ್ದಾರೆ.

ಶಾರದಾದೇವಿ ನಗರದ ಗೌತಮ್, ಆತನ ತಾಯಿ ಕುಶಾಲ ಕುಮಾರಿ, ಸಹೋದರಿ ಸ್ವಪ್ನ ಶಿಕ್ಷೆಗೆ ಗುರಿಯಾದವರಾಗಿದ್ದು, ಗೌತಮ್‌ಗೆ 10 ವರ್ಷ ಕಠಿಣ ಶಿಕ್ಷೆ ಹಾಗೂ 2.25 ಲಕ್ಷ ರೂ. ದಂಡ, ಕುಶಾಲ ಕುಮಾರಿ ಮತ್ತು ಸ್ವಪ್ನ ಅವರಿಗೆ ತಲಾ 7 ವರ್ಷ ಕಠಿಣ ಶಿಕ್ಷೆ ಮತ್ತು ತಲಾ 1.75 ಲಕ್ಷ ರೂ. ದಂಡ ವಿಧಿಸಲಾಗಿದೆ.

ವಿವರ: ಶಾರದಾದೇವಿ ನಗರದ ಗೌತಮ್ ರಾಜೇಂದ್ರ ನಗರ ನಿವಾಸಿಗಳಾದ ವಿಶ್ವೇಶ್ವರ ರಾವ್ ಮತ್ತು ಸುಕನ್ಯಾ ಬಾಯಿ ದಂಪತಿ ಪುತ್ರಿ ಮಹಾಲಕ್ಷ್ಮಿ ಅಲಿಯಾಸ್ ಸೋನಿ ಅವರನ್ನು 2011ರ ಅಕ್ಟೋಬರ್ 19ರಂದು ವಿವಾಹವಾಗಿದ್ದ. ಮದುವೆ ಸಂದರ್ಭದಲ್ಲಿ ಆತನಿಗೆ 10 ಸಾವಿರ ರೂ. ನಗದು, 12 ಗ್ರಾಂ ತೂಕದ ಚಿನ್ನದ ಸರ, ಅರ್ಧ ಕೆ.ಜಿ. ಬೆಳ್ಳಿ ದೀಪ ಹಾಗೂ ಇತರ ಬೆಳ್ಳಿ ಪದಾರ್ಥಗಳನ್ನು ವರದಕ್ಷಿಣೆಯಾಗಿ ನೀಡಲಾಗಿತ್ತು.

ಗೌತಮ್ ಪತ್ನಿ ಮಹಾಲಕ್ಷ್ಮಿ ಅವರಿಗೆ ಅವರ ಅಜ್ಜ–ಅಜ್ಜಿ ಮನೆಯೊಂದನ್ನು ಬರೆದುಕೊಟ್ಟಿದ್ದರು. ಈ ಮನೆಯನ್ನು ತಮ್ಮ ಹೆಸರಿಗೆ ಬರೆದುಕೊಡುವಂತೆ ಪತಿ ಗೌತಮ್ ಅತ್ತೆ ಕುಶಾಲಕುಮಾರಿ, ನಾದಿನಿ ಸ್ವಪ್ನ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿದ ಪರಿಣಾಮ ಮಹಾಲಕ್ಷ್ಮಿ ಅವರು 2013ರ ಆಗಸ್ಟ್ 17ರಂದು ಪತಿಯ ಶಾರದಾದೇವಿನಗರದ ಮನೆಯಲ್ಲಿ ಸೀಲಿಂಗ್ ಫ್ಯಾನ್‌ಗೆ ವೇಲ್‌ನಿಂದ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದರು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಅಂದಿನ ಎಸಿಪಿ ಬಿ.ಟಿ.ಕವಿತಾ ಕುಮಾರಿ ಅವರು ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಮೂವರಿಗೂ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಬಿ.ಇ.ಯೋಗೇಶ್ವರ ವಾದ ಮಂಡಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.08.2025 ಶನಿವಾರ, ಮಳೆ ನಕ್ಷತ್ರ: ಪುಷ್ಯ, 20.07.2025 ರಿಂದ 2.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ– ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಿ. ಪುಷ್ಪಲತಾ, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ– ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ– ಜಿ. ಶಾಂತಕುಮಾರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್ ವಾಣಿ – ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ–ಗುಂಡ್ಲುಪೇಟೆ ತಾಲೂಕು, ತೆರಕಣಾಂಬಿ ಹೋಬಳಿ ವಡ್ಡಗೆರೆಯ ಕೃಷಿಕ ದಂಪತಿ ಚಿನ್ನಸ್ವಾಮಿ ವಡ್ಡಗೆರೆ ಮತ್ತು ಕೆ.ಎಸ್. ಗಿರಿಕನ್ಯೆ, ಪ್ರಸ್ತುತಿ: ಎನ್. ಕೇಶವ ಮೂರ್ತಿ, 8.00 ಇಸ್ ಸಪ್ತಾಹ್ ಮೆ ಸಂಸದ್, 8.15 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸ್ಮಿತ್ ತಿವಾರಿ – ಸರೋದ್ ವಾದನ

■ **ಮಹಾಬೋಧಿ ಶಾಲೆ :** ರಾಜ್ಯ ಮಟ್ಟದ ಅಂತರ ಶಾಲಾ ಕರಾಟೆ ಚಾಂಪಿಯನ್‌ಶಿಪ್, ಸಾನ್ನಿಧ್ಯ : ಭಿಕ್ಕು ಶೋಭನಾ ಬಂತೇಜಿ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಗೌರವ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಡಿಡಿಪಿಐ ಎಸ್.ಟಿ. ಜವರೇಗೌಡ, ಬಸವರಾಜು, ಸ್ಥಳ: ಮಹಾಬೋಧಿ ಶಾಲೆ ಸಮುದಾಯ ಭವನ, ಬೆಳಗ್ಗೆ 8.30ಕ್ಕೆ.

■ **ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಕರು ಮಾರಿಯಮ್ಮನವರ ದೇವಸ್ಥಾನ ಟ್ರಸ್ಟ್ :** 95ನೇ ವರ್ಷದ ವಿಶೇಷ ಕರಗ ಮಹೋತ್ಸವ, ಬೆಳಗ್ಗೆ 8 ಗಂಟೆಗೆ ವಿದ್ಯಾರಣ್ಯಪುರಂ ಮುಖ್ಯ ರಸ್ತೆಗಳಲ್ಲಿ ಅಮ್ಮನವರ ಕರಗ ಮಹೋತ್ಸವ, ಸಂಜೆ 7 ಗಂಟೆಗೆ ವಿವಿಧ ವಿನೋದಾವಳಿಗಳಿಂದ ಹಾಗೂ ಜಾನಪದ ಕಲಾತಂಡಗಳಿಂದ ನೃತ್ಯಗಳೊಡನೆ ಹೂವಿನ ಮತ್ತು ವಿದ್ಯುತ್ ದೀಪಗಳಿಂದ ಅಲಂಕೃತವಾದ ಅಮ್ಮನವರ ಕರಗ ಮಂಟಪ ಮೆರವಣಿಗೆ, ಸ್ಥಳ: ದೇವಸ್ಥಾನ, ವಿದ್ಯಾರಣ್ಯಪುರಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಅರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ ಚಿಕಿತ್ಸಾ ಶಿಬಿರ, ಕೊಬ್ಬಿನ ಗಂಟು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ದೀಕ್ಷಾರಂಭ, ಪುನಶ್ಚೇತನ ಕಾರ್ಯಕ್ರಮ, ಉದ್ಘಾಟನೆ : ಹೈಕೋರ್ಟ್ ನ್ಯಾಯಾಮೂರ್ತಿ ಶ್ರೀಶಾನಂದ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಅಧ್ಯಕ್ಷ ಎಸ್.ಎಸ್. ಮಿತ್ತಲಕೋಡ್, ಅಧ್ಯಕ್ಷತೆ : ಜೆಎಸ್‌ಎಸ್ ಕಾನೂನು ಕಾಲೇಜು ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ಉಪಸ್ಥಿತರು : ಜೆಎಸ್‌ಎಸ್ ಕಾನೂನು ಕಾಲೇಜು ಪ್ರಿನ್ಸಿಪಾಲ್ ಡಾ. ಎನ್. ವಾಣಿಶ್ರೀ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಶರಾವಿ ಫೌಂಡೇಷನ್ :** ಮೂಳೆ ಮತ್ತು ಸಂಧಿಗಳ ಸಮಸ್ಯೆಗೆ ಉಚಿತ ತಪಾಸಣಾ ಶಿಬಿರ, ಸ್ಥಳ: ಭವೇದ್ ಆಯುರ್ವೇದ, ಗೋಕುಲಂ 3ನೇ ಹಂತ, ಬೆಳಗ್ಗೆ 9 ರಿಂದ.

■ **ಕೇನ್ಸ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ :** ಸಂಸ್ಥಾಪನಾ ದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರ, ಸ್ಥಳ: ಕೇನ್ಸ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಬೆಳಗ್ಗೆ 9 ರಿಂದ.

■ **ಸೇಂಟ್ ಜೋಸೆಫ್ ಸೆಂಟ್ರಲ್ ಶಾಲೆ :** ಬೆಳಗ್ಗೆ 9ಕ್ಕೆ ಅಂತರ ಶಾಲಾ ಥ್ರೋಬಾಲ್ ಮತ್ತು ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿ, ಉದ್ಘಾಟನೆ : ರಾಷ್ಟ್ರೀಯ ಟೇಬಲ್ ಟೆನಿಸ್ ಮಾಜಿ ಆಟಗಾರ ಶ್ರೀನಿವಾಸ್, ಉಪಸ್ಥಿತರು : ಎಂಡಿಇಎಸ್ ಕಾರ್ಯದರ್ಶಿ ರೆವರೆಂಟ್ ಫಾದರ್ ಎಡ್ವರ್ಡ್ ವಿಲಿಯಂ ಸಲ್ಡಾನ, ಸಂಜೆ 4.30ಕ್ಕೆ ಬಹುಮಾನ ವಿತರಣಾ ಸಮಾರಂಭ, ಸ್ಥಳ: ಶಾಲೆ ಆವರಣ.

■ **ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ :** ನೂತನ ಅಧ್ಯಕ್ಷ ಎಸ್.ರಘುನಾಥ್ ಅವರಿಗೆ ಅಭಿನಂದನಾ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್.ಶ್ರೀವತ್ಸ, ಕರ್ನಾಟಕ ಬ್ರಾಹ್ಮಣ ಮಂಡಳಿ ಅಧ್ಯಕ್ಷ ಆಸಗೋಡು ಜಯಸಿಂಹ, ಮಾಜಿ ಸಚಿವ ಎಸ್.ಎ.ರಾಮದಾಸ್, ಮಹಾಸಭಾದ ಉಪಾಧ್ಯಕ್ಷ ಆರ್.ಲಕ್ಷ್ಮೀಕಾಂತ, ಸ್ಥಳ: ನಿತ್ಯಾನಂದ ಕಲ್ಯಾಣ ಮಂಟಪ, ವಿದ್ಯಾರಣ್ಯಪುರಂ, ಬೆಳಗ್ಗೆ 9.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ :** ಸಂವಾದ ಕಾರ್ಯಕ್ರಮ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ ಎನ್.ಕೆ. ಲೋಕನಾಥ್, ಉದ್ಘಾಟನೆ : ಡಾ. ಶಿಖಾ ಧವನ್, ಗೌರವ ಅತಿಥಿಗಳು : ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಸ್ಥಳ : ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 9.45ಕ್ಕೆ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ :** ವಿದ್ಯಾರ್ಥಿ ಸಂಘ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಪ್ರೊ. ಸುತ್ತೂರು ಎಸ್. ಮಾಲಿನಿ, ಗೌರವ ಅತಿಥಿಗಳು : ಕಾಲೇಜು ಪ್ರಿನ್ಸಿಪಾಲ್ ಪ್ರೊ. ನಯನಕುಮಾರಿ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಪ್ರೊ. ಎನ್. ಭಾರತಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಶ್ರೀ ಅರಳಿಕಟ್ಟೆ ಮಹಾಗಣಪತಿ ಮತ್ತು ಕನಕ ಸಮುದಾಯ ಭವನ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ :** ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಕನಕಗಿರಿ ಸಮುದಾಯ ಭವನ, ಬೆಳಗ್ಗೆ 10 ರಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಆಟೋಮೋಟಿವ್ ಆಕ್ಸೆಲ್ ಲಿಮಿಟೆಡ್ ಅಧ್ಯಕ್ಷ ನಾಗರಾಜ ಗರ್ಗೇಶ್ವರಿ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಜೆಎಸ್‌ಎಸ್ ಮಹಿಳಾ ಶಿಕ್ಷಣ ಸಂಸ್ಥೆಗಳ ವಸತಿ ನಿಲಯ :** ಮಹಿಳಾ ವಿದ್ಯಾರ್ಥಿ ನಿಲಯಗಳ ಪದವಿಪೂರ್ವ ಮತ್ತು ಪದವಿ ವಿದ್ಯಾರ್ಥಿನಿಯರಿಗೆ ಚರ್ಚಾ ಸ್ಪರ್ಧೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ಮ.ಗು. ಸದಾನಂದಯ್ಯ, ಉಪಸ್ಥಿತರು : ಎಸ್. ಶಿವಕುಮಾರಸ್ವಾಮಿ, ಅಧ್ಯಕ್ಷತೆ : ಮುಖ್ಯ ನಿಲಯಪಾಲಕರಾದ ಶ್ರೀಮತಿ ಮಮತಾ ಸುರೇಶ್, ಎಸ್. ದಿವ್ಯಕುಮಾರಿ, ಸ್ಥಳ: ಮಂತ್ರ ಮಹರ್ಷಿ ಸಭಾ ಭವನ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಡಾ. ವಿಜಯಲಕ್ಷ್ಮಿ ಬಸವರಾಜ್ ಚಾರಿಟಬಲ್ ಸೊಸೈಟಿ :** ಹೊಯ್ಸಳ ಶಿಲ್ಪ ಕಲೆಯೊಳಗ ಪಡಿಮೂಡಿ ಬಂದ ನೃತ್ಯ ನಾದರಂಗ ಕುರಿತು ಪ್ರೊ. ರೋಹಿತ್ ಈಶ್ವರ್ ಅವರಿಂದ ಉಪನ್ಯಾಸ ಕಾರ್ಯಕ್ರಮ, ಸ್ಥಳ: ಸೆಮಿನಾರ್ ಹಾಲ್, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಬೆಳಗ್ಗೆ 11ಕ್ಕೆ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಪೂಜ್ಯಶ್ರೀ ಗುರಿಕಾರ್ ಮರಿಮಲ್ಲಪ್ಪನವರ ಸಂಸ್ಮರಣೋತ್ಸವ, ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು : ವಿಶ್ರಾಂತ ಮುಖ್ಯ ಅಭಿಯಂತರ ಶಂಕರ್ ದೇವನೂರು, ಉಪಸ್ಥಿತರು : ಮರಿಮಲ್ಲಪ್ಪ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಡಾ. ಅನಿಲ್ ಎಸ್. ಕರಭೀಮಗೋಳ್, ಶೈಕ್ಷಣಾಧಿಕಾರಿ ಶ್ರೀಮತಿ ಮಂಗಳಾ ಮುದ್ದುಮಾದಪ್ಪ, ಸ್ಥಳ: ಕಾಲೇಜು ಒಳಾಂಗಣ, ಬೆಳಗ್ಗೆ 11ಕ್ಕೆ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಡಾ. ಯಶೋಧರ ಕೆ. ವಿರಚಿತ ವಿಚಾರಧಾರೆ ಪುಸ್ತಕ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಗ್ರಂಥ ಬಿಡುಗಡೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಕೃತಿ ಕುರಿತು : ನಿವೃತ್ತ ಪ್ರಿನ್ಸಿಪಾಲ್ ಸಿ.ಜಿ. ವೆಂಕಟರಮಣಶೆಟ್ಟಿ, ಸಾಹಿತಿ ಶ್ರೀ ಮಾಧುರಿ ಶ್ರೀರಾವ್, ಉಪಸ್ಥಿತರು : ಕೃತಿಕಾರರಾದ ಡಾ. ಕೆ. ಯಶೋಧರ, ಡಾ. ಎಂ.ಆರ್. ಜಯಪ್ರಕಾಶ್, ಡಾ. ಮಹೇಶ್ ದಳಪತಿ, ಸ್ಥಳ: ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಮಹಾರಾಜ ಕಾಲೇಜು :** 2025ನೇ ಸಾಲಿನ ಶೈಕ್ಷಣಿಕ ವರ್ಷದ ಕನ್ನಡ ಪಿಎಚ್.ಡಿ. ಕೋರ್ಸ್‌ವರ್ಕ್‌ನ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ. ಲೋಲಾಕ್ಷಿ, ಅಧ್ಯಕ್ಷತೆ : ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಹೆಚ್.ಸಿ. ದೇವರಾಜೇಗೌಡ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ಕೆ. ತಿಮ್ಮಯ್ಯ, ಪ್ರೊ. ಡಿ. ವಿಜಯಲಕ್ಷ್ಮಿ, ಸ್ಥಳ: ಪಿಎಚ್.ಡಿ. ಸಂಶೋಧಕರ ಕೊಠಡಿ, ಮಹಾರಾಜ ಕಾಲೇಜು, ಬೆಳಗ್ಗೆ 11.30ಕ್ಕೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಮೈಸೂರು ಘಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನ 'ಗೀತೋತ್ಸವ–2025', ಬೆಳಗ್ಗೆ 10 ಗಂಟೆಗೆ ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸ್ವಾಗತ : ಜಿಲ್ಲಾಧಿಕಾರಿ ಡಾ.ಲಕ್ಷ್ಮೀಕಾಂತ ರೆಡ್ಡಿ, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ, ಕವಿ ನಗರ ಶ್ರೀನಿವಾಸ ಉಡುಪ ಅವರು ಸಮ್ಮೇಳನದ ಅಧ್ಯಕ್ಷರ ಅಧಿಕಾರ ಸ್ವೀಕಾರ, ಓವಲ್ ಮೈದಾನದಿಂದ ಕಲಾಮಂದಿರದವರೆಗೆ ಬೆಳ್ಳಿ ರಥದಲ್ಲಿ ಸಮ್ಮೇಳನಾಧ್ಯಕ್ಷರ ಮೆರವಣಿಗೆ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ತನ್ವೀರ್‌ಸೇಠ್, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ, ಸಿ.ಎನ್.ಮಂಜೇಗೌಡ, ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅವರಿಂದ ಪ್ರೇಮಕವಿ ಬಿ.ಆರ್. ಲಕ್ಷ್ಮಣ ರಾವ್, ಹಿರಿಯ ಯಕ್ಷಗಾನ ಕಲಾವಿದ ಡಾ.ನಾ.ದಾಮೋದರ ಶೆಟ್ಟಿ ಅವರಿಗೆ 'ಕಾವ್ಯಶ್ರೀ ಪ್ರಶಸ್ತಿ', ರತ್ನಮಾಲಾ ಪ್ರಕಾಶ್ ಮತ್ತು ಕೆ.ಎಸ್.ಸುರೇಖಾ ಅವರಿಗೆ 'ಭಾವಶ್ರೀ ಪ್ರಶಸ್ತಿ' ಪ್ರದಾನ, ಮಧ್ಯಾಹ್ನ 12ಗಂಟೆಗೆ ಮೈಸೂರಿನ ಕಲಾವಿದರಿಂದ ಭಾವ ಕುಸುಮ ಸಮೂಹ ಗಾಯನ, 12.30ಕ್ಕೆ ಶಿವಮೊಗ್ಗ, ದಾವಣಗೆರೆ, ಶಿರಸಿ, ಚಾಮರಾಜನಗರ, ಕಾಸರಗೋಡು, ಮಂಡ್ಯ, ಹಾಸನದ ಕಲಾವಿದರಿಂದ ಭಾವಾಂಜಲಿ ಸಮೂಹ ಗಾಯನ, ಮಧ್ಯಾಹ್ನ 3ಕ್ಕೆ ವೈ.ಕೆ. ಮುದ್ದುಕೃಷ್ಣ, ಅಪ್ಪಗೆರೆ ತಿಮ್ಮರಾಜು, ಡೇವಿಡ್ ಮಂಡ್ಯ, ಡಾ.ರಾಮೇಶ್ವರಪ್ಪ, ಅಮ್ಮ ರಾಮಚಂದ್ರ, ಶುಭಾ ರಾಘವೇಂದ್ರ, ಸಿ.ಎಂ.ನರಸಿಂಹಮೂರ್ತಿ, ಸುನೀತಾ ಮುರಳಿ, ಎನ್.ಬೆಟ್ಟೇಗೌಡ ಅವರು ತತ್ವಪದ ಗಾಯನ, ಸಂಜೆ 4 ಗಂಟೆಗೆ ಕವಿಯ ನೋಡಿ ಕವಿತೆ ಕೇಳಿ ಕಾರ್ಯಕ್ರಮದಲ್ಲಿ ನಾಗೇಶ್ ಕಂದೇಗಾಲ, ಚಾಂದನಿ ಗರ್ತಿಕೆರೆ, ಪ್ರಮೋದ್ ಸಪ್ರೆ, ಆನಂದ ಮೂದಲಗೆರೆ, ಶ್ರೀರಕ್ಷ ಅರವಿಂದ್, ಅಜಿತ್ ಕಿಕ್ಕೇರಿ, ಭಾಗ್ಯಶ್ರೀ ಗೌಡ, ರಶ್ಮಿ ಚಿಕ್ಕಮಗಳೂರು, ಶ್ರುತಿ ರಾವ್ ಕವಿತೆ ವಾಚನ, ಸಂಜೆ 5ಕ್ಕೆ ಕವಿ ಚಿತ್ರಗೀತೆಗಳು, ಸಂಜೆ 6 ಗಂಟೆಗೆ ಸಮ್ಮೇಳನಾಧ್ಯಕ್ಷರ ಗಾಯನದೊಂದಿಗೆ ಗೀತ ಸಂಗೀತ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಥಳ: ಕಲಾಮಂದಿರ.

■ **ಸುಶಿರ, ಶ್ರೀ ವಿ. ದೇಶಿಕಾಚಾರ್ ಅಕಾಡೆಮಿ ಆಫ್ ಮ್ಯೂಸಿಕ್ :** ವಾರ್ಷಿಕ ಸಂಗೀತ ಸಂಭ್ರಮ, ವಿದ್ವಾನ್ ಅಮಿತ್ ನಾಡಿಗ್ ಅವರಿಂದ ಕೊಳಲು ವಾದನ, ವಿದ್ವಾನ್ ಎಸ್. ಜನಾರ್ಧನ್–ಮಯೋಲಿನ್, ವಿದ್ವಾನ್ ಬಿ.ಸಿ. ಮಂಜುನಾಥ್–ಮೃದಂಗ, ವಿದ್ವಾನ್ ಸ್ಕಂದ ಮಂಜುನಾಥ್–ಘಟಂ, ಸ್ಥಳ: ಸುಶಿರ ಸಭಾಂಗಣ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠ :** ಚಾತುರ್ಮಾಸ್ಯದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದುಷಿ ಹರಿಣಿ ರಮೇಶ್ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಪರಕಾಲ ಮಠ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ – ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಇಂಗ್ಲೀಷ್‌ನಲ್ಲಿ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ವಾಚನ : ವಿಶ್ರಾಂತ ಕಾರ್ಯಪಾಲಕ ಅಭಿಯಂತರ ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಪರಿವರ್ತನ ರಂಗ ಸಮಾಜ :** ಪರಿವರ್ತನ ರಂಗ ಸಮಾಜದ ಕಲಾವಿದರಿಂದ ರವೀಂದ್ರ ಭಟ್ ಅವರ ಕೃತಿ ಆಧಾರಿತ ಮೂರನೇ ಕಿವಿ ನಾಟಕ ಪ್ರದರ್ಶನ, ನಿರ್ದೇಶನ : ಪ್ರೊ. ಎಸ್.ಆರ್. ರಮೇಶ್, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 2 ಶನಿವಾರ 2025

₹4

ಸಂಪುಟ: 46 | ಸಂಚಿಕೆ: 107 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ ನಾನು ದಪ್ಪಗೆ ಕಾಣ್ತೇನಾ?
ಪತಿ : ಇಲ್ಲ ನೀನು ತೆಳ್ಳಗೆ ಲಲಿತ ಲತಾಂಗಿ ತರ ಇದ್ದೀಯ ಕಣೇ.
ಪತ್ನಿ : ಹಾಗಾದ್ರೆ ನನ್ನ ಎತ್ತಿಕೊಂಡು ಫ್ರಿಜ್ ಹತ್ರ ಬಿಡಿ.
ಪತಿ : ಬೇಡ ಫ್ರಿಜ್ಜನ್ನೇ ನಿನ್ನ ಬಳಿಗೆ ತರ್ತೀನಿ.
ಸುಮ್ನಿರು ಜಾಸ್ತಿ ರಿಸ್ಕ್ ತಗಳೋದು ಬೇಡ!

ಮೈಸೂರು ಮಿತ್ರ

ಶನಿವಾರ, 2 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಆತ್ಮ ವಿಶ್ವಾಸ ಒಂದು ಮಹಾ ಆಯುಧ. ಅದು ಎಲ್ಲಾ ಸಂದರ್ಭದಲ್ಲಿ ಜಯ ತಂದು ಕೊಡದಿರಬಹುದು. ಆದರೆ ಯಾವುದೇ ಸವಾಲನ್ನು ಎದುರಿಸಲು ಧೈರ್ಯ ತುಂಬುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇಲಿ ಸಿಕ್ಕರೆ ಬೆಕ್ಕು ಆಗುವುದು ಹುಲಿ.

ನಿಮ್ಮ ಪತ್ರಗಳು

■ ಕೋಟೆ, ಸರಗೂರಿಗೆ ಬೇಕಾಗಿರುವುದು ಕೈಗಾರಿಕೆಗಳು, ರೆಸಾರ್ಟ್‌ಗಳಲ್ಲ...

ಮಾನ್ಯರೆ,

ಮೈಸೂರು ಜಿಲ್ಲೆಯ ಕೋಟೆ ಮತ್ತು ಸರಗೂರು ತಾಲೂಕುಗಳಲ್ಲಿ ಕೈಗಾರಿಕೆ ಸ್ಥಾಪಿಸುವ ಮೂಲಕ ಯುವ ಜನತೆಗೆ ಉದ್ಯೋಗ ಕಲ್ಪಿಸಬೇಕು ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣನವರು ಬೆಂಗಳೂರಿನಲ್ಲಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರಿಗೆ ಮನವಿ ಮಾಡಿದ್ದಾರೆ. ಇದು ಸ್ವಾಗತಾರ್ಹ.

ಹಿಂದುಳಿದ ತಾಲೂಕು ಎಂದು ನಂಜುಂಡಪ್ಪನವರ ವರದಿಯಲ್ಲಿ ಗುರುತಿಸಲ್ಪಟ್ಟಿದ್ದರೂ ಅದರ ನಿವಾರಣೆಗೆ ಇಷ್ಟು ವರ್ಷಗಳಾದರೂ ಸರ್ಕಾರದಿಂದ ಯಾವ ಪ್ರಯತ್ನವೂ ನಡೆದಿಲ್ಲ. ಇದು ವಿಷಾದನೀಯ. 3 ಪ್ರಮುಖ ಆಣೆಕಟ್ಟೆಗಳಿದ್ದರೂ 2 ಪ್ರಮುಖ ಆಣೆಕಟ್ಟುಗಳ ಪ್ರಯೋಜನ ದೊರಕುತ್ತಿರುವುದು, ನಂಜನಗೂಡು, ನರಸೀಪುರ, ಕೊಳ್ಳೇಗಾಲ ತಾಲೂಕುಗಳಿಗೆ ಮಾತ್ರ. ನೀರಿನ ಲಭ್ಯತೆ ಇದ್ದರೂ ಯಾವುದೇ ಕೈಗಾರಿಕೆಗಳು ಸ್ಥಾಪನೆಯಾಗಿಲ್ಲ. ಬದಲಾಗಿ ನಾಯಿ ಕೊಡೆಗಳಂತೆ ಪ್ರಭಾವಿಗಳ ರೆಸಾರ್ಟ್‌ಗಳು ತಲೆ ಎತ್ತುತ್ತಿವೆ. ಕಬಿನಿ ಹಿನ್ನೀರಿನ ಉದ್ದಕ್ಕೂ ಅನೇಕ ರೆಸಾರ್ಟ್‌ಗಳು ತಲೆ ಎತ್ತಿವೆ. ಮುಂದೆ ಹಿನ್ನೀರಿನ ಉದ್ದಕ್ಕೂ ಇನ್ನೂ ಅನೇಕ ರೆಸಾರ್ಟ್‌ಗಳು ತಲೆ ಎತ್ತಬಹುದು.

ಹಣವಂತರು, ವಿಲಾಸಿಗಳು ಮೋಜು, ಮಸ್ತಿ ಮಾಡಲು ಬೆಂಗಳೂರು, ಹೊರ ರಾಜ್ಯಗಳಿಂದ ಬರುತ್ತಾರೆ. ಆದರೆ ಸ್ಥಳೀಯ ಜನರಿಗೆ ರೆಸಾರ್ಟ್‌ಗಳಿಂದ ಯಾವ ಪ್ರಯೋಜನವೂ ಇಲ್ಲ.ಬದಲಾಗಿ ಇಂತಹ ರೆಸಾರ್ಟ್‌ಗಳಿಂದ ಪರಿಸರಕ್ಕೆ ಹಾನಿಯಾಗುತ್ತದೆ. ರೆಸಾರ್ಟ್‌ಗಳು ಮೋಜು ಮಸ್ತಿಯ ಇನ್ನೊಂದು ಮುಖ ಮಷ್ಟೇ. ಇಂತಹ ರೆಸಾರ್ಟ್‌ಗಳಿಗೆ ಅನುಮತಿ ಕೊಡುವ ಬದಲು ಸರ್ಕಾರ ಕೈಗಾರಿಕೆಗಳನ್ನು ಸ್ಥಾಪಿಸಲು ಮನಸ್ಸು ಮಾಡಬೇಕು. ಅಂದ ಹಾಗೆ, ಕೋಟೆ ಎಂ. ಶಿವಣ್ಣ ನವರು ಎಸ್.ಎಂ.ಕೃಷ್ಣ ಸಂಪುಟದಲ್ಲಿ ಹಣಕಾಸು ರಾಜ್ಯ ಸಚಿವರಾಗಿದ್ದರು. ಆಗ ಅವರು ಕೈಗಾರಿಕೆಗಳನ್ನು "ಕೋಟೆ"ಗೆ ತರುವ ಪ್ರಯತ್ನ ಮಾಡಲಿಲ್ಲವೇಕೆ? ಎನ್ನುವುದು ಕೋಟೆ ಜನರ 'ಕೋಟಿ' ಪ್ರಶ್ನೆಯಾಗಿದೆ!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಸ್ವಚ್ಛತಾ ಕಾರ್ಯ ನಿರ್ವಹಿಸುವ ಪೌರ ಕಾರ್ಮಿಕರು ಪ್ರಶಸ್ತಿ ಸ್ವೀಕರಿಸುವಂತಾಗಲಿ

ಮಾನ್ಯರೆ,

ಈ ವರ್ಷ, ದೇಶದಲ್ಲಿ ನಡೆದ 3 ರಿಂದ 10 ಲಕ್ಷ ಜನಸಂಖ್ಯೆ ಹೊಂದಿರುವ ನಗರಗಳ ವಿಭಾಗದಲ್ಲಿ ಮೈಸೂರು ನಗರ ಮೂರನೇ ಸ್ವಚ್ಛ ನಗರವೆಂದು ಸ್ಥಾನ ಪಡೆದಿರುವುದು ಮೈಸೂರಿನ ಜನತೆ ಸಂತೋಷಪಡುವ ಸಂಗತಿ. ಇದು ಮೈಸೂರು ನಗರಕ್ಕೆ ಕಿರೀಟ ಇದ್ದಂತೆ. ಇದರಿಂದಾಗಿ ಮೈಸೂರು ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ಸಿಗಬಹುದು. ಇದಕ್ಕಾಗಿ ಶ್ರಮಿಸಿದ ಎಲ್ಲಾ ಅಧಿಕಾರಿಗಳು ಹಾಗೂ ಮುಖ್ಯವಾಗಿ ಪೌರ ಕಾರ್ಮಿಕರನ್ನು ಅಭಿನಂದಿಸಬೇಕು.

2015 ಮತ್ತು 2016ರಲ್ಲಿ ಮೈಸೂರು ಮೊದಲ ಸ್ಥಾನ ಗಳಿಸಿತ್ತು. ಇತ್ತೀಚೆಗೆ ಮೈಸೂರು ನಗರ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ. ಸ್ವಚ್ಛತಾ ನಗರವೆಂದ ಮೇಲೆ ಮೈಸೂರು ಇನ್ನೂ ಬೆಳೆಯಬಹುದು. ಈ ಪ್ರಶಸ್ತಿಯನ್ನು ದೆಹಲಿಯಲ್ಲಿ ನಡೆಯುವ ಅದ್ದೂರಿ ಸಮಾರಂಭದಲ್ಲಿ ಸಾಮಾನ್ಯವಾಗಿ ನಗರಪಾಲಿಕೆಯ ಆಯುಕ್ತರು, ನಗರಪಾಲಿಕೆಯ ಮೇಯರ್ ರಾಷ್ಟ್ರಪತಿಯವರಿಂದ ಸ್ವೀಕರಿಸುತ್ತಾರೆ. ಇನ್ನು ಮುಂದೆ ಇವರ ಜೊತೆ ಹಗಲಿರುಳು ಸ್ವಚ್ಛತಾ ಕಾರ್ಯ ನಿರ್ವಹಿಸುವ ಪೌರ ಕಾರ್ಮಿಕರೊಬ್ಬರು ಸ್ವೀಕರಿಸುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಕಳೆಗುಂದುತ್ತಿದೆ ಪಾರಂಪರಿಕ ಕ್ರೀಡೆ ಕುಸ್ತಿ

ಮಾನ್ಯರೆ,

ಮೈಸೂರು ದಸರಾದಲ್ಲಿ ಪಾರಂಪರಿಕ ಕ್ರೀಡೆಯಾದ ದೇಶೀಯ ಕುಸ್ತಿ ಪಂದ್ಯಾವಳಿ ಪ್ರೋತ್ಸಾಹವಿಲ್ಲದೆ ವರ್ಷದಿಂದ ವರ್ಷಕ್ಕೆ ಕಳೆಗುಂದುವತ್ತ ಸಾಗುತ್ತಿದೆ ಎಂದು ಹಿರಿಯ ಪೈಲ್ವಾನರು ಆಕ್ಷೇಪ ವ್ಯಕ್ತಪಡಿಸಿರುವುದು ತುಂಬಾ ವಿಷಾದಕರ ಸಂಗತಿ. ಹುಚ್ಚನ ಮದುವೆಯಲ್ಲಿ ಉಂಡವನೆ ಜಾಣ ಎಂಬ ಮಾತಿದೆ ಅದರಂತೆ ಕೆಲವರು ಬಕಪಕ್ಷಿಗಳಂತೆ ದಸರಾ ಕುಸ್ತಿಗೋಸ್ಕರವೇ ಕಾದುಕುಳಿತು ಪ್ರೋತ್ಸಾಹ ಧನ ನೀಡುವಲ್ಲಿ ತಾರತಮ್ಯ ಮಾಡಿ, ಆನ್‌ಲೈನ್ ಪೇಮೆಂಟ್ ಮಾಡುತ್ತೇವೆ ಎಂದು ಹೇಳಿ ಎಷ್ಟೋ ಪೈಲ್ವಾನರಿಗೆ ಪ್ರೋತ್ಸಾಹ ಧನ ಕಳುಹಿಸಿರುವುದಿಲ್ಲ, ದಸರಾ ಉಪಸಮಿತಿಯು ಮಧ್ಯವರ್ತಿಗಳನ್ನು ಇಟ್ಟುಕೊಂಡು ಜೋಡಿ ಕಟ್ಟುವುದರಿಂದ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದು ಹಿರಿಯ ಪೈಲ್ವಾನ್ ಮಹದೇವು ಅವರು ಬೇಸರ ವ್ಯಕ್ತಪಡಿಸಿರುವುದು ಸ್ವಾಗತಾರ್ಹ. ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣಕ್ಕೆ ಚಾವಣಿ ಇಲ್ಲದೆ ಬಿಸಿಲಿನ ತಾಪ ತಾಳಲಾರದೆ ಹಾಗೂ ಮಳೆ ಬಂದಾಗ ಪ್ರೇಕ್ಷಕರು ಪಡುವ ಕಷ್ಟ ಅಷ್ಟಿಷ್ಟಲ್ಲ, ಮತ್ತು ದಶಕಗಳ ಹಿಂದೆ ಕುಸ್ತಿ ಪಂದ್ಯಾವಳಿಗಳಿಗೆ ವ್ಯಾಪಕ ಪ್ರಚಾರ ಮಾಡಲಾಗುತ್ತಿತ್ತು ಆದರೆ ಇತ್ತೀಚಿನ ದಿನಗಳಲ್ಲಿ ಪ್ರಚಾರವಿಲ್ಲದೆ ನೋಡುಗರ ಸಂಖ್ಯೆ ತುಂಬಾ ಕ್ಷೀಣಿಸುತ್ತಾ ಬಂದಿದೆ. ಇನ್ನೂ ಕಾಲ ಮಿಂಚಿಲ್ಲ. ಈ ವರ್ಷದ ದಸರಾ ಮಹೋತ್ಸವ ಪ್ರಾರಂಭವಾಗಲು ಮೂರು ತಿಂಗಳು ಇರುವುದರಿಂದ ಪ್ರೋತ್ಸಾಹ ಧನ ಹೆಚ್ಚಿಸಿ, ವ್ಯಾಪಕ ಪ್ರಚಾರ ನಡೆಸಿ, ಪಾರದರ್ಶಕತೆಗೆ ಆದ್ಯತೆ ನೀಡಿ ಕುಸ್ತಿ ಕ್ರೀಡೆಯನ್ನು ಉಳಿಸುವುದು ಒಳ್ಳೆಯದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಯಾದವಗಿರಿಯಲ್ಲಿ ರಸ್ತೆ ದುರಸ್ತಿಗೊಳಿಸಿ

ಮಾನ್ಯರೇ,

ಮೈಸೂರಿನ ಯಾದವಗಿರಿ 18ನೇ ವಾರ್ಡ್‌ನಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಹಿಂಭಾಗದ ರಸ್ತೆಯಲ್ಲಿ ಅಂದರೆ ಕನ್ನಡ ವೃತ್ತ ಎಂದು ಹೆಸರು ವಾಸಿಯಾಗಿರುವ ರಸ್ತೆಯ ಉದ್ದಕ್ಕೂ ರಸ್ತೆಗಳು ಹದಗೆಟ್ಟಿವೆ. ಈ ರಸ್ತೆಗಳಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೂ ನೂರಾರು ವಾಹನಗಳು ಸಂಚರಿಸುತ್ತವೆ. ಬೆಳಗ್ಗೆಯಿಂದ ರಾತ್ರಿಯವರೆಗೆ ಹಿರಿಯ ನಾಗರಿಕರು, ಮಕ್ಕಳು, ಯುವಕರು ಸಂಚರಿಸುವ ರಸ್ತೆ ಇದಾಗಿದ್ದು ಸಂಬಂಧಪಟ್ಟವರು ಇದರ ಬಗ್ಗೆ ದಯಮಾಡಿ ಗಮನ ಹರಿಸಿ ರಸ್ತೆಯನ್ನು ಸರಿಪಡಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಜಾಯ್ ಐಸ್ ಕ್ರೀಂ ಕಂಪನಿಯ ಹಿಂಭಾಗದ ರಸ್ತೆಯಲ್ಲಿ ಅಂದರೆ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಸಿಬ್ಬಂದಿಗಳ ವಸತಿ ಗೃಹದ ಎದುರುಗಡೆ ಒಳಚರಂಡಿ ಮೋರಿ (ಡ್ರೈನೇಜ್ ಮೋರಿ) ದುರಸ್ಥಿಯಲ್ಲಿದ್ದು ಸುಮಾರು ಹತ್ತು, ಹದಿನೈದು ದಿನಗಳಿಂದ ಮೋರಿಯ ನೀರು ಹೊರಗಡೆ ನಿಂತಿದ್ದು ಸೊಳ್ಳೆಗಳು ಹೆಚ್ಚಾಗುತ್ತಿದೆ. ವಾಸನೆಯು ಹೆಚ್ಚಾಗಿದೆ. ದಯಮಾಡಿ ಸಂಬಂಧಪಟ್ಟ ಇಲಾಖೆಯವರು ಇತ್ತ ಗಮನಿಸಿ ದುರಸ್ತಿ ಕಾರ್ಯವನ್ನು ಆದಷ್ಟು ಬೇಗ ಮಾಡಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

–ಸಿ.ಎಸ್.ರಾಘವೇಂದ್ರ, ಯಾದವಗಿರಿ ನಿವಾಸಿ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಗೊತ್ತಿದ್ದು ಮಾಡುವ ತಪ್ಪು ಅಪರಾಧಾರ್ಹ!

ನಾವು ನಮ್ಮ ಜೀವಮಾನದಲ್ಲಿ ಹಲವು ತಪ್ಪುಗಳನ್ನು ಮಾಡುತ್ತೇವೆ. ಕೆಲವು ತಿಳಿಯದೇ ಮಾಡಿದ ತಪ್ಪುಗಳಾದರೆ, ಇನ್ನು ಕೆಲವು ತಿಳಿದೂ ತಿಳಿದು ಮಾಡುವ ತಪ್ಪುಗಳಾಗಿರುತ್ತವೆ. ಹಾಗೆಯೇ ನಾವು ಮಾಡುವ ಕೆಲವು ತಪ್ಪುಗಳು ಕೆಲವರ ಗಮನಕ್ಕೆ ಬಾರದೇ ಹೋದರೆ, ಕೆಲವು ತಪ್ಪುಗಳು ಎಲ್ಲರ ಗಮನಕ್ಕೂ ಬಂದುಬಿಡುತ್ತವೆ. ತಪ್ಪು ಮಾಡುವುದು ಸಹಜ. ಆದರೆ ಗೊತ್ತಿದ್ದೂ ಮಾಡುವ ತಪ್ಪುಗಳು ಕ್ಷಮಾರ್ಹವಲ್ಲ. ಇಂತಹ ತಪ್ಪುಗಳನ್ನು 'ಪ್ರಜ್ಞಾಪರಾಧ' ಎಂದು ಹೇಳಲಾಗುತ್ತದೆ. ಈ ಪದವನ್ನು ವೈದ್ಯಕೀಯ ಕ್ಷೇತ್ರದಲ್ಲೂ ವಿಶೇಷವಾಗಿ ಬಳಸಲಾಗುತ್ತದೆ. ಅದರಲ್ಲೂ ಆಯುರ್ವೇದ ಹಾಗೂ ಹೋಮಿಯೋಪತಿಯಲ್ಲಿ ಇದರ ಬಳಕೆ ಸಾಮಾನ್ಯ. ಅದು ವೈದ್ಯಕೀಯ ಖಾಯಿಲೆಗಳ ಅವಲೋಕನದ ಸಮಯದಲ್ಲಿ ಬರುವಂತಹ ಮಾತು.

ಖಾಯಿಲೆಗಳು ಬಂದಾಗ ಅದು ತಾನಾಗೇ ಬಂದಿದೆಯೇ? ಅಥವಾ ರೋಗಿ ಗೊತ್ತಿದ್ದೂ ತಪ್ಪು ಮಾಡಿಕೊಂಡು ಆ ಖಾಯಿಲೆಯನ್ನು ತರಿಸಿಕೊಂಡಿದ್ದಾನೆಯೇ? ತಿಳಿಯುವ ಪ್ರಯತ್ನ ಮಾಡಲಾಗುತ್ತದೆ. ತಿಳಿಯದೇ ಮಾಡಿರುವ ತಪ್ಪುಗಳನ್ನು ವಿಶೇಷವಾಗಿ ಗುರುತರ ಎಂದು ಪರಿಗಣಿಸಲಾಗುವುದಿಲ್ಲ. ಆದರೆ ತಿಳಿದೂ ಮಾಡುವ ತಪ್ಪುಗಳಿಗೆ ತಕ್ಕ ಶಾಸ್ತಿ ಆಗುತ್ತದೆ.

ನಮಗೆ ಕೆಲವು ಕೆಲಸಗಳನ್ನು ಮಾಡುವಾಗ ಅದು ಸರಿಯಲ್ಲ ಎಂದು ತಿಳಿದಿರುತ್ತದೆ. ಆದರೂ ಮಾಡುತ್ತೇವೆ. ನಮ್ಮ ಮನಸ್ಸು ಸಾಮಾನ್ಯವಾಗಿ ನಮ್ಮನ್ನು ಎಚ್ಚರಿಸುತ್ತಲೇ ಇರುತ್ತದೆ. ಯಾವುದೇ ಕೆಲಸವನ್ನು ಮಾಡುವಾಗ ಅದನ್ನು ಮಾಡುವುದರಿಂದ ಪರಿಣಾಮವೇನು ಎಂಬುದನ್ನು ಅದು ಮುನ್ಸೂಚನೆ ನೀಡುತ್ತದೆ. ತದನಂತರ ಯಾವುದು ತಪ್ಪು, ಯಾವುದು ಸರಿ ಎಂಬುದನ್ನೂ ಅದು ನಮ್ಮ ವಿವೇಚನೆಗೆ ಬಿಡುತ್ತದೆ. ಅದನ್ನು ನಾವು ಹೇಗೆ ಸ್ವೀಕಾರ ಮಾಡುತ್ತೇವೆ ಎನ್ನುವುದರ ಮೇಲೆ ಅದರ ಪರಿಣಾಮವನ್ನು ನಾವು ಎದುರಿಸಬೇಕಾಗುತ್ತದೆ.


ನಮ್ಮ ಮನಸ್ಸಿಗೂ ಒಂದು ಮಿತಿ ಇದೆ. ಅದೇ ಅರಿವು. ಆದರೆ, ಅದು ಹೀಗೇ ಮಾಡು ಎಂದು ನಿರ್ದೇಶಿಸುವುದಿಲ್ಲ. ಅದನ್ನು ಅರಿತು ಮುನ್ನಡೆದರೆ ಜೀವನ ಸುಲಲಿತವಾಗುತ್ತದೆ. ಇದು ತಪ್ಪು ಎಂದು ಮನಸ್ಸು ಹೇಳಿದಾಗಲೂ ಅದನ್ನು ನಿರ್ಲಕ್ಷಿಸಿ ಮುನ್ನಡೆದರೆ ಅದರ ಪರಿಣಾಮವನ್ನು ನಾವೇ ಅನುಭವಿಸಬೇಕಾಗುತ್ತದೆ.

ನಾವು ಅನೇಕ ವೇಳೆ ತೊಂದರೆಗೆ ಸಿಲುಕುವುದು ನಮ್ಮ ಜೊತೆಗಾರರಿಂದಲೇ. ಇದಕ್ಕೆ ಉದಾಹರಣೆ ಎಂದರೆ ನಮಗೆ ಮಧುಮೇಹ (ಸಕ್ಕರೆ) ಖಾಯಿಲೆ ಇದೆ ಎಂದು ಗೊತ್ತಿದ್ದರೂ ಸಭೆ, ಸಮಾರಂಭಗಳಲ್ಲಿ ನಮ್ಮನ್ನು ಸಿಹಿ ತಿನ್ನುವಂತೆ ಒತ್ತಾಯಿಸುತ್ತಾರೆ. ಇಂದು ಒಂದೆರಡು ಸಿಹಿ ತಿಂದರೆ ಏನಾಗದು, ತಿನ್ನು ಎಂದು ಒತ್ತಾಯ ಮಾಡುತ್ತಾರೆ. ಆಗ ನಮ್ಮ ವಿವೇಚನೆ ಕೆಲಸ ಮಾಡಬೇಕು. ಒತ್ತಾಯಕ್ಕೆ ಮಣಿದು ಸಿಹಿ ತಿಂದರೆ ಅದರ ಪರಿಣಾಮವನ್ನು ನಾವೇ ಅನುಭವಿಸಬೇಕೇ ವಿನಃ ನಮ್ಮನ್ನು ಒತ್ತಾಯ ಮಾಡಿದವರು ಅಲ್ಲ.

ಅವರು ಒತ್ತಾಯ ಮಾಡುತ್ತಿದ್ದಾರೆ, ತಿನ್ನದಿದ್ದರೆ ಅವರಿಗೆ ಬೇಸರವಾಗುತ್ತದೆ ಎಂಬ ದಾಕ್ಷಿಣ್ಯ ನಮ್ಮನ್ನು ದಾರಿ ತಪ್ಪಿಸುತ್ತದೆ. ಅಂತಹ ಸಮಯದಲ್ಲಿ ಇಲ್ಲ, ಹಾಗೆ ಮಾಡಿದರೆ ಅದರ ಪರಿಣಾಮವನ್ನು ನಾನೇ ಅನುಭವಿಸಬೇಕಾಗುತ್ತದೆ. ಆದ್ದರಿಂದ ತಿನ್ನುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳಿಬಿಡಬೇಕು.

ಇಂತಹುದೇ ಅಡ್ಡ ದಾರಿ ತೋರುವ ಅನೇಕ ಮಿತ್ರರು (?) ನಮಗೆ ಇರುತ್ತಾರೆ. ಅವರು ಹೀಗೇ ಕಂಪನಿ ಕೊಡು ಎಂದು ನಾನಾ ದುಶ್ಚಟಗಳಿಗೆ ಪ್ರೇರೇಪಿಸುತ್ತಾರೆ. ಅದಕ್ಕೆ ಮೊದ ಮೊದಲು ನಾವೇನೂ ಖರ್ಚು ಮಾಡಬೇಕಾಗಿರುವುದಿಲ್ಲ. ಹೀಗೆ ಒಂದೆರಡು ಬಾರಿ ಅವರ ಒತ್ತಾಯಕ್ಕೆ ಮಣಿದು ದುಶ್ಚಟಗಳ ಅಭ್ಯಾಸ ಮಾಡಿಕೊಂಡರೆ, ಮುಂದೆ ಆ ಸ್ನೇಹಿತರು ನಮ್ಮ ಆರೋಗ್ಯ ಸಮಸ್ಯೆಗೆ ಕಾರಣೀಕರ್ತರು ಎಂದು ಹೇಳಲಾಗುವುದಿಲ್ಲ. ಅದಕ್ಕೆ ನಾವೇ ಕಾರಣರಾಗಿಬಿಡುತ್ತೇವೆ! ನಮ್ಮ ಸಮಾಜಕ್ಕೆ ಹೆಚ್ಚಿನ ತೊಂದರೆಯಾಗುತ್ತಿರುವುದು ಮದ್ಯಪಾನ, ಮಾದಕ ವಸ್ತುಗಳ ಸೇವನೆಯಿಂದಲೇ ಎಂಬುದನ್ನು ಸ್ವತಃ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಅವರು ಅದರಿಂದ ಹೊರಬರುವುದಿಲ್ಲ.

ಕಳೆದ ಮಾರ್ಚ್‌ನಲ್ಲಿ ಪತ್ರಿಕೆಯಲ್ಲಿ ಒಂದು ವರದಿ ಬಂದಿತ್ತು. ಅದು ನಮ್ಮ ಮಂಡ್ಯ ಜಿಲ್ಲೆಯದು. ಒಂದು ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ್ದು



> “ನಮ್ಮ ಮನಸ್ಸಿಗೂ ಒಂದು ಮಿತಿ ಇದೆ. ಅದೇ ಅರಿವು. ಆದರೆ, ಅದು ಹೀಗೇ ಮಾಡು ಎಂದು ನಿರ್ದೇಶಿಸುವುದಿಲ್ಲ. ಅದನ್ನು ಅರಿತು ಮುನ್ನಡೆದರೆ ಜೀವನ ಸುಲಲಿತವಾಗುತ್ತದೆ. ಇದು ತಪ್ಪು ಎಂದು ಮನಸ್ಸು ಹೇಳಿದಾಗಲೂ ಅದನ್ನು ನಿರ್ಲಕ್ಷಿಸಿ ಮುನ್ನಡೆದರೆ ಅದರ ಪರಿಣಾಮವನ್ನು ನಾವೇ ಅನುಭವಿಸಬೇಕಾಗುತ್ತದೆ.

ಸ್ವತಃ ಅಬಕಾರಿ ಅಧಿಕಾರಿಗಳು. ಆ ವರದಿ ಓದಿದಾಗ ಅತಂಕವಾಯಿತು. ಅವರು ಹೇಳಿದ್ದರು, ಮಂಡ್ಯ ಜಿಲ್ಲೆ 20 ಲಕ್ಷ ಜನಸಂಖ್ಯೆ ಹೊಂದಿದ್ದು, ಇಲ್ಲಿರುವ 360 ವೈನ್ ಶಾಪುಗಳಿಂದ 24 ಲಕ್ಷ ಲೀಟರ್ ಮದ್ಯ ಮಾರಾಟ ಆಗುತ್ತಿದೆ. ಇದು ಒಂದು ಜಿಲ್ಲೆಯ ಅಂಕಿ–ಅಂಶ. ಇನ್ನು ರಾಜ್ಯದ್ದು ಎಷ್ಟೋ? ಅದರಲ್ಲೂ ಹೊಸ ವರ್ಷಾಚರಣೆ ಸಂದರ್ಭದ ಅಂಕಿ–ಅಂಶ ನಮ್ಮನ್ನು ಮತ್ತಷ್ಟು ಬೆಚ್ಚಿಬೀಳಿಸುತ್ತದೆ. ಹಾಗಾದರೆ ಇಷ್ಟೊಂದು ಮದ್ಯ ಸೇವನೆ ಮಾಡಿದವರಿಗೆ ತಾವು ಮಾಡುತ್ತಿರುವುದು ತಪ್ಪು ಎಂದು ಗೊತ್ತಿರುವುದಿಲ್ಲವೇ? ಅಲ್ಲಿನ ಆಸ್ಪತ್ರೆಗಳಲ್ಲಿನ ಅಂಕಿ–ಅಂಶಗಳನ್ನು ಪರಿಶೀಲಿಸಿದರೆ ಬಹುಶಃ ನಮಗೆ ಅದರ ಪ್ರಭಾವ ಎಂತಹುದು, ಎಷ್ಟು ಜನರು ವಾಸಿಯಾಗದಂತಹ ಖಾಯಿಲೆಯಿಂದ ನರಳುತ್ತಿರಬಹುದು ಎಂಬುದು ಗೊತ್ತಾಗುತ್ತದೆ.

ಇಂತಹುದನ್ನು ಸರ್ಕಾರ ಏಕೆ ತಡೆಯುವುದಿಲ್ಲ? ಏಕೆ ಮದ್ಯ ಮಾರಾಟ ನಿಷೇಧಿಸುವುದಿಲ್ಲ. ಇದು ಸರ್ಕಾರಗಳು ಜನರಿಗೆ ಮಾಡುತ್ತಿರುವ ಮೋಸವಲ್ಲವೇ? ಆದರೆ ವಾಸ್ತವ ಸಂಗತಿ ಎಂದರೆ ಈ ಮದ್ಯ ಮಾರಾಟದಿಂದಲೇ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಹಣ ಬರುತ್ತದೆ. ಹಾಗಾಗಿಯೇ ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ವಹಿಸುವುದಿಲ್ಲ. ಹಾಗಾದರೆ ಇದಕ್ಕೆ ಪರಿಹಾರವೇನು? ಇದಕ್ಕೆ ಕುಡಿಯುವವರೇ ಉತ್ತರ ಹೇಳಬೇಕು. ಆರೋಗ್ಯ ಹದಗೆಡುತ್ತಿದೆ ಎಂದು ಆರಂಭದ ಹಂತದಲ್ಲಿ ಗೊತ್ತಾದಾಗಲೇ ಅದನ್ನು ಬಿಡುವ ಪ್ರಯತ್ನ ಮಾಡಬೇಕು. ಅದೇ ಪರಿಹಾರ. ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ಸರ್ಕಾರ, ಗಾಂಧಿ ಜಯಂತಿಯಂತಹ ಸಂದರ್ಭದಲ್ಲಿ ಮದ್ಯ ಮಾರಾಟ ಇಲ್ಲ ಎಂದು ಹೇಳುವುದಷ್ಟೆ!

ಇತ್ತೀಚೆಗೆ ನಮ್ಮ ಮೈಸೂರಿನಲ್ಲಿ ಮಾದಕ ಡ್ರಗ್ಸ್ ದಂಧೆ ಮಾಫಿಯಾ ಕಾರ್ಯಾಚರಿಸುತ್ತಿರುವುದು ಬಯಲಾಯಿತು. ಅದೂ ಸರಿಸುಮಾರು 390 ಕೋಟಿ ಮೌಲ್ಯದ್ದು. ಮೈಸೂರಿನಿಂದ ದೇಶದ ಇತರೆ ಭಾಗಗಳಿಗೆ ಅದು ಸರಬರಾಜು ಆಗುತ್ತಿದೆ ಎಂಬ ಆಘಾತಕಾರಿ ಮಾಹಿತಿ. ಇದು ಒಂದೇ ದಿನ ನಡೆದಿದ್ದಲ್ಲ. ಬಹಳ ದಿನಗಳಿಂದ ನಡೆಯುತ್ತಿದ್ದು ಈಗ ಬಹಿರಂಗಗೊಂಡಿದೆ. ಇಂತಹ ಡ್ರಗ್ಸ್ ಯುವಜನರಲ್ಲಿ ಯಾವ ರೀತಿ ಪರಿಣಾಮ ಉಂಟುಮಾಡುತ್ತದೆ ಎಂಬುದನ್ನು ನೆನೆಸಿಕೊಂಡಾಗ ಭಯವಾಗುತ್ತದೆ. ಒಮ್ಮೆ ಇದರ ರುಚಿ(?) ಹತ್ತಿದ ನಂತರ ಅದರಿಂದ ಹೊರಬರಲು ಬಹುದೊಡ್ಡ ಮಾನಸಿಕ ಸಂಕಲ್ಪ ಬೇಕಾಗುತ್ತದೆ. ಇಲ್ಲದಿದ್ದರೆ ಯುವಕರು ಮಧ್ಯವಯಸ್ಕರೇ ಆಗುವುದಿಲ್ಲ! ಇದೇ ವೇಳೆ ಒಂದು ಸಿಗರೇಟ್ ಕಂಪನಿಯ ಜಾಹೀರಾತು ಜ್ಞಾಪಕಕ್ಕೆ ಬರುತ್ತದೆ. ಅದರಲ್ಲಿ ನಮ್ಮ ಕಂಪನಿಯ ಸಿಗರೇಟ್ ಸೇದುವವರು ಎಂದೂ ಮುದುಕರಾಗುವುದಿಲ್ಲ! ಅದು ನಿಜವೂ ಆಗಿತ್ತು. ಏಕೆಂದರೆ ಅಂತಹ ಸಿಗರೇಟ್ ಸೇದುವ ಅಭ್ಯಾಸವಾದವರು ಮುದುಕರಾಗುವವರೆಗೆ ಬದುಕುವುದೇ ಇಲ್ಲ. ಆದ್ದರಿಂದ ಅವರು ಮುದುಕರಾಗುವುದಿಲ್ಲ ಎಂದು ಜನರ ಮೂರ್ಖರನ್ನಾಗಿಸುತ್ತಿತ್ತು ಆ ಜಾಹೀರಾತು.

ಇದು ಕೇವಲ ಮಾದಕ ವಸ್ತು ಸೇವನೆಗೆ ಸಂಬಂಧಿಸಿದ್ದು ಎಂದಲ್ಲ. ಈ ಹಿಂದೆ ಇಂತಹುದೆ ವಿಷಯ ನಮ್ಮ ಗಮನ ಸೆಳೆದಿತ್ತು. ಒಬ್ಬ ಕಳ್ಳನನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡುವಾಗ, ಅವನ ಹಿನ್ನೆಲೆ ಕೇಳಿದಾಗ ಆತ ಹೇಳಿದ್ದು, ಶಾಲೆಯಲ್ಲಿ ಓದುತ್ತಿದ್ದಾಗ ಜೊತೆಗಾರರ ಪೆನ್ನು, ಪುಸ್ತಕ ಕದ್ದು ತರುತ್ತಿದ್ದೆ. ಅದಕ್ಕೆ ತಂದೆಯವರು ನನಗೆ ಶಹಬ್ಬಾಶ್ ಹೇಳುತ್ತಿದ್ದರು. ಕದಿಯಬಾರದು ಎಂದು ಅವರು ಒಂದು ದಿನವೂ ಹೇಳಲೇ ಇಲ್ಲ. ಹಾಗಾಗಿ ಕಳ್ಳತನ ಮಾಡಲು ನನಗೆ ಪ್ರೋತ್ಸಾಹ–ಪ್ರೇರೇಪಣೆ ಸಿಕ್ಕಂತಾಯಿತು. ಇದರಲ್ಲಿ ನನಗಿಂತ ನನ್ನ ತಂದೆಯ ತಪ್ಪೇ ಜಾಸ್ತಿ ಇದೆ, ಶಿಕ್ಷೆ ಕೊಡುವುದಾದರೆ ಅವರಿಗೆ ಕೊಡಿ ಎಂದು ಆ ಕಳ್ಳ ಹೇಳಿದ್ದ. ಇದೂ ನಿಜವೇ. ಮಕ್ಕಳು ತಪ್ಪು ಮಾಡಿದಾಗ ಅದನ್ನು ಆ ಸಮಯದಲ್ಲೇ ತಿದ್ದದ ಪೋಷಕರೂ ಮುಂದಿನ ಆತನ ತಪ್ಪುಗಳಿಗೆ ಹೊಣೆಗಾರರಾಗಬೇಕಾಗುತ್ತದೆ.

ಹೀಗೆ ನಾವು ಗೊತ್ತಿದ್ದೂ ಹಲವು ತಪ್ಪುಗಳನ್ನು ಮಾಡುತ್ತಿರುತ್ತೇವೆ. ಹೀಗೆ ಗೊತ್ತಿದ್ದೂ ಮಾಡುವ ತಪ್ಪೇ ಪ್ರಜ್ಞಾಪರಾಧ. ಚಿಕ್ಕ ಮಕ್ಕಳಿಗೆ ವಾಹನ ಚಾಲನೆಗೆ ಅವಕಾಶ ನೀಡಬಾರದು ಎಂದು ಗೊತ್ತಿದ್ದರೂ ವಾಹನ ನೀಡಿ, ಅವರು ಅಪಘಾತ ಮಾಡಿದರೆ ಅದರ ಜವಾಬ್ದಾರಿಯನ್ನು ಪೋಷಕರೇ ಹೊರಬೇಕಾಗುತ್ತದೆ. ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯಗಳು ಪೋಷಕರಿಗೆ ಶಿಕ್ಷೆ ನೀಡುತ್ತಿರುವುದನ್ನು ಕಾಣುತ್ತಿದ್ದೇವೆ.

ಇತ್ತೀಚೆಗೆ ಮೈಸೂರು ಮಹಾನಗರಪಾಲಿಕೆಯು ವ್ಯಾಪಾರಿಗಳಿಗೆ ಒಂದು ಎಚ್ಚರಿಕೆ, ಅದೇನೆಂದರೆ ಇಡ್ಲಿ ಮಾಡುವಾಗ ಪ್ಲಾಸ್ಟಿಕ್ ಹಾಳೆ ಬಳಸಬಾರದು. ಬಳಸಿದರೆ ಅದು ರಾಸಾಯನಿಕ ಪ್ರಕ್ರಿಯೆ ಹೊಂದಿ ತಿನ್ನುವವರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹೀಗೆ ತಿಳಿಸಿದ ಮೇಲೂ ಅನೇಕ ಫುಟ್‌ಪಾತ್ ಹೋಟೆಲ್ಲುಗಳಲ್ಲಿ ಪ್ಲಾಸ್ಟಿಕ್ ಬಳಸಿಯೇ ಇಡ್ಲಿ ತಯಾರಿಸಲಾಗುತ್ತಿದೆ ಎಂಬ ವರದಿ ಇನ್ನೂ ಆತಂಕಕಾರಿ. ಹಾಗೆ ಬಳಸುತ್ತಿರುವುದು ಕಂಡು ಬಂದ ಮೇಲೆಯೂ ಸಾರ್ವಜನಿಕರು ಅದನ್ನು ವಿರೋಧಿಸದಿರುವುದನ್ನು ಪ್ರಜ್ಞಾಪರಾಧ ಎಂದೇ ಪರಿಗಣಿಸಬೇಕಾಗುತ್ತದೆ.

ಹಾಗೆಯೇ ಸಂಜೆ ವೇಳೆಯಲ್ಲಿ ರಸ್ತೆ ಬದಿಯಲ್ಲಿ ಮಾರಾಟ ಮಾಡುವ ಬೋಂಡಾ ಮತ್ತಿತರ ಕರಿದ ತಿಂಡಿ ಪದಾರ್ಥಗಳನ್ನು ವೃತ್ತಪತ್ರಿಕೆಗಳಲ್ಲಿ ಕಟ್ಟಿಕೊಡುತ್ತಿರುವುದು ಸಾಮಾನ್ಯವಾಗಿದೆ. ಹಾಗೆ ಮಾಡುವುದರಿಂದ ಪತ್ರಿಕೆಯ ಮುದ್ರಣಕ್ಕೆ ಉಪಯೋಗಿಸುವ ರಾಸಾಯನಿಕಯುಕ್ತ ಇಂಕ್ ಆ ಬೋಂಡಾದೊಂದಿಗೆ ಸೇರಿ ನೇರವಾಗಿ ನಮ್ಮ ಹೊಟ್ಟೆ ಸೇರುತ್ತದೆ. ಪರಿಣಾಮ ದೊಡ್ಡದಾದ ಆರೋಗ್ಯ ಸಮಸ್ಯೆ ಉಂಟಾಗುತ್ತದೆ. ಹೀಗೆ ಕಟ್ಟಿಕೊಡುವುದು ಹೇಗೆ ಅಪರಾಧವೋ, ಹಾಗೆಯೇ ಅದನ್ನು ಹಾಗೆ ಕೊಟ್ಟಾಗ ಪ್ರತಿಭಟಿಸದಿರುವುದೂ ಅಪರಾಧವೇ ಆಗುತ್ತದೆ.

ಇತ್ತೀಚೆಗೆ ಸಿದ್ದಪಡಿಸಿ, ಪ್ಯಾಕೇಟ್ ಮಾಡಿ ಮಾರಾಟ ಮಾಡುತ್ತಿರುವ ಅನೇಕ ವಸ್ತುಗಳಲ್ಲಿ ಮಾರಣಾಂತಿಕ ರಾಸಾಯನಿಕ ವಸ್ತುಗಳಿರುವುದು ಕಂಡುಬರುತ್ತಿದೆ. ಚಿಪ್ಸ್, ಕುರ್‌ಕುರೇಯಂತಹ ವಸ್ತುಗಳು ದೊಡ್ಡವರ ಆರೋಗ್ಯದ ಮೇಲೂ ಪ್ರಭಾವ ಬೀರುತ್ತದೆ, ಇನ್ನು ಮಕ್ಕಳ ವಿಷಯದಲ್ಲಂತೂ ಇದು ಬಹಳ ದೊಡ್ಡ ಪರಿಣಾಮ ಬೀರುತ್ತದೆ ಎಂಬ ವರದಿಗಳು ನಮ್ಮ ಕಣ್ಣು ತೆರೆಸಬೇಕು. ಮಕ್ಕಳು ಗಲಾಟೆ ಮಾಡಬಾರದು ಎಂದು ಅವರ ಕೈಗೆ ಈ ಪ್ಯಾಕೇಟ್ ಕೊಡುವುದು ಪ್ರಜ್ಞಾಪರಾಧವೇ. ಮಕ್ಕಳಿಗೆ ಗೊತ್ತಿಲ್ಲ ನಿಜ, ಆದರೆ ನಿಮಗೆ ಅದು ಏಕೆ ಗೊತ್ತಾಗಲಿಲ್ಲ? ಎಂದು ಪೋಷಕರನ್ನೇ ಹೊಣೆಗಾರರಾಗಿ ಮಾಡಬೇಕಾಗುತ್ತದೆ. ಆದ್ದರಿಂದ ನಾವು ಗೊತ್ತಿದ್ದೂ ಮಾಡುತ್ತಿರುವ ಅಪರಾಧಗಳನ್ನು ನಿರ್ಬಂಧಿಸಿಕೊಳ್ಳಬೇಕು. ಇಲ್ಲದಿದ್ದರೆ ಅದು ಕ್ಷಮಾರ್ಹವಲ್ಲ.

ಇಂದು ಗಾನಾಮೃತ ಸಂಗೀತ ಸಂಜೆ

ಮೈಸೂರು, ಆ.1(ಜಿಎ)–ಸ್ಟ್ಯಾನ್ಲಿ ಪಾರ್ಕರ್ ಸ್ಕೂಲ್ ಆಫ್ ಮ್ಯೂಸಿಕ್ ವತಿಯಿಂದ ಆ.2 ರಂದು ಸಂಜೆ 4ಗಂಟೆಯಿಂದ ರಾತ್ರಿ 9 ರವರೆಗೆ ಗಾನ ಭಾರತಿ ವೀಣೇ ಶೇಷಣ್ಣ ಭವನದಲ್ಲಿ ಕನ್ನಡ ಚಿತ್ರಗೀತೆಗಳ ಗಾನಾಮೃತ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಲೆಯ ಸಂಸ್ಥಾಪಕ ಸ್ಟ್ಯಾನ್ಲಿ ಪಾರ್ಕರ್ ಈ ವಿಷಯ ತಿಳಿಸಿ, 23 ಗಾಯಕರು ಸುಮಾರ 60 ಕನ್ನಡ ಚಲನಚಿತ್ರದ ಗೀತೆಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎನ್.ಅಮರ್, ಪ್ರೊ.ದೇಮಪ್ಪ, ಜಿ.ಪಿ.ಚೇತನ್, ಡಾ.ಸುಮಾ ಉಪಸ್ಥಿತರಿದ್ದರು.

ಒಳಮೀಸಲಾತಿ ಜಾರಿ ಆಗದಿದ್ದರೆ ಮುಖ್ಯಮಂತ್ರಿ ಸ್ಥಾನ ತೊರೆಯಿರಿ!

ಸಿದ್ದರಾಮಯ್ಯರಿಗೆ ಬಿಜೆಪಿ ಶಾಸಕ ಬಸವರಾಜ ಮತ್ತಿಮಡು ಆಗ್ರಹ

ಬೆಂಗಳೂರು, ಆ.1(ಕೆಎಂಶಿ)–ರಾಜ್ಯ ಕಾಂಗ್ರೆಸ್ ಸರ್ಕಾರ ಕೂಡಲೇ ಒಳಮೀಸಲಾತಿ ಜಾರಿ ಮಾಡಲಾಗದಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯರ ಅಧಿಕಾರದಿಂದ ಕೆಳಗಿಳಿಯಬೇಕು ಎಂದು ಬಿಜೆಪಿ ಶಾಸಕ ಬಸವರಾಜ ಮತ್ತಿಮಡು ಇಂದಿಲ್ಲಿ ಆಗ್ರಹಿಸಿದ್ದಾರೆ.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಕರ್ನಾಟಕ ಮಾದಿಗ ಸಂಘಟನೆಗಳ ಒಕ್ಕೂಟ ನಗರದ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಹತ್ತಾರು ವರ್ಷಗಳಿಂದ ಹೋರಾಟ ನಡೆಯುತ್ತಿದೆ, 2023ರ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದೊಡನೆ ಒಳ ಮೀಸಲಾತಿ ಜಾರಿ ಆಶ್ವಾಸನೆ ನೀಡಿದ್ದರು, ಆದರೆ, ಕಾಂಗ್ರೆಸ್ ತನ್ನ ಭರವಸೆ ಮರೆತಿದೆ ಎಂದು ಟೀಕಿಸಿದರು.

ಹರಿಯಾಣ, ತೆಲಂಗಾಣ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಒಳ ಮೀಸಲಾತಿ ಜಾರಿಯಾಗಿದೆ. ಕರ್ನಾಟಕ ಕಾಂಗ್ರೆಸ್ ಸರ್ಕಾರ ಸುಳ್ಳು ಹೇಳುವುದನ್ನು ಮುಂದುವರೆಸಿದೆ ಎಂದರು.

ಹೊಸ ಪರೀಕ್ಷಾ ಸುಧಾರಣಾ ಕ್ರಮ ಕೈಬಿಡಲು ಮಾಜಿ ಎಂಎಲ್ಸಿ ಮರಿತಿಬ್ಬೇಗೌಡ ಆಗ್ರಹ



ಮರಿತಿಬ್ಬೇಗೌಡ

ಮೈಸೂರು, ಆ.1–ಮಕ್ಕಳ ಜ್ಞಾನವಂತರಾಗಿ ಹಾಗೂ ವಿಚಾರವಂತರನ್ನಾಗಿ ಮಾಡುವುದು ಗುಣಾತ್ಮಕ ಶಿಕ್ಷಣದ ಪ್ರಧಾನ ಉದ್ದೇಶವಾಗಿದ್ದು, ಈ ಹಿನ್ನೆಲೆಯಲ್ಲಿ ಹೊಸ ಪರೀಕ್ಷಾ ಸುಧಾರಣೆಯ ಕ್ರಮವನ್ನು ಕೈಬಿಡುವಂತೆ ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಮೂಲಕ ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರಿಗೆ ಮನವಿ ಮಾಡಿರುವ ಅವರು, ಗುಣಾತ್ಮಕ ಶಿಕ್ಷಣದ ದೃಷ್ಟಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಮಕ್ಕಳ ಕಲಿಕೆಯನ್ನು ಪರಿಶೀಲಿಸಲು ಮೌಲ್ಯಮಾಪನದಲ್ಲಿ ಪರೀಕ್ಷೆ ಎಂಬ ಮಾನದಂಡವನ್ನು ಅಳವಡಿಸಿಕೊಳ್ಳಲಾಗಿದೆ. ಇದು ಉತ್ತಮ ವ್ಯವಸ್ಥೆಯಾಗಿದೆ. ಇದರಲ್ಲಿ ಕಾಲಕಾಲಕ್ಕೆ ಬದಲಾವಣೆ ಮಾಡುವುದು ಸೂಕ್ತ. ಆದರೆ ಇದು ಇಂದು ಅಸಹಜ ರೂಪವನ್ನು ಪಡೆದುಕೊಳ್ಳುತ್ತಿರುವುದು ದುರದೃಷ್ಟಕರ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಹಿಂದಿನಿಂದಲೂ ಪ್ರತಿ ವಿಷಯದಲ್ಲೂ ನಿರ್ದಿಷ್ಟಪಡಿಸಿರುವ ಅಂಕಗಳಿಗೆ ಲಿಖಿತ ಪರೀಕ್ಷೆ ಮಾಡಲಾಗುತ್ತಿತ್ತು, ಪ್ರತಿ ವಿಷಯದಲ್ಲೂ ಶೇ.35 ರಷ್ಟು ಅಂಕ ಪಡೆದ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಲಾಗುತ್ತಿತ್ತು. ಆದರೆ ರಾಷ್ಟ್ರೀಯ ಶಿಕ್ಷಣ ನೀತಿ–2000 ರಲ್ಲಿ ಪರೀಕ್ಷಾ ವ್ಯವಸ್ಥೆಯಲ್ಲಿ ಬದಲಾವಣೆ ತಂದು, ಪ್ರಥಮ ಭಾಷೆಗೆ 25 ಮತ್ತು ಇತರೆ ವಿಷಯಗಳಿಗೆ 20 ಅಂಕಗಳಿಗೆ ಆಂತರಿಕ ಮೌಲ್ಯಮಾಪನ ಮತ್ತು ಪ್ರಥಮಭಾಷೆಗೆ 100 ಮತ್ತು ಇನ್ನುಳಿದ ವಿಷಯಗಳಿಗೆ 80 ಅಂಕಗಳಿಗೆ ಲಿಖಿತ ಮೌಲ್ಯಮಾಪನ ಮಾಡುವ ವ್ಯವಸ್ಥೆ ಜಾರಿ ಮಾಡಲಾಯಿತು. ಈ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಲಿಖಿತ ಪರೀಕ್ಷೆಯಲ್ಲಿ ಶೇ.35ರಷ್ಟು ಅಂಕಗಳನ್ನು ಪಡೆದು ಪಾಸಾಗಬೇಕಿತ್ತು. ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಉತ್ತೀರ್ಣಗೊಳಿಸಲು ಸೇರಿಸಿಕೊಳ್ಳಲಾಗುತ್ತಿರಲಿಲ್ಲ.

ಆದರೆ ಇಂದು ಕೇಂದ್ರ (ಸಿಬಿಎಸ್‌ಇ) ಪಠ್ಯಾಧಾರಿತ ಮೌಲ್ಯಮಾಪನ ಕ್ರಮ ಎಂದು ಹೇಳಿ ಆಂತರಿಕ ಮತ್ತು ಲಿಖಿತ ಮೌಲ್ಯಮಾಪನದಲ್ಲಿ ವಿದ್ಯಾರ್ಥಿಗಳು ಪಡೆದ ಎರಡು ಅಂಕಗಳನ್ನು ಸೇರಿಸಿ, ಶೇ.33 ಅಂಕಗಳನ್ನು ನಿರ್ದಿಷ್ಟಗೊಳಿಸಿ ಉತ್ತೀರ್ಣಗೊಳಿಸುವ ಪ್ರಯತ್ನ ಗುಣಾತ್ಮಕ ಶಿಕ್ಷಣದ ದೃಷ್ಟಿಯಿಂದ ಸರಿಯಾದ ಕ್ರಮವಲ್ಲ, ಈಗಿರುವ ಮೌಲ್ಯಮಾಪನ ಕ್ರಮವೇ ಸೂಕ್ತವೆನಿಸುತ್ತದೆ ಎಂದಿದ್ದಾರೆ.

1 ರಿಂದ 8ನೇ ತರಗತಿವರೆಗೆ ಈಗಾಗಲೇ ಇರುವ ಕಲಿಕಾ ಪದ್ಧತಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ಗುಣಾತ್ಮಕ ಕಲಿಕೆ ಪೂರ್ಣಗೊಳ್ಳುವಂತೆ ಸಜ್ಜುಗೊಳಿಸಿ ಬದಲಾವಣೆ ತರುವುದು ಸೂಕ್ತ. ಇಲ್ಲೆ ಪೂರ್ವ ಪ್ರಾಥಮಿಕ ತರಗತಿಗಳನ್ನು ತೆರೆದು ಬುನಾದಿ ಸಾಮರ್ಥ್ಯಗಳನ್ನು ಕಲಿಸಿ ಉತ್ತಮ ಶಿಕ್ಷಣ ನೀಡುವುದು ಸರಿಯಾದ ಕ್ರಮ. ಇಂತಹ ಒಂದು ಬದಲಾವಣೆ ತರುವಾಗ ಶಿಕ್ಷಣ ತಜ್ಞರ ಒಳಗೊಂಡ ಸಮಿತಿಯ ಶಿಫಾರಸ್ಸುಗಳನ್ನು ಕ್ರೋಢೀಕರಿಸಿ ನಿರ್ಧಾರಕ್ಕೆ ಬರುವುದು ಗುಣಾತ್ಮಕ ಶಿಕ್ಷಣದ ಹಿತದೃಷ್ಟಿಯಿಂದ ಔಚಿತ್ಯ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಹಾಗೂ ಶಿಕ್ಷಣ ಸಚಿವರು ಫಲಿತಾಂಶ ನೀಡುವ ಸಲುವಾಗಿ ತರುತ್ತಿರುವ ಹೊಸ ಪರೀಕ್ಷಾ ಸುಧಾರಣೆಯ ಕ್ರಮವನ್ನು ಕೈಬಿಡುವಂತೆ ಮನವಿ ಮಾಡಿದ್ದಾರೆ.

ರೈತರಿಗೆ ತರಬೇತಿ

ಮೈಸೂರು: ಜಿಲ್ಲಾ ಕೃಷಿ ತರಬೇತಿ ಕೇಂದ್ರ, ನಾಗನಹಳ್ಳಿ, ಮೈಸೂರು ಇಲ್ಲಿ ಆ.4 ರಿಂದ 6ರವರೆಗೆ ಕಬ್ಬು ಮತ್ತು ಬಾಳೆ ಬೆಳೆಯಲ್ಲಿ ತಳಿ ಆಯ್ಕೆ, ಆಧುನಿಕ ಕೃಷಿ ಪದ್ಧತಿಗಳು ಮತ್ತು ಮಾರುಕಟ್ಟೆಗಿರುವ ಅವಕಾಶಗಳು ವಿಷಯದ ಬಗ್ಗೆ ರೈತ, ರೈತ ಮಹಿಳೆಯರಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ತರಬೇತಿಯಲ್ಲಿ ಭಾಗವಹಿಸುವ ರೈತ, ರೈತ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆಯನ್ನು ಒದಗಿಸಲಾಗುವುದು. ಆಸಕ್ತ ರೈತ, ರೈತ ಮಹಿಳೆಯರು ತಮ್ಮ ಹೆಸರನ್ನು ಈ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರ ದೂ.ಸಂ.8277933157 ಗೆ ಕರೆಮಾಡಿ ನೋಂದಾಯಿಸತಕ್ಕದ್ದು. ರೈತರು ತರಬೇತಿಗೆ ಬರುವಾಗ FID ನಂಬರ್, ರೇಷನ್ ಕಾರ್ಡ್ ಆಧಾರ್ ಮತ್ತು ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿಗಳನ್ನು ತಪ್ಪದೇ ತರುವುದು. ಮೈಸೂರು ಜಿಲ್ಲೆಯ 45 ರೈತ, ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 2 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 107 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಡಿಸಿಎಂ ಡಿ.ಕೆ.ಶಿವಕುಮಾರ್ ಉಪಸ್ಥಿತಿ ಹಿನ್ನೆಲೆ

ತಮ್ಮದೇ ಇಲಾಖಾ ಕಾರ್ಯಕ್ರಮದಿಂದ ದೂರ ಉಳಿದ ಸಚಿವ ರಾಜಣ್ಣ!

ಬೆಂಗಳೂರು, ಆ.1(ಕೆಎಂಶಿ)–ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗ ವಹಿಸಿದರೆಂಬ ಕಾರಣಕ್ಕೆ ಸಹಕಾರಿ ಸಚಿವ ಕೆ.ಎನ್. ರಾಜಣ್ಣ ತಮ್ಮ ಇಲಾಖಾ ಕಾರ್ಯಕ್ರಮದಿಂದಲೇ ದೂರ ಉಳಿದ ಪ್ರಸಂಗ ಇಂದು ನಡೆಯಿತು.



ಕೆ.ಎನ್. ರಾಜಣ್ಣ

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಪ್ರಧಾನ ಕಚೇರಿಯ ನೂತನ ಕಟ್ಟಡದ ಒಳ ವಿನ್ಯಾಸದ ಉದ್ಘಾಟನೆಯನ್ನು ಪದಾಧಿಕಾರಿಗಳು ಶಿವಕುಮಾರ್ ಅವರಿಂದ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ಯುಪಿಐ ಸೇವೆ ಮತ್ತು ಭದ್ರತಾ ಕೊಠಡಿ ಉದ್ಘಾಟನೆಯನ್ನು ▶ 10ನೇ ಪುಟಕ್ಕೆ

ಮನೆಕೆಲಸದ ಮಹಿಳೆ ಮೇಲೆ ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ

ಪ್ರಜ್ವಲ್ ರೇವಣ್ಣ ದೋಷಿ

● ಜನಪ್ರತಿನಿಧಿಗಳ ವಿಶೇಷ ಕೋರ್ಟ್ ತೀರ್ಪು ● ಇಂದು ಶಿಕ್ಷೆ ಪ್ರಮಾಣ ಪ್ರಕಟ

ಬೆಂಗಳೂರು, ಆ.1(ಕೆಎಂಶಿ)– ತಮ್ಮ ಮನೆಕೆಲಸದ ಮಹಿಳೆಯ ಮೇಲೆ ಅತ್ಯಾಚಾರವೆಸಗಿದ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ದೋಷಿ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಇಂದಿಲ್ಲಿ ಮಹತ್ವದ ತೀರ್ಪು ನೀಡಿದೆ. ಪ್ರಜ್ವಲ್ ರೇವಣ್ಣಗೆ ಶಿಕ್ಷೆ ಪ್ರಮಾಣವನ್ನು ನ್ಯಾಯಾಲಯ ನಾಳೆ (ಶನಿವಾರ) ಪ್ರಕಟಿಸಲಿದೆ.

ಮೈಸೂರು ಜಿಲ್ಲೆ ಕೆ.ಆರ್.ನಗರದ ಈ ಮಹಿಳೆಯ ಮೇಲಿನ ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಇಂದು ತೀರ್ಪು ನೀಡಿದ್ದಾರೆ. ತೀರ್ಪಿನ ಬಗ್ಗೆ ಪ್ರತಿಕ್ರಿಯಿಸಲು ಪ್ರಜ್ವಲ್ ತಂದೆ ಹೆಚ್.ಡಿ. ರೇವಣ್ಣ ನಿರಾಕರಿಸಿದ್ದಾರೆ. ರೇವಣ್ಣ ಅವರ ನಿವಾಸದಲ್ಲಿ ನೀರವ ಮೌನ ಆವರಿಸಿದೆ.

ಇದರೊಂದಿಗೆ ನಾಲ್ಕು ಅತ್ಯಾಚಾರ ಪ್ರಕರಣಗಳ ಪೈಕಿ ಪ್ರಜ್ವಲ್ ವಿರುದ್ಧ ತೀರ್ಪು ಹೊರಬಿದ್ದ ಮೊದಲ ಪ್ರಕರಣ ಇದಾಗಿದೆ. ತೀರ್ಪು ಪ್ರಕಟಿಸುತ್ತಿದ್ದಂತೆ ಪ್ರಜ್ವಲ್ ತಲೆ ತಗ್ಗಿಸಿ, ಕಣ್ಣೀರು ಸುರಿಸುತ್ತಾ ನ್ಯಾಯಾಲಯ ಆವರಣದಿಂದ ನಿರ್ಗಮಿಸಿದರು, ನಂತರ ಅವರನ್ನು ಕಾರಾಗೃಹಕ್ಕೆ ಕರೆದೊಯ್ಯಲಾಯಿತು.

ಪ್ರಕರಣದ ತೀರ್ಪನ್ನು ಜುಲೈ 30 ರಂದೇ ಪ್ರಕಟಿಸಬೇಕಿತ್ತು, ಆದರೆ, ಕೆಲವು ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ ಕಾಯ್ದಿರಿಸಿದ್ದ ತೀರ್ಪನ್ನು ಇಂದು ಪ್ರಕಟಿಸಲಾಯಿತು. ಈ ಅಪರಾಧಕ್ಕೆ ಕನಿಷ್ಠ 10 ವರ್ಷ, ಗರಿಷ್ಠ ಜೀವಾವಧಿ ಶಿಕ್ಷೆಗೆ ಒಳ ಪಡುವ ಸಾಧ್ಯತೆ ಇದೆ.

ವಿಶೇಷ ನ್ಯಾಯಾಲಯ ಪ್ರಕರಣದ ವಿಚಾರಣೆಯನ್ನು ಜುಲೈ 29 ರಂದು ಪೂರ್ಣಗೊಳಿಸಿತ್ತು ಪ್ರಾಸಿಕ್ಯೂಷನ್ ಹಾಗೂ ಆರೋಪಿಗಳ ಪರ ವಕೀಲರು ಗೂಗಲ್ ಮ್ಯಾಪ್ ಸಹ ಸಾಕ್ಷ್ಯವನ್ನಾಗಿಸಿ ವಾದ ಮಂಡಿಸಿದ್ದರು, ಆದರೆ, ಗೂಗಲ್ ಕಂಪನಿ ದೃಢೀಕರಣವಿಲ್ಲದೇ ಸಲ್ಲಿಸಿರುವ ಮ್ಯಾಪ್ ಅನ್ನು ಸಾಕ್ಷಿಯನ್ನಾಗಿ ಪರಿಗಣಿಸ ಬಹುದೇ ಎಂದು ನ್ಯಾಯಾಲಯ ಸ್ಪಷ್ಟನೆ ಕೇಳಿತ್ತು.

ಇದಕ್ಕೆ ಉತ್ತರಿಸಿದ್ದ ಪೊಲೀಸ್ ವರಿಷ್ಠಾಧಿಕಾರಿ, ಅತ್ಯಾಚಾರ ನಡೆದ ಹೊಳೆನರಸೀಪುರ ಫಾರ್ಮ್ ಹೌಸ್‌ನ ಅಕ್ಷಾಂಶ ಹಾಗೂ ರೇಖಾಂಶವನ್ನು ಮಹಜರು ದಾಖಲೆಯಲ್ಲಿ ನಮೂದಿಸಿ ಸಲ್ಲಿಸಲಾಗಿದೆ, ಕ್ಲಿಕ್ ಮಾಡಿದರೆ ಗೂಗಲ್ ಮ್ಯಾಪ್‌ನಲ್ಲಿ ಫಾರ್ಮ್ ಹೌಸ್ ಲೊಕೇಷನ್ ಹಾಗೂ 2021ರ ಫೋಟೋ ಲಭಿಸ ಲಿದ್ದು ದಾಖಲೆಯ ಭಾಗವಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ವಶಕ್ಕೆ ಪಡೆಯಲಾದ ಸ್ಯಾಮ್ಸಂಗ್ ಜೆ4 ಮೊಬೈಲ್ ಫೋನ್ ಅನ್ನು ತನಿಖಾ ಧಿಕಾರಿ ಪ್ರಸಕ್ತ ಕೇಸಿನಲ್ಲಿ ಜಪ್ತಿ ಮಾಡಿದ ಬಗ್ಗೆ ಸ್ಪಷ್ಟೀಕರಣ ಬೇಕಿದೆ ಎಂಬುದಾಗಿ ನ್ಯಾಯಾಲಯ ಕೇಳಿತ್ತು. ಇದಕ್ಕೆ ▶ 10ನೇ ಪುಟಕ್ಕೆ



ಪ್ರಜ್ವಲ್ ರೇವಣ್ಣ

ರಾಜಕೀಯ ಭವಿಷ್ಯ ಅಂತ್ಯ?

ಕೋರ್ಟ್ ಪ್ರಜ್ವಲ್ ರೇವಣ್ಣ ದೋಷಿ ಎಂದು ತೀರ್ಮಾನಿಸಿ ತೀರ್ಪು ನೀಡಿರುವುದರಿಂದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ರಾಜಕೀಯ ಭವಿಷ್ಯವೇ ಅಂತ್ಯವಾದಂತಾಗಬಹುದು. ಪ್ರಜ್ವಲ್‌ಗೆ ಕನಿಷ್ಠ 10 ವರ್ಷಗಳಿಂದ ಗರಿಷ್ಠ ಜೀವಾವಧಿ ಶಿಕ್ಷೆ ಪ್ರಕಟಿಸುವ ಸಾಧ್ಯತೆ ಕೂಡ ಇದೆ ಎನ್ನಲಾಗುತ್ತಿದೆ. ಹೀಗಾಗಿ ಅವರು ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸುವ ಅರ್ಹತೆ ಕಳೆದು ಕೊಳ್ಳಲಿದ್ದಾರೆ ಎಂದು ಹೇಳಲಾಗುತ್ತಿದೆ.

ಕೋರ್ಟ್ ಹಾಲ್‌ನಲ್ಲೇ ಬಿಕ್ಕಿ ಬಿಕ್ಕಿ ಅತ್ತ ಪ್ರಜ್ವಲ್

ಬೆಂಗಳೂರು, ಆ.1– ಮನೆ ಕೆಲಸದ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಜನ ಪ್ರತಿನಿಧಿಗಳ ನ್ಯಾಯಾಲಯದ ತೀರ್ಪು ಹೊರಬೀಳುತ್ತಲೇ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಕಣ್ಣೀರು ಹಾಕಿದ್ದಾರೆ.

ತೀರ್ಪು ಪ್ರಕಟವಾಗುತ್ತಿದ್ದಂತೆಯೇ ಪ್ರಜ್ವಲ್ ರೇವಣ್ಣ ಕಣ್ಣೀರು ಹಾಕಿದರು. ಬಳಿಕ ಪ್ರಜ್ವಲ್ ರೇವಣ್ಣ ಅವರನ್ನು ಪೊಲೀಸ್ ಸಿಬ್ಬಂದಿ ಕೋರ್ಟ್‌ಹಾಲ್‌ನಿಂದ ಕರೆದೊಯ್ದರು. ಈ ವೇಳೆಯೂ ಜೋರಾಗಿ ಅಳುತ್ತಲೇ ಇದ್ದರು.

ಕಣ್ಣೀರು ಒರೆಸಿಕೊಳ್ಳುತ್ತಾ ಪ್ರಜ್ವಲ್ ರೇವಣ್ಣ ಕೋರ್ಟ್‌ಹಾಲ್‌ನಿಂದ ತೆರಳಿದರು. ಕೋರ್ಟ್ ಹಾಲ್ ಹೊರಗೆ ಪ್ರಜ್ವಲ್ ರೇವಣ್ಣ ಪರ ವಕೀಲರು ಅವರನ್ನು ಸಂತೈಸುವ ಕೆಲಸ ಮಾಡಿದರು.

14 ತಿಂಗಳಿಂದ ಪ್ರಜ್ವಲ್ ಸೆರೆ ವಾಸ!: ಅತ್ಯಾಚಾರ ಪ್ರಕರಣದಲ್ಲಿ ಜೈಲು ಸೇರಿರುವ ಮಾಜಿ ಸಂಸದ ಪ್ರಜಲ್ ರೇವಣ್ಣ ಕಳೆದ 14 ತಿಂಗಳಿಂದ ಸೆರೆಮನೆಯಲ್ಲಿ ಬಂಧಿಯಾಗಿದ್ದಾರೆ. ಪ್ರಜ್ವಲ್ ರೇವಣ್ಣ ವಿರುದ್ಧ ಹಲವು ಸೆಕ್ಷನ್‌ಗಳ ಅಡಿಯಲ್ಲಿ ಕೇಸ್ ದಾಖಲಾಗಿತ್ತು.

ಐಪಿಸಿ ಸೆಕ್ಷನ್ 376 (2)(k) ಅಡಿ ಮಹಿಳೆಯ ಮೇಲೆ ಹಕ್ಕು ಚಲಾಯಿಸುವ ಸ್ಥಿತಿಯಲ್ಲಿದ್ದು ಅತ್ಯಾಚಾರ ಎಸಗಲಾಗಿದೆ 376 (2) (n) ಅಡಿ ಮಹಿಳೆಯ ಮೇಲೆ ಪದೇ ಪದೆ ಅತ್ಯಾಚಾರ. 354(A) ಲೈಂಗಿಕತೆ ಬೇಡಿಕೆ ಇಡುವುದು. 354 (B) ಮಹಿಳೆಯನ್ನು ವಿವಸ್ತ್ರಗೊಳಿಸುವುದು. 354 (c) ಮಹಿಳೆಯ ಅಶ್ಲೀಲ ದೃಶ್ಯ ಚಿತ್ರೀಕರಿಸುವುದು. 506 ಜೀವ ಬೆದರಿಕೆ, 201 ಸಾಕ್ಷ್ಯನಾಶದ ಅಡಿ ದೋಷಾರೋಪ ಹೊರಿಸಲಾಗಿದೆ.


71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟ

ಶಾರುಖ್ ಖಾನ್–ವಿಕ್ರಾಂತ್ ಮೆಸ್ಸಿ ಅತ್ಯುತ್ತಮ ನಟರು; ರಾಣಿ ಮುಖರ್ಜಿ ಅತ್ಯುತ್ತಮ ನಟಿ


12th ಫೇಲ್ ಅತ್ಯುತ್ತಮ ಚಿತ್ರ



ಶಾರುಖ್ ಖಾನ್



ವಿಕ್ರಾಂತ್ ಮೆಸ್ಸಿ




ರಾಣಿ ಮುಖರ್ಜಿ

ನವದೆಹಲಿ: 2023ನೇ ಸಾಲಿನ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಶುಕ್ರವಾರ ಪ್ರಕಟಗೊಂಡಿದೆ. ದೆಹಲಿಯ ರಾಷ್ಟ್ರೀಯ ಮಾಧ್ಯಮ ಕೇಂದ್ರದಲ್ಲಿ ನಡೆದ ಸುದ್ದಿ ಗೋಷ್ಠಿಯಲ್ಲಿ ಪ್ರಶಸ್ತಿ ವಿಜೇತರ ಹೆಸರುಗಳನ್ನು ಘೋಷಿಸಲಾಗಿದೆ. ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆಯಲು ಅರ್ಹರಾಗಿರುವ ಚಲನ ಚಿತ್ರಗಳು ಜನವರಿ 1, 2023ರಿಂದ ಡಿಸೆಂಬರ್ 31, 2023ರ ನಡುವೆ ಸಿಬಿಎಫ್‌ಸಿ (ಸೆಂಟ್ರಲ್ ಬೋರ್ಡ್ ಆಫ್ ಫಿಲ್ಮ್ ಸರ್ಟಿಫಿಕೇಶನ್) ನಿಂದ ಪ್ರಮಾಣೀಕರಣವನ್ನು ಪಡೆದಿವೆ.

ಅನಿಮಲ್, ಹಾಯ್ ನಾನ, ಪಠಾಣ್, ಕಾಥಲ್ ದಿ ಕೋರ್ ಮತ್ತು ಇನ್ನೂ ಅನೇಕ ಚಲನಚಿತ್ರಗಳು 2023 ರಲ್ಲಿ ಬಿಡುಗಡೆಗೊಂಡು ಜನಮನಸೂರೆಗೊಂಡಿದ್ದವು. 'ಜವಾನ್' ಚಿತ್ರಕ್ಕಾಗಿ ಶಾರುಖ್ ಖಾನ್ ಮತ್ತು '12th fail' ▶ 10ನೇ ಪುಟಕ್ಕೆ

ಕನ್ನಡಕ್ಕೆ ರಾಷ್ಟ್ರಪ್ರಶಸ್ತಿ ತಂದ 'ಕಂದೀಲು'

ನವದೆಹಲಿ,ಆ.1– 'ಕಂದೀಲು' ಅತ್ಯುತ್ತಮ ಕನ್ನಡ ಸಿನಿಮಾ ರಾಷ್ಟ್ರಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ಫೀಚರ್ ಫಿಲ್ಮ್ ವಿಭಾಗದಲ್ಲಿ ಅತ್ಯುತ್ತಮ ಕನ್ನಡ ಸಿನಿಮಾ ಪ್ರಶಸ್ತಿಯನ್ನು ಯಶೋಧ ಪ್ರಕಾಶ್ ನಿರ್ದೇಶನದ 'ಕಂದೀಲು – ದಿ ರೇ ಆಫ್ ಹೋಪ್' ಪಡೆದುಕೊಂಡಿದೆ. ಸ್ವಸ್ತಿಕ್ ಎಂಟರ್‌ಟೇನ್‌ಮೆಂಟ್ ನಿರ್ಮಾಣದ ಸಿನಿಮಾ ಇದಾಗಿದೆ. ಅಶುತೋಷ್ ಗೋವಾರಿಕರ್, ಕನ್ನಡದ ನಿರ್ದೇಶಕ ಪಿ.ಶೇಷಾದ್ರಿ ಇದ್ದ ತೀರ್ಪುಗಾರರ ತಂಡ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯ ವಿಜೇತರನ್ನು ಆಯ್ಕೆ ಮಾಡಿದೆ.



ಬೆಸ್ಟ್ ಸ್ಕ್ರಿಪ್ಟ್ (ನಾನ್ ಫೀಚರ್ ಫಿಲ್ಮ್) ವಿಭಾಗದಲ್ಲಿ ಮೈಸೂರಿನ ಚಿದಾನಂದ ನಾಯಕ್ ಅವರ 'ಸನ್‌ಫ್ಲವರ್ಸ್ ವೇರ್ ದಿ ಫಸ್ಟ್ ಒನ್ಸ್ ಟು ನೋ' ಪ್ರಶಸ್ತಿ ಬಾಚಿಕೊಂಡಿದೆ. ಚಿದಾನಂದ ಅವರ 'ಸನ್‌ಫ್ಲವರ್ಸ್ ▶ 10ನೇ ಪುಟಕ್ಕೆ

ಉಪರಾಷ್ಟ್ರಪತಿ ಚುನಾವಣೆ ಸೆ.9ಕ್ಕೆ

ನವದೆಹಲಿ, ಆ.1– ದೇಶದ ಮುಂದಿನ ಉಪ ರಾಷ್ಟ್ರಪತಿ ಆಯ್ಕೆಗಾಗಿ ಸೆ.9ರಂದು ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಆಗಸ್ಟ್ 7ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದ್ದು 21ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶವಿದೆ.

ಆಗಸ್ಟ್ 22ರಂದು ನಾಮಪತ್ರಗಳ ಪರಿಶೀಲನೆ, ನಾಮಪತ್ರ ಹಿಂಪಡೆಯಲು ಕೊನೆಯ ದಿನಾಂಕ ಆಗಸ್ಟ್ 25 ಆಗಿದೆ. ಮತದಾನ ಸೆಪ್ಟೆಂಬರ್ 9ರಂದು ನಡೆಯಲಿದ್ದು ಅದೇ ದಿನ ಎಣಿಕೆ ನಡೆಯಲಿದೆ ಎಂದು ಚುನಾವಣಾ ಆಯೋಗ ಮಾಹಿತಿ ನೀಡಿದೆ.

ಉಪರಾಷ್ಟ್ರಪತಿ ಚುನಾವಣೆಯಲ್ಲಿ, ರಾಜ್ಯಸಭೆಯ 233 ಚುನಾಯಿತ ಸದಸ್ಯರು, 12 ನಾಮನಿರ್ದೇಶಿತ ಸದಸ್ಯರು ಮತ್ತು ಲೋಕಸಭೆಯ 543 ಸಂಸದರು ಸೇರಿ ಒಟ್ಟು 788 ಜನರು ಮತ ಚಲಾಯಿಸಬಹುದು.

ಆರೋಗ್ಯದ ಕಾರಣ ನೀಡಿ ಭಾರತದ ಉಪ ರಾಷ್ಟ್ರಪತಿ ಸ್ಥಾನಕ್ಕೆ ಜಗದೀಪ್ ಧಂಖರ್ ರಾಜೀ ನಾಮೆ ನೀಡಿದರು. 2022ರಿಂದ ಈ ಹುದ್ದೆಯಲ್ಲಿ ಅವರು ಸೇವೆ ಸಲ್ಲಿಸುತ್ತಿದ್ದರು. 74 ವರ್ಷದ ಅವರು, ರಾಜ್ಯಸಭಾ ಅಧ್ಯಕ್ಷರಾಗಿ ಮಳೆಗಾಲದ ಅಧಿವೇಶನದ ಮೊದಲ ದಿನದ ಅಧ್ಯಕ್ಷತೆ ವಹಿಸಿದ ನಂತರ ರಾಜೀನಾಮೆ ಘೋಷಣೆ ಮಾಡಿದರು.

ಮುಂದುವರೆದ ಉಪ ಲೋಕಾಯುಕ್ತರಿಂದ ದೂರು ಅರ್ಜಿ ವಿಚಾರಣೆ

ತಪ್ಪು ಮಾಹಿತಿ ನೀಡಿದ ಅಧಿಕಾರಿಗೆ ಮಾತಿನ ಛಾಟಿ; ದೂರುದಾರರಿಗೆ ಕಾನೂನು ಪಾಠ


ಮೈಸೂರು, ಆ.1(ಎಂಟಿವೈ)– ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕರ್ನಾಟಕ ಉಪ ಲೋಕಾಯುಕ್ತ ನ್ಯಾ.ಕೆ.ಎನ್. ಫಣೀಂದ್ರ, ಎರಡನೇ ದಿನವಾದ ಶುಕ್ರವಾರವೂ ಜಿಲ್ಲಾಮಟ್ಟದ ದೂರು ಅರ್ಜಿಗಳ ವಿಚಾರಣೆ ನಡೆಸಿ, ತಪ್ಪು ಮಾಹಿತಿ ನೀಡಿದ ಅಧಿಕಾರಿಗಳಿಗೆ ಮಾತಿನ ಛಾಟಿ ಬೀಸಿದರೆ, ಅರ್ಜಿ ಸಲ್ಲಿಸಿದ ಹಲವರಿಗೆ ಕಾನೂನಿನ ಮಾಹಿತಿ ನೀಡಿದರು.

ಜಿ.ಪಂ. ಸಭಾಂಗಣದಲ್ಲಿ ಶುಕ್ರವಾರವೂ ವಿಚಾರಣೆ ಮುಂದುವರೆದಿತ್ತು. ಇಂದು ಬೆಳಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದೂರು ಅರ್ಜಿಗಳ ವಿಚಾರಣೆ ಆರಂಭಿಸಿದ ಉಪ ಲೋಕಾಯುಕ್ತರು ಕೆಲವು ಅರ್ಜಿಗಳನ್ನು ವಿಲೇ ವಾರಿ ಮಾಡಿದರೆ, ಅಧಿಕಾರಿಗಳ ವಿಳಂಬ ಧೋರಣೆಯಿಂದ ಇತ್ಯರ್ಥವಾಗದ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಬಗೆಹರಿಸಿ ವರದಿ ನೀಡುವಂತೆ ಆದೇಶಿಸಿದರು.

ಸುಳ್ಳು ಹೇಳಿ ಸಿಕ್ಕಿಹಾಕಿಕೊಂಡ ಅಧಿಕಾರಿ: ತಿ.ನರಸೀಪುರ ತಾಲೂಕಿನ ವೀರಭದ್ರಸ್ವಾಮಿ ಎಂಬುವರು, ವ್ಯಕ್ತಿಯೊಬ್ಬರು ರಸ್ತೆ ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿದ್ದಾರೆ ಎಂದು ನೀಡಿದ್ದ ದೂರನ್ನು ವಿಚಾರಣೆಗೆ ಕೈಗೆತ್ತಿಕೊಂಡ ನ್ಯಾ.ಕೆ.ಎನ್.ಫಣೀಂದ್ರರಿಗೆ ಸಮಜಾಯಿಷಿ ನೀಡಿದ ಅಧಿಕಾರಿ, ಒತ್ತುವರಿ ತೆರವು ಮಾಡಲಾಗಿದೆ ಎಂದು ಉತ್ತರಿಸಿದರು. ಇದಕ್ಕೆ ದೂರುದಾರ, ಅಧಿಕಾರಿ ಸುಳ್ಳು ಹೇಳುತ್ತಿದ್ದಾರೆ ಎಂದು ಆರೋಪಿಸಿದರು. ಈ ವೇಳೆ ಅಧಿಕಾರಿಯೇ ತೆರವು ಮಾಡಲಾಗಿದೆ ಎಂದು ಫೋಟೋ ತೋರಿಸಿದರು. ಅದರಲ್ಲಿ ಒತ್ತುವರಿ ತೆರವು ಅಪೂರ್ಣವಾಗಿರುವುದು ಹಾಗೂ ರಸ್ತೆಯ ಜಾಗ ಆಕ್ರಮಿಸಿಕೊಂಡು ಮನೆ ಕಟ್ಟಿಕೊಂಡಿರುವುದು ಕಾಣುತ್ತಿತ್ತು.

ಇದರಿಂದ ಕೋಪಗೊಂಡ ಉಪಲೋಕಾಯುಕ್ತರು, ಒತ್ತುವರಿ ತೆರವು ಮಾಡಿರುವುದಾಗಿ ನೀವೇ ಸುಳ್ಳು ಹೇಳುತ್ತಿದ್ದೀರಿ. ನೀವು ಫೋಟೋ ತೋರಿಸಿ ಸಿಕ್ಕಿ ಹಾಕಿಕೊಂಡಿದ್ದೀರಿ. ನೀವು ತೋರಿಸುವ ಫೋಟೋದಲ್ಲಿ ಅಪೂರ್ಣ ಕೆಲಸ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ವಾಸ್ತವ ಒಪ್ಪಿಕೊಳ್ಳಿ. ಸುಳ್ಳು ಹೇಳಿ ನಮಗೆ ದಾರಿ ತಪ್ಪಿಸಲು ನೋಡುತ್ತೀರಾ. ಹೀಗೆ ಮಾಡಿದರೆ ಮನೆಗೆ ಕಳುಹಿಸಿ ಬಿಡುತ್ತೇನೆ. ಒತ್ತುವರಿ ಮಾಡುವವರೆಗೂ ಏನು ಮಾಡುತ್ತಿದ್ದೀರಿ? ಇನ್ನೂ 15 ದಿನದೊಳಗೆ ಒತ್ತುವರಿ ತೆರವು ಮಾಡಿ ಛಾಯಾಚಿತ್ರ ಸಹಿತ ವರದಿ ಸಲ್ಲಿಸಬೇಕು. ತಪ್ಪಿದ್ದಲ್ಲಿ ಅಮಾನತು ಮಾಡಲು ಆದೇಶಿಸಲಾಗುವುದು ಎಂದು ಎಚ್ಚರಿಸಿದರು.

ಸಾಮಾನ್ಯ ಜ್ಞಾನ ಇಲ್ವಾ: ಮತ್ತೊಂದು ಪ್ರಕರಣದಲ್ಲಿ ತಾತನ ಆಸ್ತಿಯನ್ನು ಅಜ್ಜಿಗೆ ವರ್ಗಾವಣೆ ಮಾಡುವ ಬದಲು, ತಮ್ಮನ ಮಗನ ಹೆಸರಿಗೆ ವರ್ಗಾವಣೆ ಮಾಡಿ, ಅಕ್ರಮ ಖಾತೆ ಮಾಡಿಕೊಡಲಾಗಿದೆ ಎಂದು ದೂರುದಾರ ಅಳಲು ತೋಡಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ಪಿಡಿಒ, ನಾನು ಹೊಸದಾಗಿ ಬಂದಿದ್ದೇನೆ. ಇದನ್ನು ಹಿಂದಿನವರು ಮಾಡಿದ್ದಾರೆ ▶ 10ನೇ ಪುಟಕ್ಕೆ



ಉಪಲೋಕಾಯುಕ್ತ ನ್ಯಾ.ಕೆ.ಎನ್.ಫಣೀಂದ್ರ

ವೃತ್ತಿಪರ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆ ತಾತ್ಕಾಲಿಕ ಫಲಿತಾಂಶ ಪ್ರಕಟ

● ಇಂದು ಬೆಳಗ್ಗೆ 11 ಗಂಟೆವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ● ಇ–ಮೇಲ್ ಮೂಲಕ ಆಕ್ಷೇಪ ಸಲ್ಲಿಸಬಹುದು; ನಂತರ ಅಂತಿಮ ಫಲಿತಾಂಶ ಪ್ರಕಟ ● ವೈದ್ಯಕೀಯ ಹೊರತು ಉಳಿದ ಕೋರ್ಸ್‌ಗಳ ಕಾಲೇಜು ಪ್ರವೇಶಕ್ಕೆ ವೇಳಾಪಟ್ಟಿ ಪ್ರಕಟ

ಬೆಂಗಳೂರು, ಆ.1(ಕೆಎಂಶಿ)– ಎಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇಂದು ಪ್ರಕಟಿಸಿದೆ.

ಫಲಿತಾಂಶಕ್ಕೆ ಆಕ್ಷೇಪಣೆಗಳಿದ್ದಲ್ಲಿ ಆಗಸ್ಟ್ 2ರ ಬೆಳಗ್ಗೆ 11 ಗಂಟೆಯೊಳಗೆ ಇ–ಮೇಲ್ ಮೂಲಕ ಕೆಇಎಗೆ ಸಲ್ಲಿಸಬಹುದಾಗಿದೆ, ನಂತರ ದೂರು ಪರಿಶೀಲಿಸಿ, ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅಂತಿಮ ಫಲಿತಾಂಶ ಪ್ರಕಟಣೆ ನಂತರ ವೈದ್ಯಕೀಯ ಕೋರ್ಸ್ ಹೊರತುಪಡಿಸಿ, ಎಂಜಿನಿಯರಿಂಗ್, ಕೃಷಿ ಇತ್ಯಾದಿ ಕೋರ್ಸ್‌ಗಳ ಕಾಲೇಜು ಪ್ರವೇಶಕ್ಕೆ ಸಂಬಂಧಿಸಿದಂತೆ ವೇಳಾಪಟ್ಟಿ ಪ್ರಕಟಿಸಲಾಗುತ್ತದೆ. ರಾಷ್ಟ್ರ ಮಟ್ಟದಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಹೋಮಿಯೋಪಥಿ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಇನ್ನೂ ಪ್ರಕಟವಾಗದ ಕಾರಣ, ಈ ಕೋರ್ಸ್‌ಗಳ ▶ 10ನೇ ಪುಟಕ್ಕೆ

ಕೈಕೊಟ್ಟ ಮಧ್ಯವರ್ತಿ; ಕಸದ ರಾಶಿ ಸೇರಿದ 14 ಟನ್ ಎಲೆಕೋಸು!

ಮೈಸೂರು, ಆ.1(ಎಂಕೆ,ಎಲ್‌ಎನ್‌ವೈ)– ಮಧ್ಯವರ್ತಿ ಮಾತು ನಂಬಿ ಹಾಸನದ ರೈತರೊಬ್ಬರು ಭಾರೀ ನಷ್ಟಕ್ಕೀಡಾಗಿದ್ದಾರೆ. ಹಿಂದೆಲ್ಲಾ ಆಲೂಗಡ್ಡೆ ಬೆಳೆದು ಒಳ್ಳೆ ಬೆಲೆ ಸಿಗುತ್ತೆ ಎಂದು ಬೆಂಗಳೂರು, ಪುಣೆ, ಬಾಂಬೆ ಮಾರುಕಟ್ಟೆ ಎಂದು ಅಲೆದು ಕೊನೆಗೆ ಲಾರಿ ಬಾಡಿಗೆಯೂ ದಕ್ಕದೇ ನಷ್ಟಕ್ಕೀಡಾಗುತ್ತಿದ್ದ ರೈತರು ಈಗ ತರಕಾರಿ ಬೆಳೆದು ಬೀದಿಗೆ ಬರುತ್ತಿದ್ದಾರೆ.

ಮೈಸೂರಿನ ಬಂಡಿಪಾಳ್ಯ ಎಪಿಎಂಸಿ ಸಗಟು ಮಾರುಕಟ್ಟೆಯ ಮಧ್ಯವರ್ತಿ ಮಾತು ನಂಬಿ, ಹಾಸನ ರೈತರೊಬ್ಬರು ಲಾರಿ ತುಂಬಾ ಎಲೆಕೋಸು ತಂದು ಅದು ವ್ಯಾಪಾರವಾಗದೆ ಸುಮಾರು 1.50 ಲಕ್ಷದಷ್ಟು ನಷ್ಟ ಅನುಭವಿಸಿದ್ದಾರೆ. ಎಪಿಎಂಸಿ ಮಾರುಕಟ್ಟೆಯ ಮಧ್ಯವರ್ತಿ ಚಂದ್ರಪ್ಪ, ಎಲೆಕೋಸು ತಂದರೆ ಒಳ್ಳೆ ಬೆಲೆಗೆ ಮಾರಾಟ ಮಾಡಿಸಿಕೊಡುವುದಾಗಿ ಹೇಳಿದ ಮಾತನ್ನು ನಂಬಿ ಲಾರಿ ತುಂಬಾ ಎಲೆಕೋಸು ತುಂಬಿಕೊಂಡು ಬಂದಿದ್ದ ಹಾಸನದ ರೈತ ರಂಗನಾಥ್, ಎರಡು ದಿನ ಕಾದು ಕಡೆಗೆ, ಮೂರು ತಿಂಗಳು ದುಡಿಮೆ ಮಾಡಿ ಕಷ್ಟಪಟ್ಟು ಬೆಳೆದಿದ್ದ ಬೆಳೆಯನ್ನು ಒಲ್ಲದ ಮನಸ್ಸಿನಿಂದಲೇ ರಸ್ತೆಗೆ ಸುರಿದಿದ್ದಾರೆ.

ಈ ಮಧ್ಯವರ್ತಿ ಚಂದ್ರಪ್ಪ, ಈ ಮೊದಲು ರಂಗನಾಥರ ಒಂದು ಲೋಡ್ ಎಲೆಕೋಸು ಮಾರಾಟ ಮಾಡಿಸಿಕೊಟ್ಟಿದ್ದರು. ಅದೇ ರೀತಿ ಈ ಬಾರಿಯೂ ಮಾರಾಟ ಮಾಡಿಸಿಕೊಡುವುದಾಗಿ ಹೇಳಿದ್ದನ್ನು ನಂಬಿ ಬಂದೆ.ಆದರೆ ಅಂದುಕೊಂಡಂತೆ ಏನೂ ಆಗಲಿಲ್ಲ. ಬೇರೆ ದಾರಿ ಇಲ್ಲದೆ ಕಸದ ರಾಶಿಗೆ ಸುರಿಯಬೇಕಾಯಿತು ಎಂದು 'ಮೈಸೂರು ಮಿತ್ರ'ನಿಗೆ ರೈತ ರಂಗನಾಥ್ ಬೇಸರ ವ್ಯಕ್ತಪಡಿಸಿದರು. ಬುಧವಾರ (ಜು.30) ರಾತ್ರಿ 11 ಗಂಟೆಗೆ, 14 ಟನ್ ಎಲೆಕೋಸನ್ನು ಲೋಡ್ ಮಾಡಿ ಕೊಂಡು ಬಂಡಿಪಾಳ್ಯ ಎಪಿಎಂಸಿ ಮಾರು ಕಟ್ಟೆಗೆ ಬಂದೆ. ಬಂದು ಕೇಳಿದ್ದಕ್ಕೆ ಗುರುವಾರ(ಜು.31) ಬೆಳಗ್ಗೆ ▶ 10ನೇ ಪುಟಕ್ಕೆ



ಮಧ್ಯವರ್ತಿ ಚಂದ್ರಪ್ಪ ಕೈಕೊಟ್ಟ ಹಿನ್ನೆಲೆಯಲ್ಲಿ ಕಸದ ರಾಶಿಗೆ ಎಲೆಕೋಸು ಸುರಿಯುತ್ತಿರುವ ರೈತ ರಂಗನಾಥ್.

ತರಕಾರಿ ಯಾರ್ಡ್‌ನಲ್ಲೇ ಮೂರು ಜನ ಸೂಪರ್ ವೈಸರ್‌ಗಳು ಇರುತ್ತಾರೆ. ಅವರ ಗಮನಕ್ಕೆ ತಂದಿದ್ದರೆ ಮಾರಾಟ ಮಾಡಿಸು ತ್ತಿದ್ದರು. ಮಧ್ಯವರ್ತಿಗಳಿಂದ ಮೋಸ ಹೋಗಿರುವ ಬಗ್ಗೆ ಅವರಿಗೆ ತಿಳಿಸಿದ್ದರೂ ಕೂಡಲೇ ಕ್ರಮ ವಹಿಸುತ್ತಿದ್ದರು. ನಾವು ರೈತರಿಗಾಗಿಯೇ ಇರುವುದು. ಈಗಲೂ ಮೋಸ ಮಾಡಿದವರು ಯಾರೆಂದು ಮಾಹಿತಿ ನೀಡಿದರೆ, ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

-ಆರ್.ಎಂ.ಕುಮಾರಸ್ವಾಮಿ, ಕಾರ್ಯದರ್ಶಿ, ಎಪಿಎಂಸಿ, ಮೈಸೂರು.

ರೈತರ ಕಷ್ಟ ಮಧ್ಯವರ್ತಿಗಳಿಗೇನು ಗೊತ್ತು...?

ಮಳೆ–ಗಾಳಿ–ಬಿಸಿಲೆನ್ನದೇ ಪರಿಶ್ರಮ ಪಟ್ಟು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ತರುವ ರೈತರ ಕಷ್ಟ, ಮಾರುಕಟ್ಟೆಯಲ್ಲಿ ಅತ್ತಿತ್ತಾ ತಿರುಗಾಡುತ್ತಾ ಹಣ ಸಂಪಾದಿಸುವ ಮಧ್ಯವರ್ತಿಗಳಿಗೆ ತಿಳಿದಿತೇ ಎಂದು ಪ್ರತ್ಯಕ್ಷದರ್ಶಿಗಳು ಪ್ರಶ್ನಿಸಿದ್ದಾರೆ.

ಕಳೆದ ತಿಂಗಳಷ್ಟೇ ರೈತರೊಬ್ಬರು ಬಂದು ಲೋಡ್‌ನಷ್ಟು ಟೊಮ್ಯಾಟೊವನ್ನು ಇದೇ ಸ್ಥಳದಲ್ಲಿ ಸುರಿದಿದ್ದರು. ಬೆಲೆ ಕಡಿಮೆ ಆದಾಗಲೆಲ್ಲಾ ರೈತರ ಕಷ್ಟ ಕೇಳುವವರೇ ಇಲ್ಲದಂತಾಗಿದೆ. ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ ಎಂಬುದು ಒಂದು ಕಡೆಯಾದರೆ, ಮಧ್ಯವರ್ತಿಗಳ ಹಾವಳಿ ರೈತರನ್ನು ಕಂಗೆಡಿಸಿದೆ. ಇದು ನಾವು ರೈತರ ಪರ ಎಂದು ಬೊಗಳೆ ಬಿಡುವ ರಾಜಕಾರಣಿಗಳ ಗಮನಕ್ಕೆ ಬರುವುದು ಯಾವಾಗ, ಅವರು ಅನ್ನದಾತರಿಗೆ ನೆರವಾಗುವುದು ಯಾವಾಗ ಹೇಳಿ ಎಂದು ಹಲವರು ಕಿಡಿಕಾರಿದ್ದಾರೆ.

ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ ವಾರ್ಷಿಕೋತ್ಸವ

ಜಾತಿಗಣತಿ ವೇಳೆ ಸರಿಯಾದ ಮಾಹಿತಿ ಬರೆಸಬೇಕು

ಆದಿಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ



ಮೈಸೂರಿನ ಕುವೆಂಪುನಗರದ ಆದಿಶಕ್ತಿ ಕಾಳಮ್ಮ ಬಂದಂತಮ್ಮ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ನಡೆದ ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ 25ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವನ್ನು ಆದಿಚುಂಚನಗಿರಿ ಮಹಾಸಂಸ್ಥಾನದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು, ಆ.1(ಎಂಟಿವೈ)– ರಾಜ್ಯದಲ್ಲಿ ಮುಂದಿನ ತಿಂಗಳು ನಡೆಯಲಿರುವ ಜಾತಿಗಣತಿಯಲ್ಲಿ ಒಕ್ಕಲಿಗ ಸಮುದಾಯದ ಪ್ರತಿಯೊಬ್ಬರೂ ಪಾಲ್ಗೊಂಡು ಸರಿಯಾದ ಮಾಹಿತಿ ಬರೆಸಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನದ ಸ್ವಾಮೀಜಿ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ ನೀಡಿದ್ದಾರೆ.

ಮೈಸೂರಿನ ಕುವೆಂಪುನಗರದ ಆದಿಶಕ್ತಿ ಕಾಳಮ್ಮ ಬಂದಂತಮ್ಮ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ನಡೆದ ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ 25ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಜಾತಿ ಗಣತಿ ವೇಳೆ ಜಾತಿ ಬರೆಸುವಾಗ ಉತ್ಪ್ರೇಕ್ಷೆ ಮಾಡಬಾರದು. ಇದರಿಂದ ಸಮಸ್ಯೆ ಎದುರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಂದೆ ಎದುರಾಗಬಹುದಾದ ಸಮಸ್ಯೆ ಬಗೆಹರಿಸಿಕೊಳ್ಳಬೇಕಾದರೆ ಗಣತಿ ವೇಳೆ ಸರಿಯಾದ ಮಾಹಿತಿ ನಮೂದು ಮಾಡುವಂತೆ ತಿಳಿಸಿದರು.

ತಾಯಂದಿರ ಹೃದಯದಲ್ಲಿ ಭಕ್ತಿ, ಮುಖದಲ್ಲಿ ಶಿಸ್ತು, ಪ್ರಜ್ಞೆ, ಜ್ಞಾನದಿಂದ ಹಾಗೂ ನಿಷ್ಕಲ್ಮಶದಿಂದ ಕೂಡಿರುವ ನಗುವಿದ್ದರೆ ಅವರ ಮನೆಗಳಲ್ಲಿ ದೇವತೆಗಳೂ ವಾಸ ಮಾಡುತ್ತಾರೆ. ನಾವು ಇನ್ನೊಬ್ಬರಿಗೆ ತೊಂದರೆ ಕೊಟ್ಟು ನಗಬಾರದು. ನಗುವಿನಲ್ಲಿ ಶ್ರದ್ಧೆ, ವಿಶ್ವಾಸ ಹಾಗೂ ಭಕ್ತಿ ಇರಬೇಕು. ಆಗ ದೇವತೆಗಳಿಗೂ ಮನುಷ್ಯರಿಗೂ ವ್ಯತ್ಯಾಸ ಹೆಚ್ಚಾಗಿ ಕಂಡು ಬರುವುದಿಲ್ಲ. ಯಾವ ಮನಸ್ಸು ಶುದ್ಧವಾಗಿರುತ್ತದೆಯೋ ಅಂತಹ ಮನಸ್ಸಿನಲ್ಲಿ ಒಳ್ಳೆಯ ಮಾತು, ಒಳ್ಳೆಯ ಭಾವನೆ ಮೂಡುತ್ತದೆ ಎಂದರು.

ರಾಷ್ಟ್ರಕವಿ ಕುವೆಂಪು ಹೇಳಿರುವಂತೆ ಮನಸ್ಸು ಮಲ್ಲಿಗೆಯಂತಿದ್ದರೆ, ಮಾತು ಪರಿಮಳದಿಂದ ಕೂಡಿರುತ್ತದೆ. ಶುದ್ಧ ಹಾಗೂ ನಿಷ್ಕಲ್ಮಶ ಮನಸ್ಸಿನಿಂದ ಬರುವ ಮಾತು ಹಾಗೂ ನಗು ಯಾವುದೇ ಸಮಸ್ಯೆಗಳನ್ನೂ ಹೋಗಲಾಡಿಸುತ್ತದೆ. ಹೀಗಾಗಿ ಮನೆಯಲ್ಲಿ ತಾಯಂದಿರನ್ನು ಪ್ರೀತಿಯಿಂದ ನಗುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ತಾಯಂದಿರೂ ತಮ್ಮದೇ ಆದ ಕರ್ತವ್ಯಗಳನ್ನು ಹೊಂದಿದ್ದಾರೆ. ಕಾರ್ಯನಿಮಿತ್ತ ಹೊರ ಹೋದ ಗಂಡನೂ ಸಹ ಓಡಿ ಬರುವಂತಹ ವಾತಾವರಣವನ್ನು ನಿರ್ಮಾಣ ಮಾಡಿರಬೇಕು. ಮಕ್ಕಳು ಶಾಲೆಯಿಂದ ಬಂದರೂ ಅಪ್ಪ ಬಂದಿರುವುದಿಲ್ಲ ಶಾಲೆಗೆ ಬರುವ ಮುಂಚೆ ಅಪ್ಪ ಕೆಲಸಕ್ಕೆ ಹೋಗುತ್ತಿದ್ದಾರೆ ಎಂದು ಸಾಕಷ್ಟು ಮಕ್ಕಳು ಹೇಳುತ್ತಿದ್ದಾರೆ. ಹೀಗಾಗಿ ಮನೆಯನ್ನು ರಕ್ಷಣೆ ಮಾಡುವ ಎಷ್ಟೋ ಅಪ್ಪಂದಿರು ಸಂಡೇ ಫಾದರ್‌ಗಳಾಗುತ್ತಿದ್ದಾರೆ ಎಂದು ವಿಷಾದಿಸಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ನಾಡಪ್ರಭು ಕೆಂಪೇಗೌಡರು ನಾಡಿಗೆ ಸಾಕಷ್ಟು ಕೊಡುಗೆ ಕೊಟ್ಟಿದ್ದಾರೆ ಎಂಬುದು ನಮಗೆ ತಿಳಿದಿದೆ. ಬೆಂಗಳೂರಿನಲ್ಲಿ ಕೋಟೆ ಕಟ್ಟಿದಾಗ ಕೆಂಪೇಗೌಡರ ಸೊಸೆ ಲಕ್ಷ್ಮೀದೇವಿ ತಮ್ಮನ್ನು ತಾವೇ ಬಲಿಕೊಟ್ಟುಕೊಂಡು ಮಾದರಿಯಾಗಿದ್ದಾರೆ. ಅಂತಹ ಮಹಾನ್ ವಿಶೇಷ ವ್ಯಕ್ತಿಯನ್ನು ನಾವೆಲ್ಲರೂ ಸ್ಮರಿಸಬೇಕು. ಸಮಾಜ ಕ್ರಿಯಾಶೀಲವಾಗಲು ಹಾಗೂ ಅಭಿವೃದ್ಧಿಯಾಗಲು ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆ ಲಭಿಸಬೇಕು. ಸಮಾಜದ ಮಹಿಳೆಯರು ಸಂಘಟಿತರಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ನಿಟ್ಟಿನಲ್ಲಿ ಹೆಜ್ಜೆ ಇಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಕವಯಿತ್ರಿ ಡಾ.ಲತಾ ರಾಜಶೇಖರ್, ಮಾಜಿ ಶಾಸಕ ಎಲ್.ನಾಗೇಂದ್ರ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಗಂಗಾಧರ ಗೌಡ, ಮೈಸೂರು–ಚಾಮರಾಜನಗರ ಒಕ್ಕಲಿಗ ಸಂಘದ ಅಧ್ಯಕ್ಷ ಮರಿಸ್ವಾಮಿ, ಗೌರಿ ಹರೀಶ್‌ಗೌಡ, ಮಂಜುಳಾ ಮಾನಸ, ಡಾ. ಹೇಮಾ ನಂದೀಶ್, ಪದ್ಮ, ನಗರ ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರೇಮ ಶಂಕರೇಗೌಡ, ನಾಗಮಣಿ, ಹೇಮಾ, ಲಕ್ಷ್ಮೀಗೌಡ, ಉಷಾರಾಣಿ, ಅನಿತಾ ಮಾದೇಗೌಡ, ಶೈಲಜಾ, ಪದ್ಮಜಾ, ಕೂರ್ಗಳ್ಳಿ ಮಹದೇವ್, ವಾಸು, ಶಿವರಾಜ್, ವಿಕ್ರಾಂತ್, ರಾಮು, ತೇಜಸ್, ರಾಮಕೃಷ್ಣ, ಚಲುವೇಗೌಡ, ಪದಾಧಿಕಾರಿಗಳಾದ ರಾಜೇಶ್ವರಿ ನಾಗರಾಜ, ಅನಿತಾ, ಸುನಂದಾ, ವಸಂತ, ಸುವರ್ಣ ಗಣೇಶ, ವಿಮಲಾ, ರತ್ನಾ, ರುಕ್ಮಿಣಿ ರಮೇಶ್, ಸವಿತಾ ಸಣ್ಣತಮ್ಮೇಗೌಡ ಇನ್ನಿತರರು ಉಪಸ್ಥಿತರಿದ್ದರು.

ಮಾದಕ ವಸ್ತು ಪ್ರಕರಣದ ಹಳೇ ಆರೋಪಿಗಳಿಗೆ ಅಬಕಾರಿ ಅಧಿಕಾರಿಗಳ ಎಚ್ಚರಿಕೆ



ಮಾದಕ ವಸ್ತು ಪ್ರಕರಣದ ಹಳೇ ಆರೋಪಿಗಳಿಗೆ ಅಬಕಾರಿ ಅಧಿಕಾರಿಗಳು ಎಚ್ಚರಿಕೆ ನೀಡಿದರು

ಮೈಸೂರು, ಆ.1– ಮೈಸೂರಲ್ಲಿ ಡ್ರಗ್ಸ್ ಫ್ಯಾಕ್ಟ್ರಿ ಪತ್ತೆಯಾದ ಹಿನ್ನೆಲೆಯಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು, ಹಳೆಯ ಆರೋಪಿಗಳ ವಿಚಾರಣೆ ನಡೆಸಿದರು.

ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರ ನೇತೃತ್ವದಲ್ಲಿ ಶುಕ್ರವಾರ ಈ ಹಿಂದೆ ಎನ್‌ಡಿಪಿಎಸ್ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಹಳೆಯ ಆರೋಪಿಗಳನ್ನು ವಿಚಾರಣೆ ನಡೆಸಿ, ಮತ್ತೆ ಎನ್‌ಡಿಪಿಎಸ್ ಅಕ್ರಮಗಳಲ್ಲಿ ತೊಡಗಿದರೆ ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಯಿತು.

ನಂತರ ಮೈಸೂರು ಉಪ ವಿಭಾಗ ವ್ಯಾಪ್ತಿಯ ಎಲ್ಲಾ ಅಬಕಾರಿ ನಿರೀಕ್ಷಕರು, ಅಬಕಾರಿ ಉಪ ನಿರೀಕ್ಷಕರು ಮತ್ತು ಸಿಬ್ಬಂದಿಗಳಿಗೆ ಎನ್‌ಡಿಪಿಎಸ್ ಪ್ರಕರಣಗಳ ಎಲ್ಲಾ ಆರೋಪಿಗಳ ಮೇಲೆ ನಿಗಾವಹಿಸಲು ಹಾಗೂ ಮಾದಕ ವಸ್ತು/ ಗಾಂಜಾ ಮಾರಾಟ, ಸಾಗಾಣಿಕೆ, ತಯಾರಿಕೆ ಅನುಮಾನಸ್ಪದ ಸ್ಥಳಗಳ ಮೇಲೆ ದಾಳಿ ನಡೆಸಲು ಮತ್ತು ನಿಗಾವಹಿಸಿ ಅಕ್ರಮಗಳು ಕಂಡುಬಂದಲ್ಲಿ ಈ ಸಂಬಂಧ ಪ್ರಕರಣ ದಾಖಲಿಸಲು ಸೂಚಿಸಲಾಯಿತು.

ಭವಿಷ್ಯ ನಿಧಿ ಬಡ್ಡಿದರ ಶೇ.7.1ರಷ್ಟು ನಿಗದಿ

ಮೈಸೂರು, ಆ.1(ಎಸ್‌ಪಿಎನ್)– ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ವಂತಿಕೆದಾರರ ಸಾಮಾನ್ಯ ಭವಿಷ್ಯ ನಿಧಿ ಖಾತೆಯಲ್ಲಿ ಜಮೆಯಾಗಿರುವ ಶಿಲ್ಕಿನ ಮೇಲಿನ ಬಡ್ಡಿದರವನ್ನು 2025ರ ಜು.1ರಿಂದ ಸೆ.30ರವರೆಗಿನ ಅವಧಿಗೆ ವಾರ್ಷಿಕ ಶೇ.7.1ಕ್ಕೆ ನಿಗಧಿಪಡಿಸಲಾಗಿದೆ ಎಂದು ಆರ್ಥಿಕ ಇಲಾಖೆ(ಆಡಳಿತ ಮತ್ತು ಮುಂಗಡಗಳು) ಅಧೀನ ಕಾರ್ಯದರ್ಶಿ ನೇತ್ರಪ್ರಭಾ ಎಂ.ಧಾಯಮಲೆ ಅಧಿಸೂಚನೆ ಹೊರಡಿಸಿದ್ದಾರೆ.

ಮಣ್ಣಿನ ಸಂರಕ್ಷಣೆ ಕಾಯ್ದೆ ಜಾರಿಗೆ ಬರಲಿ

ಭೂಮಿಪುತ್ರ ಸಿ. ಚಂದನ್‌ಗೌಡ ಒತ್ತಾಯ





ರೈತ ಕಲ್ಯಾಣ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡರು ವಿವಿಧ ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ ಹುಟ್ಟುಹಬ್ಬ ಆಚರಿಸಿಕೊಂಡರು. ಈ ವೇಳೆ ರೈತ ಮುಖಂಡರು, ಸ್ನೇಹಿತರು, ಅಭಿಮಾನಿಗಳು ಅವರಿಗೆ ಶುಭ ಹಾರೈಸಿದರು.

ಮೈಸೂರು: ಹೆತ್ತ ತಾಯಿಯಂತೆ ಹೊತ್ತ ತಾಯಿ ಭೂಮಿಯನ್ನು ಗೌರವಿಸೋಣ. ರಾಸಾಯನಿಕ ಮುಕ್ತ ಬದುಕು ಕಂಡುಕೊಳ್ಳುವ ಮೂಲಕ ಈ ಮಣ್ಣಿನ ಋಣ ತೀರಿಸೋಣ ಎಂದು ರೈತ ಕಲ್ಯಾಣ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅನ್ನದಾತರಿಗೆ ಕರೆ ನೀಡಿದರು.

ವಿವಿಧ ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ ಶುಕ್ರವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಅವರು, ಮಾಧ್ಯಮದವರೊಂದಿಗೆ ಮಾತನಾಡಿ, ಸರ್ಕಾರ ಶೀಘ್ರವೇ ಮಣ್ಣಿನ ಸಂರಕ್ಷಣೆ ಕಾಯ್ದೆಯನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಎಲ್ಲಾ ರೈತ ಬಾಂಧವರು ರಾಸಾಯನಿಕ ತ್ಯಜಿಸಿ, ಜೈವಿಕ ಕೃಷಿಯತ್ತ ಆಸಕ್ತಿ ತೋರುವ ಮೂಲಕ ಈ ಮಣ್ಣಿನ ಫಲವತ್ತತೆ, ಗುಣಮಟ್ಟವನ್ನು ಕಾಪಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಅನ್ನದಾತರು ಆರ್ಥಿಕತೆಯ ಸಬಲತೆ ಹೊಂದಿ ಸಮಾಜದಲ್ಲಿ ಅವರೂ ಕೂಡ ಶ್ರೀಮಂತರ ಸಾಲಿನಲ್ಲಿ ಕಾಣಬೇಕೆಂಬುದು ನನ್ನ ಆಶಯವಾಗಿದ್ದು, ಇದಕ್ಕಾಗಿ ಹಗಲಿರುಳು ರೈತ ಕಲ್ಯಾಣ ಸಂಘ ಶ್ರಮಿಸಲಿದೆ ಎಂದು ಭರವಸೆ ನೀಡಿದರು.

ಇಂದು ರೈತರು ಬಹಳಷ್ಟು ಸಂಕಷ್ಟದ ಸ್ಥಿತಿ ಅನುಭವಿಸುತ್ತಿದ್ದಾರೆ. ಬೆಳೆದ ಬೆಳೆಗೆ ಸೂಕ್ತ ಬೆಲೆ ಇಲ್ಲ ಎನ್ನುವುದು ಒಂದೆಡೆಯಾದರೇ, ಕಾಡು ಪ್ರಾಣಿಗಳ ಹಾವಳಿಗೆ ಬೆಳೆ ನಾಶವಾಗಿ ವರ್ಷಪೂರ್ತಿ ಕಷ್ಟಪಟ್ಟು ಬೆಳೆದ ಫಸಲು ಕೈಗೆ ಬಾರದೇ ಕಣ್ಣೀರಿಡುತ್ತಿದ್ದಾರೆ. ಅಲ್ಲದೇ ಬೆಳೆ ನಾಶದ ಪರಿಹಾರಕ್ಕಾಗಿ ಅಲೆದು ಅಲೆದು ಆತ್ಮಹತ್ಯೆಯ ಹಾದಿ ಹಿಡಿಯುತ್ತಿದ್ದಾರೆ. ಇದಕ್ಕೆಲ್ಲ ಪರಿಹಾರದ ಅಗತ್ಯವಿದೆ. ಸರ್ಕಾರ ಅನ್ನದಾತರ ಏಳಿಗೆಗೆ,ಅವರ ಆರ್ಥಿಕತೆ ಸುಧಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮನವಿ ಮಾಡಿದ ಚಂದನ್ ಗೌಡ, ಪ್ರತಿ ಗ್ರಾಮಗಳಲ್ಲಿ ನಡೆಯುವ ಗ್ರಾಮಸಭೆಯು ವಿಧಾನಸಭೆಯಂತಿರಲಿ ಎಂಬ ಆಶಯ ವ್ಯಕ್ತಪಡಿಸಿದರು.

ಒಂದೇ ಬೆಳೆಗೆ ಅವಲಂಬಿತರಾಗದೇ ಇತರೆ ಬೆಳೆಗಳನ್ನು ಬೆಳೆಯುವಲ್ಲಿ ರೈತರು ಮುಂದಾಗಬೇಕು. ಆರ್ಥಿಕತೆಯಲ್ಲಿ ಸಾಧನೆ ತೋರಿ ಎಲ್ಲರಂತೆ ಸಮಾಜದಲ್ಲಿ ಬದುಕಬೇಕು.ಈ ನಿಟ್ಟಿನಲ್ಲಿ ರೈತ ಬಾಂಧವರು ಗಮನಹರಿಸಬೇಕು. ಹೊತ್ತ ತಾಯಿ ಭೂಮಿಗೆ ವಿಷವುಣಿಸುವುದನ್ನು ಬಿಟ್ಟು ಜೈವಿಕ ಕೃಷಿಯ ಮೂಲಕ ಭೂಮಿಯನ್ನು ಸಂರಕ್ಷಿಸಬೇಕೆಂದು ಕಳಕಳಿಯಿಂದ ಕೋರಿದರು.

ಈ ಸಂದರ್ಭದಲ್ಲಿ ಸಂಘದ ರಾಜ್ಯ, ಜಿಲ್ಲಾ ಹಾಗೂ ತಾಲೂಕು ಘಟಕದ ಪದಾಧಿಕಾರಿಗಳು, ಕಾರ್ಯಕರ್ತರು, ಮುಖಂಡರು ಹಾಗೂ ವಿವಿಧ ಭಾಗಗಳ ರೈತ ಬಾಂಧವರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಾಲೆಗಾಂವ್ ಸ್ಫೋಟ ಪ್ರಕರಣ: ಮಾಜಿ ಸಂಸದೆ ಪ್ರಜ್ಞಾ ಠಾಕೂರ್ ಸೇರಿ 7 ಆರೋಪಿಗಳು ಖುಲಾಸೆ

ಮುಂಬೈ: 2008ರ ಮಾಲೆಗಾಂವ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಿಜೆಪಿ ಮಾಜಿ ಸಂಸದೆ ಪ್ರಜ್ಞಾ ಠಾಕೂರ್, ಲೆಫ್ಟಿನೆಂಟ್ ಕರ್ನಲ್ ಪುರೋಹಿತ್ ಸೇರಿ 7 ಆರೋಪಿಗಳಿಗೆ ಬಿಗ್ ರಿಲೀಫ್ ಸಿಕ್ಕಿದೆ. 17 ವರ್ಷಗಳ ನಂತರ ಸುದೀರ್ಘ ವಿಚಾರಣೆ ನಡೆಸಿದ ನಂತರ ಎನ್‌ಐಎ ವಿಶೇಷ ನ್ಯಾಯಾಲಯ ಗುರುವಾರ ತೀರ್ಪು ಪ್ರಕಟಿಸಿದೆ.

ಎನ್‌ಐಎ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಎ.ಕೆ.ಲಾಹೋಟಿ ಅವರು ಪ್ರಕರಣದ ಆರೋಪಿಗಳ ವಿರುದ್ಧ ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಳಿಸಲಾಗಿದೆ ಎಂದು ತೀರ್ಪು ಪ್ರಕಟಿಸಿದ್ದಾರೆ.



ಈ ಪ್ರಕರಣದಿಂದ ಬಿಜೆಪಿ ಮಾಜಿ ಸಂಸದೆ ಪ್ರಜ್ಞಾಸಿಂಗ್ ಠಾಕೂರ್, ಮಾಜಿ ಸೇನಾಧಿಕಾರಿ ಪ್ರಸಾದ್ ಪುರೋಹಿತ್ (ನಿವೃತ್ತ), ಮೇಜರ್ ರಮೇಶ್ ಉಪಾಧ್ಯಾಯ(ನಿವೃತ್ತ), ಸುಧಾಕರ್ ಚತುರ್ವೇದಿ, ಅಜಯ್ ರಹೀರ್ಕರ್, ಸುಧಾಕರ್ ಧರ್‌ದ್ವಿವೇದಿ ಅಲಿಯಾಸ್ ಶಂಕರಾಚಾರ್ಯ ಹಾಗೂ ಸಮೀರ್ ಕುಲಕರ್ಣಿ ಅವರನ್ನು ಆರೋಪ ಮುಕ್ತಗೊಳಿಸಲಾಗಿದೆ.

ಸ್ಫೋಟದಲ್ಲಿ ಮೃತಪಟ್ಟ ಆರು ಜನರ ಕುಟುಂಬಗಳಿಗೆ ತಲಾ 2 ಲಕ್ಷ ರೂಪಾಯಿ ಮತ್ತು ಗಾಯಗೊಂಡವರಿಗೆ 50 ಸಾವಿರ ರೂಪಾಯಿ ಪರಿಹಾರ ನೀಡುವುದಾಗಿ ನ್ಯಾಯಾಲಯ ಹೇಳಿದೆ.

ಸೆಪ್ಟೆಂಬರ್ 29, 2008 ರಂದು ಮಹಾರಾಷ್ಟ್ರದ ಮಾಲೆಗಾಂವ್ ಪಟ್ಟಣದ ಮಸೀದಿಯ ಬಳಿ ಮೋಟಾರ್ ಸೈಕಲ್‌ಗೆ ಕಟ್ಟಲಾಗಿದ್ದ ಸ್ಫೋಟಕ ಸಾಧನವೊಂದು ಸ್ಫೋಟಗೊಂಡಿತ್ತು. ಘಟನೆಯಲ್ಲಿ ಆರು ಜನರು ಸಾವನ್ನಪ್ಪಿ, 100 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಒಳ ಚರಂಡಿ ನೀರು ಸಂಸ್ಕರಣಾ ಘಟಕದ ನಿರ್ವಹಣೆಗೆ ಉಪ ಲೋಕಾಯುಕ್ತರ ಮೆಚ್ಚುಗೆ



ಮೈಸೂರಿನ ಕೆಸರೆಯಲ್ಲಿರುವ ಒಳಚರಂಡಿ ನೀರು ಸಂಸ್ಕರಣ ಘಟಕ ಹಾಗೂ ಘನ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಶುಕ್ರವಾರ ಉಪ ಲೋಕಾಯುಕ್ತರಾದ ನ್ಯಾ.ಕೆ.ಎನ್.ಫಣೀಂದ್ರ ಭೇಟಿ ನೀಡಿ ಪರಿಶೀಲಿಸಿದರು.

ಮೈಸೂರು, ಆ.1(ಎಂಟಿವೈ)– ಮೈಸೂರಿನ ಕೆಸರೆಯಲ್ಲಿರುವ ಒಳಚರಂಡಿ ನೀರು ಸಂಸ್ಕರಣಾ ಘಟಕ ಹಾಗೂ ಘನ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಶುಕ್ರವಾರ ಉಪ ಲೋಕಾಯುಕ್ತರಾದ ನ್ಯಾ.ಕೆ.ಎನ್. ಫಣೀಂದ್ರ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಎರಡೂ ಘಟಕಗಳ ಕಾರ್ಯನಿರ್ವಹಣೆಯ ಬಗ್ಗೆ ಮಾಹಿತಿ ಪಡೆದರು.

ಮೈಸೂರು ಜಿ.ಪಂ ಸಭಾಂಗಣದಲ್ಲಿ ಮೂರು ದಿನಗಳ ಕಾಲ ದೂರು ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಉಪ ಲೋಕಾಯುಕ್ತರು ಇಂದು ಬೆಳಗ್ಗೆ ಅಧಿಕಾರಿಗಳೊಂದಿಗೆ ಕೆಸರೆಯಲ್ಲಿರುವ ಒಳಚರಂಡಿ ನೀರು ಸಂಸ್ಕರಣ ಘಟಕಕ್ಕೆ ಭೇಟಿ ನೀಡಿ, ಘಟಕದಲ್ಲಿ ಅಳವಡಿಸಿರುವ ಯಂತ್ರೋಪಕರಣ, ಸಂಸ್ಕರಣೆಯ ವಿಧಾನ ಹಾಗೂ ನಿರ್ವಹಣೆ ಬಗ್ಗೆ ವಿವರಣೆ ಪಡೆದು ಮೆಚ್ಚುಗೆ ವ್ಯಕ್ತಪಡಿಸಿದರು. ಬಳಿಕ ಸಂಸ್ಕರಣಾ ಘಟಕದಲ್ಲಿ ಬೆಳೆದಿರುವ ಗಿಡ–ಗಂಟಿ ತೆರವುಗೊಳಿಸಿ ಹೂವಿನ ಹಾಗೂ ಉತ್ತಮ ಗಿಡಗಳನ್ನು ನೆಟ್ಟು ನಿರ್ವಹಣೆ ಮಾಡುವಂತೆ ಸಲಹೆ ನೀಡಿದರು.

ಪ್ರತಿ ಹಳ್ಳಿಯ ಕಡೆ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಸ್ವಚ್ಛತೆಯ ಬಗ್ಗೆ ಜನರಲ್ಲಿಯೂ ಜಾಗೃತಿ ಮೂಡಿಸಬೇಕು. ಒಳ ಕಸ ಹಾಗೂ ಹಸಿ ಕಸದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಅದರಂತೆ ಸ್ವಚ್ಛತೆಗೆ ಸಾರ್ವಜನಿಕರಿಂದಲೂ ಅಗತ್ಯ ಸಹಕಾರ ನೀಡಬೇಕು ಎಂದು ತಿಳಿಸಿದರು.

ನಂತರ ಕೆಸರೆ ಘನ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುತ್ತಮುತ್ತಲಿನ ಗ್ರಾಮದ ಜನರು ತ್ಯಾಜ್ಯ ನಿರ್ವಹಣಾ ಘಟಕದಿಂದ ಅನಾರೋಗ್ಯ ಸಮಸ್ಯೆ ಕುರಿತಂತೆ ಅಳಲು ತೋಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ವೈಜ್ಞಾನಿಕ ರೀತಿಯಲ್ಲಿ ತಜ್ಞರಿಂದ ತಪಾಸಣೆ ಮಾಡಿಸಲು ಕ್ರಮ ಕೈಗೊಳ್ಳಬೇಕು. ಘಟಕದಿಂದ 5 ಕಿ.ಮೀ ವ್ಯಾಪ್ತಿಯೊಳಗೆ ಯಾವುದಾದರೂ ಮನೆಯಲ್ಲಿನ ಜನರಿಗೆ ಆರೋಗ್ಯ ಸಮಸ್ಯೆ ಇರುವ ಬಗ್ಗೆ ಮಾಹಿತಿ ಕಲೆಹಾಕಬೇಕು. ಹೋಟೆಲ್‌ಗಳಿಗೆ ಬರುವ ಗ್ರಾಹಕರಿಗೆ ತೊಂದರೆ ಆಗಿದ್ದರೆ ಜಿಲ್ಲಾಧಿಕಾರಿಗಳು ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿದರು.

ಘನ ತ್ಯಾಜ್ಯ ನಿರ್ವಹಣಾ ಘಟಕದಿಂದ 500 ಮೀ ಒಳಗೆ ನಿವೇಶನಗಳು ಇದ್ದರೆ ರದ್ದು ಪಡಿಸುವ ಕೆಲಸ ಮಾಡಲಾಗುವುದು. ಇದರಿಂದ ಮಕ್ಕಳಿಗೆ ಹಾಗೂ ಜನರಿಗೆ ವಾಸನೆಯಿಂದ ಆರೋಗ್ಯದಲ್ಲಿ ಸಮಸ್ಯೆ ಆಗುವ ಬಗ್ಗೆ ಪರಿಶೀಲನೆ ಮಾಡಿಸಿ.. ಮುನ್ನೆಚ್ಚರಿಕೆ ಕ್ರಮವಾಗಿ ಜನರಿಗೆ ಘಟಕದಿಂದ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಒ ಎಸ್.ಯುಕೇಶ್ ಕುಮಾರ್, ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಎಂಜಿನಿಯರ್ ಆಸಿಫ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ 'ಮಣಿಪಾಲ್ ಹೆಲ್ತ್ ಸಮ್ಮಿಟ್ ಪೇರೆಂಟ್ ಕ್ರಾಫ್ಟ್' ವಿಶೇಷ ಕಾರ್ಯಕ್ರಮ

ಮೈಸೂರು, ಆ.1– ಭಾವಿ ತಂದೆ–ತಾಯಂದಿರಿಗೆ ಅಗತ್ಯ ಶಿಕ್ಷಣ ನೀಡುವ ಉದ್ದೇಶದಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ 'ಮಣಿಪಾಲ್ ಹೆಲ್ತ್ ಸಮ್ಮಿಟ್ ಪೇರೆಂಟ್‌ಕ್ರಾಫ್ಟ್' ವಿಶೇಷ ಕಲಿಕಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಈ ಆರೋಗ್ಯ ಕಾರ್ಯಕ್ರಮವು ಆ.3ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ ಮಣಿಪಾಲ್ ಆಸ್ಪತ್ರೆಯ ಒಪಿಡಿ 'ಬಿ' ಬ್ಲಾಕ್‌ನಲ್ಲಿ ನಡೆಯಲಿದ್ದು, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಶಾಹೀನ್ ಅಖ್ತರ್, ಡಾ.ಅಮೂಲ್ಯ ಕೆ.ಜಿ. ಹಾಗೂ ಮಕ್ಕಳ ತಜ್ಞ ಡಾ.ಭುವನೇಶ್ವರ್.ಯು. ಭಾಗವಹಿಸಲಿದ್ದಾರೆ.

ಈ ತಜ್ಞ ವೈದ್ಯರು ಗರ್ಭಾವಸ್ಥೆ, ಹೆರಿಗೆ ಮತ್ತು ಆರಂಭಿಕ ಶಿಶುಪಾಲನೆ ಕುರಿತು ತಮ್ಮ ಅನುಭವ ಹಂಚಿಕೊಳ್ಳುವುದರ ಜೊತೆಗೆ ಕಲಿಕಾ ಮಾಹಿತಿ ಹಾಗೂ ಮಾರ್ಗದರ್ಶನ ನೀಡಲಿದ್ದಾರೆ. ಇದೇ ವೇಳೆ ಪೌಷ್ಟಿಕ ತಜ್ಞರು ಆರೋಗ್ಯಕರ ಅಡುಗೆಯ ಪಾಕವಿಧಾನಗಳ ಕುರಿತು ನೇರ ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ಒದಗಿಸಲಿದ್ದಾರೆ.

ಈ ವಿಶೇಷ ಕಾರ್ಯಕ್ರಮಕ್ಕೆ ಎಲ್ಲಾ ಭಾವಿ ತಂದೆ–ತಾಯಂದಿರಿಗೂ ಮುಕ್ತ ಪ್ರವೇಶ ಕಲ್ಪಿಸಲಾಗಿದ್ದು, ತಜ್ಞರೊಂದಿಗೆ ನೇರವಾಗಿ ಸಂವಾದ ನಡೆಸಲು ಇದೊಂದು ಸುವರ್ಣಾವಕಾಶವಾಗಿದೆ. ಈ ಆರೋಗ್ಯ ಶೃಂಗಸಭೆಯು, ಮೈಸೂರಿನ ಮಣಿಪಾಲ್ ಆಸ್ಪತ್ರೆಯು ಸಮುದಾಯದೊಂದಿಗೆ ತೊಡಗಿಸಿಕೊಳ್ಳುವಿಕೆ, ರೋಗನಿರೋಧಕ ಆರೈಕೆ ಮತ್ತು ರೋಗಿಗಳ ಸಬಲೀಕರಣಕ್ಕಾಗಿ ನಿರಂತರ ಬದ್ಧತೆ ಹೊಂದಿರುವುದರ ಪ್ರತೀಕವಾಗಿದೆ. ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗೆ ಮೊ.ಸಂ. 96206 33255 ಸಂಪರ್ಕಿಸಲು ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಮಾದಿಗರ ಸಂಘಟನೆಗಳಿಂದ ಪ್ರತ್ಯೇಕ ಪ್ರತಿಭಟನೆ



ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಮಾದಿಗ ಸಫಾಯಿ ಕರ್ಮಚಾರಿ ಒಕ್ಕೂಟದ ಕಾರ್ಯಕರ್ತರು ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.



ಒಳ ಮೀಸಲಾತಿಗೆ ಆಗ್ರಹಿಸಿ ಮೈಸೂರಿನ ಪುರಭವನ ಆವರಣದಿಂದ ಮಾದಿಗ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರು, ಆ.1(ಎಂಟಿವೈ)– ಒಳ ಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ ಮಾದಿಗ ವಿವಿಧ ಸಂಘಟನೆಗಳ ಒಕ್ಕೂಟ, ಮಾದಿಗ ಸಫಾಯಿ ಕರ್ಮಚಾರಿ ಒಕ್ಕೂಟದ ಕಾರ್ಯಕರ್ತರು ಮೈಸೂರಲ್ಲಿ ಪ್ರತ್ಯೇಕ ಪ್ರತಿಭಟನೆ ನಡೆಸಿದರು.

ಮಾದಿಗ ಸಂಘಟನೆಗಳ ಒಕ್ಕೂಟ: ಮೈಸೂರಿನ ಪುರಭವನ ಆವರಣದಿಂದ ಮಾದಿಗ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ಮೂಲಕ ಸಾಗಿ ಪ್ರತಿಭಟನೆ ನಡೆಸಿದರು. ಆ.15ರೊಳಗೆ ಒಳ ಮೀಸಲಾತಿ ಜಾರಿಗೊಳಿಸದಿದ್ದರೆ, ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಈ ವೇಳೆ ಮುಖಂಡ ಪ್ರಸನ್ನ ಚಕ್ರವರ್ತಿ ಮಾತನಾಡಿ, ಕಳೆದ 35 ವರ್ಷಗಳಿಂದ ಒಳ ಮೀಸಲಾತಿ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಸುಪ್ರೀಂ ಕೋರ್ಟ್ ಒಳ ಮೀಸಲಾತಿ ನೀಡುವಂತೆ ಆದೇಶ ನೀಡಿ ಒಂದು ವರ್ಷ ಆಗಿದೆ. ಆದರೆ, ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಲು ಮೀನಾಮೇಷ ಎಣಿಸುತ್ತಿದೆ. ಪಕ್ಕದ ರಾಜ್ಯಗಳಲ್ಲಿ ಒಳ ಮೀಸಲಾತಿ ಜಾರಿಯಾಗಿದೆ. ಆದರೆ, ಸಿದ್ದರಾಮಯ್ಯ ಸರ್ಕಾರಕ್ಕೆ ಯಾರಿಂದ ಒತ್ತಡ ಇದೆಯೋ ಗೊತ್ತಿಲ್ಲ ಮಾದಿಗ ಸಮುದಾಯದ 107 ಉಪ ಜಾತಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಒಳ ಮೀಸಲಾತಿ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಆ.4ರಂದು ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯನ್ನು ಸ್ವೀಕರಿಸುವ ರಾಜ್ಯ ಸರ್ಕಾರ ಕೂಡಲೇ ಒಳ ಮೀಸಲಾತಿ ಜಾರಿ ಮಾಡದಿದ್ದರೆ. ಆ.15ರಂದು ಸ್ವಾತಂತ್ರ್ಯ ದಿನಾಚರಣೆ ಸಮಯದಲ್ಲಿ ದೊಡ್ಡ ಮಟ್ಟದಲ್ಲಿ ಹೋರಾಟ ಮಾಡಲಿದ್ದೇವೆ. ರಾಹುಲ್ ಗಾಂಧಿ ಬೆಂಗಳೂರಿಗೆ ಆಗಮಿಸುವ ಸಮಯದಲ್ಲಿ ಒಳ ಮೀಸಲಾತಿ ಜಾರಿಗೆ ಒತ್ತಡ ಹೇರಲು ರಾಜ್ಯಾದ್ಯಂತ ಹೋರಾಟಗಾರರು ಆಗಮಿಸಲಿದ್ದಾರೆ ಎಂದರು.

ಹೋರಾಟಗಾರ ಭಾಸ್ಕರ್ ಪ್ರಸಾದ್ ಮಾತನಾಡಿ, ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಯ ಮಾದಿಗ ಸಮುದಾಯದ ಜನರು ಪ್ರತಿಭಟನೆಗೆ ಆಗಮಿಸಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಶವಯಾತ್ರೆ ನಡೆಸುವ ಮೂಲಕ ಪ್ರತಿಭಟನೆ ಮಾಡಿದ್ದಾರೆ. ಆದರೆ, ಮೈಸೂರಿನಲ್ಲಿ ಅಧಿಕಾರಿಗಳು ಶವಯಾತ್ರೆ ಮಾಡಲು ಬಿಟ್ಟಿಲ್ಲ. ಈ ಸರ್ಕಾರ ಸತ್ತು ಹೋಗಿದೆ. ನಾವು ಯಾವಾಗ ಬೀದಿಗಿಳಿಯುತ್ತೇವೋ ಆಗೆಲ್ಲಾ ಸರ್ಕಾರ ಮಾತನಾಡುತ್ತಿದೆ. ಬಡ್ತಿ ಮೀಸಲಾತಿ ಇನ್ನೂ ನಿಲ್ಲಿಸಿಲ್ಲ. ಆ.4ರಂದು ವರದಿ ಸ್ವೀಕರಿಸುತ್ತಿದ್ದು, ಈ ಮಧ್ಯದಲ್ಲಿ ಪಕ್ಷಾತೀತ ಹೋರಾಟಕ್ಕೆ ನಮ್ಮ ಬೆಂಬಲ ಇದೆ. ಯಾವನೇ ರಾಜಕಾರಣಿ ನಮ್ಮ ಸರ್ಕಾರದ ಮೇಲೆ ನಂಬಿಕೆ ಇಡಿ, ಹೋರಾಟ ಬೇಡ ಎಂದರೆ ಕಪಾಳಕ್ಕೆ ಹೊಡೆಯಿರಿ ಎಂದು ಕರೆ ಕೊಟ್ಟರು.

ಪ್ರತಿಭಟನೆಯಲ್ಲಿ ಹಿರಿಯ ವಕೀಲ ಎಸ್. ಅರುಣ್ ಕುಮಾರ, ಮುಖಂಡರಾದ ಬಸವರಾಜು, ಡಾ.ಆನಂದ ಕುಮಾರ್, ಎಂ. ಮಹದೇವು, ರಾಜಣ್ಣ, ವೆಂಕಟರಮಣ, ಜಯಸಿಂಹ ಸೇರಿದಂತೆ ಹಲವರು ಭಾಗವಹಿಸಿದ್ದರು.

ಸಫಾಯಿ ಕರ್ಮಚಾರಿ ಒಕ್ಕೂಟ: ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಮಾದಿಗ ಸಫಾಯಿ ಕರ್ಮಚಾರಿ ಒಕ್ಕೂಟದ ಕಾರ್ಯಕರ್ತರು ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಮುಖಂಡ ವೆಂಕಟೇಶ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ಒಳಮೀಸಲಾತಿ ಕುರಿತು ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿ ಇಂದು ವರ್ಷವಾಗಿದೆ ಆದರೆ, ರಾಜ್ಯ ಸರ್ಕಾರ ಕಾಲಹರಣ ಮಾಡಿ, ಜಸ್ಟೀಸ್ ನಾಗಮೋಹನ್‌ದಾಸ್ ವರದಿಯನ್ನೂ ಒಳಪಂಗಡಗಳನ್ನು ಗುರುತಿಸಲು ಕಾಲಾವಕಾಶ ತೆಗೆದು ಕೊಂಡು ಸರ್ವೆ ಮುಕ್ತಾಯವಾಗಿದ್ದರೂ ಜಾರಿಗೆ ನಿರ್ಲಕ್ಷ್ಯ ಮಾಡುತ್ತಿದೆ. ಕೂಡಲೇ ಒಳ ಮೀಸಲಾತಿ ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಮೈಸೂರಲ್ಲಿ ಇಂಪ್ರೆಶನ್ಸ್ ಡಿಸೈನರ್ಸ್ ಎಕ್ಸ್‌ಪೋ ಆರಂಭ



ಇಂಪ್ರೆಶನ್ಸ್ ಪ್ರಸ್ತುತಪಡಿಸುವ ಎರಡು ದಿನಗಳ ಇಂಪ್ರೆಶನ್ಸ್ ಡಿಸೈನರ್ಸ್ ವಸ್ತುಪ್ರದರ್ಶನ ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಶುಕ್ರವಾರ ಆರಂಭವಾಯಿತು. ಚಿತ್ರದಲ್ಲಿ (ಎಡದಿಂದ) ಡಿಸೈನರ್ ಗೀತಾ, ಆರ್ಗನೈಸರ್ ಕೃಪಾ ಸುಮಂತ್, ಮುಖ್ಯ ಅತಿಥಿಗಳಾದ ಸುಮಾ ಪ್ರಕಾಶ್ ಮತ್ತು ಡಿಆರ್‌ಸಿ ಸಿನಿಮಾಸ್ ಮಾಲೀಕರಾದ ವೈಶಾಲಿ ಹನುಮಂತ್ ಮತ್ತು ಡಿಸೈನರ್ ಪ್ರಿಯಾಂಕ್ ಅವರನ್ನು ಕಾಣಬಹುದು. ನಗರದ ಅತ್ಯಂತ ಪ್ರತಿಭಾನ್ವಿತ ವಿನ್ಯಾಸಕರು ಮತ್ತು ಬ್ರ್ಯಾಂಡ್‌ಗಳ ಆಯ್ದ ವಸ್ತುಗಳ ವಿಶೇಷ ಪ್ರದರ್ಶನ ಶುಕ್ರವಾರ ಮತ್ತು ಶನಿವಾರ ಬೆಳಗ್ಗೆ 10.30 ರಿಂದ ರಾತ್ರಿ 8 ರವರೆಗೆ ಸಾರ್ವಜನಿಕರಿಗೆ ತೆರೆದಿರುತ್ತದೆ.

ಮೈಸೂರಲ್ಲಿ ಮಾದಕ ವಸ್ತು ವಶಪಡಿಸಿಕೊಂಡ ಪ್ರಕರಣ

ಮೈಸೂರು ಪೊಲೀಸರು, ಮಹಾರಾಷ್ಟ್ರ ಪೊಲೀಸ್ ಹೇಳಿಕೆ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಆಗ್ರಹ

ಇಂದು ಮಾದಕ ಮುಕ್ತ ನಗರಿಗಾಗಿ ಜಾಗೃತಿ ಜಾಥಾ

ಮೈಸೂರು, ಆ.1(ಜಿಎ)–ಮೈಸೂರಿನ ಹೊರವಲಯದಲ್ಲಿ ಮಾದಕ ವಸ್ತುಗಳ ತಯಾರಿಕಾ ಘಟಕದ ಮೇಲೆ ಮಹಾರಾಷ್ಟ್ರ ಪೊಲೀಸರು ದಾಳಿ ಮಾಡಿ ವಶ ಪಡಿಸಿಕೊಂಡ ಮಾದಕ ವಸ್ತುಗಳ ಪ್ರಮಾಣಕ್ಕೆ ಸಂಬಂಧಿಸಿದಂತೆ ಅಲ್ಲಿನ ಪೊಲೀಸರು ಹಾಗೂ ನಗರ ಪೊಲೀಸರು ನೀಡಿರುವ ಮಾಹಿತಿಗೂ ವ್ಯತ್ಯಾಸವಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಕಾರ್ಯದರ್ಶಿ ರವಿಕುಮಾರ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಪೊಲೀಸ್ ಆಯುಕ್ತರು ನೀಡುತ್ತಿರುವ ದ್ವಂದ್ವ ಹೇಳಿಕೆಗಳಿಂದ ಸಾಕಷ್ಟು ಅನುಮಾನ ಉಂಟಾಗಿದೆ. ಮತ್ತೊಂದೆಡೆ ದಾಳಿ ಬಳಿಕ ಎನ್.ಆರ್. ಠಾಣಾಧಿಕಾರಿ ಲಕ್ಷ್ಮೀಕಾಂತ ತಳವಾರ್‌ರನ್ನು ಅಮಾನತುಗೊಳಿಸಿ, ಮಾರನೇ ದಿನವೇ ಅದನ್ನು ರದ್ದುಗೊಳಿಸಿ, ಅವರನ್ನೇ ದೂರುದಾರರನ್ನಾಗಿಸಿರುವುದು ಸಹಾ ಸರಿಯಲ್ಲ. ಇವರ ವಿಚಾರದಲ್ಲಿ ಹಿರಿಯ ಅಧಿಕಾರಿಗಳು ಯಾರ ಒತ್ತಡಕ್ಕೆ ಮಣಿದರು ಎಂಬುದು ತಿಳಿಯದಾಗಿದೆ ಎಂದರು.

ಮಾದಕ ದ್ರವ್ಯ ತಯಾರಿಕಾ ಘಟಕ ಠಾಣಾ ವ್ಯಾಪ್ತಿಯಲ್ಲೇ ಇದ್ದರೂ ಇವರು ಏಕೆ ಸುಮ್ಮನಿದ್ದರು ಎಂಬುದರ ಬಗ್ಗೆ ತನಿಖೆ ನಡೆಸಬೇಕು. ಇನ್ನು ಮಾದಕ ವಸ್ತು ಕಳ್ಳಸಾಗಣೆ ಮತ್ತು ದುರುಪಯೋಗ ವಿರುದ್ಧ ಈಗಾಗಲೇ ಪಕ್ಷದ ವತಿಯಿಂದ ಕೇಂದ್ರ ನಾರ್ಕೋಟಿಕ್ ಕಂಟ್ರೋಲ್ ಬ್ಯೂರೋಗೆ ದೂರು ಸಲ್ಲಿಸಲಿದ್ದೇವೆ ಎಂದು ತಿಳಿಸಿದರು.

ಆ.2 ರಂದು ಬೆಳಗ್ಗೆ 11ಗಂಟೆಗೆ ನಗರದ ಬಸವೇಶ್ವರ ವೃತ್ತದಿಂದ ಪೊಲೀಸ್ ಆಯುಕ್ತರ ಕಚೇರಿ, ಅಲ್ಲಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮಾದಕ ದ್ರವ್ಯ ಮುಕ್ತ ನಗರಿ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಹದೇವಮ್ಮ, ವೇಣುಗೋಪಾಲ್, ನಾಗರಾಜು, ಪಿ.ರವಿ ಉಪಸ್ಥಿತರಿದ್ದರು.

ಕೆಎಸ್ಆರ್‌ಟಿಸಿ ಸಂಸ್ಥಾಪನಾ ದಿನಾಚರಣೆ



ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಕೆಎಸ್ಆರ್‌ಟಿಸಿ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತು.

ಮೈಸೂರು, ಆ.1– ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಶುಕ್ರವಾರ ಕರ್ನಾಟಕ ರಸ್ತೆ ಸಾರಿಗೆ ನಿಗಮ(ಕೆಎಸ್ಆರ್‌ಟಿಸಿ)ಯ 64ನೇ ಸಂಸ್ಥಾಪನಾ ದಿನವನ್ನು ಆಚರಿಸಲಾಯಿತು.

ವಿಭಾಗೀಯ ನಿಯಂತ್ರಣ ಅಧಿಕಾರಿ ವೀರೇಶ್, ನಗರ ಬಸ್ ನಿಲ್ದಾಣದ ಸಂಚಾರ ನಿಯಂತ್ರಕ ಟಿ.ಎಂ.ದೊಡ್ಡೇಗೌಡ, ಘಟಕದ ಚೇತನ್ ಸೇರಿದಂತೆ ವಿವಿಧ ಅಧಿಕಾರಿಗಳು ಹಾಗೂ ನೌಕರರು ಸಿಂಗರಿಸಲಾಗಿದ್ದ ಬಸ್ ಮುಂಭಾಗ ಸಂಸ್ಥಾಪನಾ ದಿನದ ಪೋಸ್ಟರ್ ಪ್ರದರ್ಶಿಸಿ, ಸಂಭ್ರಮಿಸಿದರು.

ಸಾರ್ವಜನಿಕರಿಗೆ ಸುರಕ್ಷಿತ ಸಾರಿಗೆ ಸೌಲಭ್ಯ ಒದಗಿಸುವುದಕ್ಕಾಗಿ ಮೈಸೂರು ಸರ್ಕಾರವು 1948ರ ಸೆ.12ರಂದು ಮೈಸೂರು ಸರ್ಕಾರ ರಸ್ತೆ ಸಾರಿಗೆ ಇಲಾಖೆ(ಎಂಜಿಆರ್‌ಟಿಡಿ) ಮೂಲಕ 120 ವಾಹನಗಳೊಂದಿಗೆ ಸಾರಿಗೆ ಸೇವೆ ಆರಂಭಿಸಿತು. ನಂತರ 1961ರ ಆಗಸ್ಟ್ 1ರಂದು ಎಂಎಸ್ಆರ್‌ಟಿಸಿ ಎಂದು ಮರುನಾಮಕರಣ ಮಾಡಿ, ಸರ್ಕಾರಿ ಸ್ವಾಮ್ಯದ ಸ್ವತಂತ್ರ ಸಂಸ್ಥೆಯಾಗಿ ಪರಿವರ್ತಿಸಲಾಯಿತು. ಅಂದಿನಿಂದ ಈ ದಿನವನ್ನು ಸಂಸ್ಥಾಪನಾ ದಿನವನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

ಕೆಎಸ್ಆರ್‌ಟಿಸಿ ನಿಗಮದಿಂದ 1997ರ ಆಗಸ್ಟ್ 15ರಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ನವೆಂಬರ್ 1ರಂದು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, 200ನೇ ಅಕ್ಟೋಬರ್ 1ರಂದು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬೇರ್ಪಟ್ಟಿದ್ದು, ಸದ್ಯ ನಾಲ್ಕು ಪ್ರತ್ಯೇಕ ನಿಗಮಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಬೆಂಗಳೂರಿ ನಲ್ಲಿ 120 ವಾಹನಗಳೊಂದಿಗೆ ಆರಂಭ ಗೊಂಡು ಈಗ ರಾಜ್ಯದೆಲ್ಲೆಡೆ ಮಾತ್ರವಲ್ಲ ಹೊರರಾಜ್ಯಗಳಿಗೂ ಸೇವೆ ವಿಸ್ತರಿಸಿದೆ.

ಸಾಮಾನ್ಯ ಸಾರಿಗೆ, ಸೆಮಿ ಲಕ್ಷುರಿ, ಸೂಪರ್ ಡಿಲಕ್ಸ್, ರಾಜಹಂಸ, ನಾನ್ ಎಸಿ ಸ್ಲೀಪರ್, ವಜ್ರ, ಐರಾವತ, ಐರಾವತ ಗೋಲ್ಡ್ ಕ್ಲಾಸ್, ಅಂಬಾರಿ, ಅಂಬಾರಿ ಡ್ರೀಮ್ ಕ್ಲಾಸ್, ಅಂಬಾರಿ ಉತ್ಸವ್, ಫ್ಲೈಬಸ್, ಇವಿ ಪವರ್ ಪ್ಲಸ್, ಎಲೆಕ್ಟ್ರಿಕ್ ಬಸ್, ಅಶ್ವಮೇಧ, ಕಲ್ಬ್ ಕ್ಲಾಸ್ 2.0, ಪಲ್ಲಕ್ಕಿ ಸೇರಿದಂತೆ 17 ವಿವಿಧ ಮಾದರಿಯ ಸಾವಿರಾರು ಬಸ್‌ಗಳು ಸಂಚರಿಸುವ ಮೂಲಕ ಜನಜೀವನದ ಜೀವನಾಡಿಯಾಗಿವೆ.

ಧರ್ಮಸ್ಥಳ ಪ್ರಕರಣ: 19 ವರ್ಷಗಳ ಯುಡಿಆರ್ ದಾಖಲೆ ಸಂಗ್ರಹಿಸಿದ ಎಸ್ಐಟಿ

ಬೆಳ್ತಂಗಡಿ: ಅನಾಮಿಕ ದೂರುದಾರ ಹೇಳಿರುವ ನೇತ್ರಾವತಿ ಸ್ನಾನಘಟ್ಟದ ಬಳಿ ನೂರಾರು ಶವಗಳನ್ನು ಹೂತು ಹಾಕಿರುವ ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ ಧರ್ಮಸ್ಥಳ ಗ್ರಾಮ ಪಂಚಾಯತಿಯಿಂದ ದಾಖಲೆಗಳನ್ನು ಸಂಗ್ರಹಿಸಿದೆ. ಆಗಸ್ಟ್ 1ರಂದು ಸಂಜೆ, ಎಸ್ಐಟಿ ಅಧಿಕಾರಿಗಳ ತಂಡ ಧರ್ಮಸ್ಥಳ ಗ್ರಾಮ ಪಂಚಾಯತಿಗೆ ಭೇಟಿ ನೀಡಿ, 1995ರಿಂದ 2014ರವರೆಗೆ ಸತತ ವರ್ಷಗಳ ಯುಡಿಆರ್ ದಾಖಲೆಗಳನ್ನು ವಶಕ್ಕೆ ಪಡೆದಿದೆ. ಈ ದಾಖಲಾತಿಗಳನ್ನು ಎಸ್ಐಟಿ ಇನ್ಸ್‌ಪೆಕ್ಟರ್ ಮಂಜುನಾಥ್ ಅವರ ನೇತೃತ್ವದ ತಂಡ ಪರಿಶೀಲಿ ಸುತ್ತಿದ್ದು, ಈ ಪ್ರಕರಣದ ಹಿನ್ನೆಲೆ, ಸಂಭಾವ್ಯ ಆರೋಪಿಗಳು ಹಾಗೂ ಹೂತು ಹಾಕಲಾಗಿರುವ ಶವಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸುವ ನಿಟ್ಟಿನಲ್ಲಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಿದೆ.

ಜುಲೈ 31ರಂದು 6 ಪಾಯಿಂಟ್‌ವರೆಗೆ ಶೋಧ ನಡೆಸಿದ್ದ ಎಸ್ಐಟಿ ತಂಡಕ್ಕೆ, ಅನಾಮಿಕ ಗುರುತಿಸಿದ 6ನೇ ಸ್ಥಳದಲ್ಲಿ ಕಳೇಬರಹ ಸಿಕ್ಕಿತ್ತು. ಆ 1 ರಂದು ಪಾಯಿಂಟ್ ನಂಬರ್ 7 ಮತ್ತು 8 ರಲ್ಲಿ ಶೋಧ ಕಾರ್ಯ ನಡೆಸಿದ ತಂಡಕ್ಕೆ ಯಾವುದೇ ಕುರುಹು ಪತ್ತೆಯಾಗಿಲ್ಲ ಎಂದು ತಿಳಿದುಬಂದಿದೆ. ಎಸ್ಐಟಿ ಕಾರ್ಯಚಟುವಟಿಕೆ ಮುಂದುವರಿದಿದ್ದು, ಸ್ಪಾಟ್ ನಂಬರ್ 9ರಿಂದ ನಾಳೆ (ಶನಿವಾರ) ಉತ್ಖನನ ಕಾರ್ಯ ನಡೆಯಲಿದೆ. ಒಟ್ಟು 13 ಪಾಯಿಂಟ್‌ಗಳನ್ನು ಅನಾಮಿಕ ಗುರುತಿಸಿದ್ದು ಇನ್ನು ಬಾಕಿ ಉಳಿದಿರುವ ಐದು ಸ್ಥಳಗಳಲ್ಲಿ ಉತ್ಖನನ ಕಾರ್ಯ ನಡೆಯಲಿದೆ.

ಸ್ಪಾಟ್ ನಂಬರ್ 7 ಮತ್ತು ಸ್ಪಾಟ್ ನಂಬರ್ 8ರಲ್ಲಿ ಅಗೆಯಲು ಇಂದು ಸಣ್ಣ ಹಿಟಾಚಿ ಯಂತ್ರ ಆಗಮಿಸಿತ್ತು ಹಸಿರು ಪರದೆ ಮೂಲಕ ಇಡೀ ಸ್ಥಳವನ್ನು ಮುಚ್ಚಿದ ಎಸ್ಐಟಿ ಸದಸ್ಯರು ಮಾಧ್ಯಮಗಳು ಮತ್ತು ಸಾರ್ವಜನಿಕರ ಕಣ್ಣಿಗೆ ಕಾಣದಂತೆ ಎಲ್ಲವನ್ನೂ ಅಡಗಿಸಿಟ್ಟರು. ಹಿಟಾಚಿ ಯಂತ್ರದ ಸಹಾಯದಿಂದ ಪೊದೆಗಳನ್ನು, ಬೆಳೆದ ಕಾಡನ್ನು ತೆರವುಗೊಳಿಸಿದ ಬಳಿಕ ಮಣ್ಣು ತೆಗೆದು ಅಗೆಯುವ ಕಾರ್ಯ ಆರಂಭವಾಯ್ತು. ಮೊದಲಿಗೆ ಹಿಟಾಚಿ ಯಂತ್ರದ ಮೂಲಕ ಮಣ್ಣು ತೆಗೆದು, ನಂತರ ಕಾರ್ಮಿಕರನ್ನು ಬಳಸಿ ಉತ್ಖನನ ನಡೆ ಮಾಡಲಾಯ್ತು.

ಅಂತಿಮವಾಗಿ, ಪಾಯಿಂಟ್ ನಂಬರ್ 7 ಮತ್ತು 8ರಲ್ಲಿ ಯಾವುದೇ ಶವದ ಕುರುಕುಗಳು ಸಿಗಲಿಲ್ಲ ಎಂಬುದು ಸ್ಪಷ್ಟವಾಗಿದೆ. ಅಧಿಕಾರಿಗಳು ಒಟ್ಟು ಐದು ಅಡಿ ಆಳದವರೆಗೆ ಉತ್ಖನನ ಕಾರ್ಯ ನಡೆಸಿದ ನಂತರ, ತೆಗೆದ ಮಣ್ಣನ್ನು ಮತ್ತೆ ಅದೇ ಗುಂಡಿಗೆ ತುಂಬಿದ್ದಾರೆ.

ಈಗಾಗಲೇ ತನಿಖೆ ನಡೆಯುತ್ತಿದೆ. ವರದಿ ಬಂದ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಆರೋಪಗಳು– ಪ್ರತ್ಯಾರೋಪಗಳು ಪ್ರಜಾಪ್ರಭುತ್ವದಲ್ಲಿ ಸಾಮಾನ್ಯ. ಉತ್ತಮ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ ಎಂದು ನಗರದಲ್ಲಿ ಶುಕ್ರವಾರ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.







ಕೋಕೇರಿ ಗ್ರಾಮದಲ್ಲಿ ಕಾಡಾನೆಗಳ ಹಿಂಡು : ಗ್ರಾಮಸ್ಥರಲ್ಲಿ ಆತಂಕ

ಮಡಿಕೇರಿ,ಆ.1– ಚೆಯ್ಯಂಡಾಣೆ ಬಳಿಯ ನರಿಯಂದಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಕೇರಿ ಗ್ರಾಮದಲ್ಲಿ ಕೆಲ ದಿನಗಳಿಂದ ಕಾಡಾನೆಗಳ ಹಿಂಡು ತೋಟ ಗಳಿಗೆ ಲಗ್ಗೆ ಇಟ್ಟು ದಾಂಧಲೆ ನಡೆಸಿ ಕೃಷಿ ಗಿಡಗಳನ್ನು ಹಾನಿಪಡಿಸಿ ಗ್ರಾಮಸ್ಥ ರಲ್ಲಿ ಆತಂಕ ಸೃಷ್ಟಿಸಿವೆ.

ಕೋಕೇರಿ ಗ್ರಾಮದ ಪೆಮ್ಮಂಡ ರಘು ಪೂಣಚ್ಚ ಎಂಬುವರ ತೋಟಕ್ಕೆ ಲಗ್ಗೆ ಇಟ್ಟ ಕಾಡಾನೆಗಳ ಹಿಂಡು ತೋಟದಲ್ಲಿ ಕಾಫಿ, ಬಾಳೆ ಮತ್ತಿತರ ಗಿಡಗಳನ್ನು ತುಳಿದು ನಾಶ ಪಡಿಸಿವೆ. ಇವರ ತೋಟದಲ್ಲಿ 50ಕ್ಕೂ ಅಧಿಕ ಅಡಿಕೆ ಗಿಡಗಳನ್ನು ನಾಶಪಡಿಸಿದ್ದು, ಈ ವ್ಯಾಪ್ತಿಯ ಮಚ್ಚಂಡ ಸುಮತಿ ಕುಂಞಪ್ಪ ಹಾಗೂ ಇತರರ ತೋಟಗಳಿಗೆ ಕಾಡಾನೆಗಳು ಲಗ್ಗೆ ಇಟ್ಟು ಅಪಾರ ಪ್ರಮಾಣದ ಕೃಷಿ ಫಸಲುಗಳನ್ನು ಹಾನಿಪಡಿಸಿವೆ.

ಈ ವ್ಯಾಪ್ತಿಯಲ್ಲಿ 20ಕ್ಕೂ ಅಧಿಕ ಕಾಡಾನೆ ಗಳು ತೋಟದಲ್ಲೇ ಸಂಚರಿಸುತ್ತಿದ್ದು, ತೋಟ ಗಳೇ ಕಾಡಾನೆಗಳ ಆವಾಸ ಸ್ಥಳವಾಗಿದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿ ದ್ದಾರೆ. ಈ ವ್ಯಾಪ್ತಿಯ ಹಲವಾರು ಕುಟುಂ ಬಸ್ಥರ ತೋಟಗಳಿಗೆ ಕಾಡಾನೆ ಲಗ್ಗೆ ಇಟ್ಟು ದಾಂಧಲೆ ನಡೆಸಿದ್ದು ಇದರಿಂದ ತೋಟದಲ್ಲಿ



ಕೋಕೇರಿ ಗ್ರಾಮದಲ್ಲಿ ಕಾಡಾನೆಗಳು ಲಗ್ಗೆ ಇಟ್ಟು ಅಡಿಕೆ ಗಿಡಗಳನ್ನು ನಾಶಪಡಿಸಿವೆ.

ಬೆಳೆದ ಕೃಷಿ ಗಿಡಗಳನ್ನು ತುಳಿದು ನಾಶ ಪಡಿಸಿ ಅಪಾರ ನಷ್ಟ ಉಂಟು ಮಾಡಿದೆ. ಇದರಿಂದ ಗ್ರಾಮದ ಬೆಳೆಗಾರರು ಸಂಕಷ್ಟಕ್ಕೆ ಒಳಗಾಗಿದ್ದು, ಗ್ರಾಮದಲ್ಲಿ ನಡೆದಾಡಲು ಜನರು ಭಯಪಡುವ ಪರಿಸ್ಥಿತಿ ಉದ್ಭವ ವಾಗಿದೆ. ಕಾರ್ಮಿಕರು ತೋಟಕ್ಕೆ ತೆರಳಲು ಹಿಂದೇಟು ಹಾಕುವಂತಾಗಿದೆ. ಈ ಬಗ್ಗೆ ಅರಣ್ಯ ಇಲಾಖೆ ಯಾವುದೇ ಕ್ರಮ ಕೈಗೊ ಳ್ಳುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿ ದ್ದಾರೆ. ಕೂಡಲೇ ಸಂಬಂಧಪಟ್ಟ ಅರಣ್ಯ ಇಲಾಖೆ, ಸರಕಾರ ನಷ್ಟ ಸಂಭವಿಸಿದ ಬೆಳೆಗಾರರಿಗೆ ಸೂಕ್ತ ಪರಿಹಾರ ಒದಗಿಸ ಬೇಕು ಹಾಗೂ ದಾಳಿ ನಡೆಸುವ ಕಾಡಾನೆ ಯನ್ನು ಸೆರೆ ಹಿಡಿದು ಬೇರೆಡೆ ಸ್ಥಳಾಂ ತರಿಸಬೇಕೆಂದು ಆಗ್ರಹಿಸಿದ್ದಾರೆ.

ವಿರಾಜಪೇಟೆ ಬಳಿ ಅರಣ್ಯ ಪ್ರದೇಶದಲ್ಲಿ ಭೂ ಕುಸಿತ

ಮಡಿಕೇರಿ/ವಿರಾಜಪೇಟೆ,ಆ.1–ವಿರಾಜ ಪೇಟೆ ತಾಲೂಕು ಮಾಕುಟ್ಟ ಅರಣ್ಯ ವಲ ಯಕ್ಕೆ ಸೇರಿದ ಮಾಂಟ್ರೆಬೀಟ್‌ನ ಪಾಲಂ ಗಾಲ ಮಲೆತಿರಿಕೆ ಈಶ್ವರ ದೇವ ಸ್ಥಾನ ದಿಂದ ಸುಮಾರು 5ಕಿ.ಮೀ. ಅಂತರದ ಅರಣ್ಯ ಪ್ರದೇಶದಲ್ಲಿ ಭೂ ಕುಸಿತ ಸಂಭವಿ ಸಿರುವುದು ತಡವಾಗಿ ಬೆಳಕಿಗೆ ಬಂದಿದೆ.

ನಾಲ್ಕು ದಿನದ ಹಿಂದೆ ಈ ಪ್ರದೇಶದಲ್ಲಿ ಭಾರೀ ಮಳೆಯಾಗಿದ್ದು, ಆ ಸಂದರ್ಭ ದಲ್ಲಿ ಭೂ ಕುಸಿತವಾಗಿರುವ ಸಾಧ್ಯತೆ ಇದ್ದು, ಶುಕ್ರವಾರ ಬೆಳಗ್ಗೆ ಈ ಭೂ ಕುಸಿತ ಅರಣ್ಯ ಸಿಬ್ಬಂದಿಯ ಗಮನಕ್ಕೆ ಬಂದಿದೆ.

ಅರಣ್ಯದ ಮಧ್ಯ ಭಾಗದಲ್ಲಿ ಭೂ ಕುಸಿತ ವಾಗಿದ್ದು, ಸುಮಾರು 15 ಕಿ.ಮೀ. ವ್ಯಾಪ್ತಿ ಯಲ್ಲಿ ಜನ ವಸತಿ ಪ್ರದೇಶ ಇಲ್ಲದ ಕಾರಣ ಯಾವುದೇ ರೀತಿಯ ಹಾನಿ ಸಂಭವಿಸಿಲ್ಲ. ಆದರೆ ಈ ಅರಣ್ಯಕ್ಕೆ ಕೆಳ ಭಾಗದಲ್ಲಿ ಕಂದಾಯ ಇಲಾಖೆಗೆ ಸೇರಿದ ಸುಮಾರು 300 ಎಕರೆಯಷ್ಟು ಪೈಸಾರಿ ಭೂಮಿ ಇದ್ದು, ಭೂ ಕುಸಿತ ಹಾಗೂ ಭಾರೀ ಪ್ರಮಾಣದ ನೀರು ಬೆಟ್ಟದಿಂದ ಹರಿದು ಬಂದ ಪರಿಣಾಮ ಪೈಸಾರಿ ಭೂಮಿಯಲ್ಲಿ ಭಾರೀ ಪ್ರಮಾಣದ ಮಣ್ಣು, ಮರಗಳು ಹಾಗೂ ಕಲ್ಲು–ಬಂಡೆಗಳು ಬಿದ್ದಿವೆ.

ಭೂ ಕುಸಿತ ಉಂಟಾದ ಜಾಗದಲ್ಲಿ ನೀರು ಉಕ್ಕಿ ಹರಿಯುತ್ತಿದೆ. ಇಂದು ಬೆಳಗ್ಗೆ ಮಾಹಿತಿ ತಿಳಿದೊಡನೆ ಅರಣ್ಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ವಿರಾಜಪೇಟೆ ಕಂದಾಯ ಇಲಾಖಾಧಿಕಾರಿ ಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಪ್ರದೇಶಕ್ಕೆ ರಸ್ತೆ ಮಾರ್ಗ ವಿಲ್ಲದ ಕಾರಣ ಪಾಲಂಗಾಲ ಗ್ರಾಮದಿಂದ ಸುಮಾರು 8 ಕಿ.ಮೀ.ನಷ್ಟು ಬೆಟ್ಟ ಹತ್ತಿ ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರೆ.

> ಇಂದು ಬೆಟ್ಟದ ತುದಿಯವರೆಗೂ ನಾವು ಹೋಗಲು ಸಾಧ್ಯವಾಗಿಲ್ಲ. ನಾಳೆ ಮಾಕುಟ್ಟ ವಲಯ ಅರಣ್ಯಾಧಿಕಾರಿ ಗಳನ್ನೊಳಗೊಂಡ ತಂಡ ಮತ್ತೆ ಆ ಪ್ರದೇ ಶಕ್ಕೆ ತೆರಳಲಿದೆ. ಭಾರೀ ಮಳೆಯಿಂದಾಗಿ ಬೆಟ್ಟದ ಕಲ್ಲು–ಬಂಡೆಗಳ ಮೇಲಿರುವ ಮಣ್ಣು ಕುಸಿದಿದೆಯೇ ಹೊರತು, ಇದನ್ನು ಭೂ ಕುಸಿತ ಎಂದು ಪರಿಗಣಿಸಲು ಸಾಧ್ಯವಿಲ್ಲ. – ಜಗನ್ನಾಥ್, ಡಿಎಫ್‌ಓ

2019ರ ಆಗಸ್ಟ್‌ನಲ್ಲಿ ಕೊಡಗಿನಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದ ವೇಳೆ ಕೆದಮಳ್ಳೂರು ತೋರಾ ಗ್ರಾಮದ ಬಳಿ ಭೂ ಕುಸಿತದಿಂದ 8ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದರು. ಈ ಸ್ಥಳದಿಂದ ಸುಮಾರು 20 ಕಿಮೀ ಅಂತರದ ಅರಣ್ಯದ ಮಧ್ಯ ಭಾಗದಲ್ಲಿ ಈ ಭೂ ಕುಸಿತ ಸಂಭವಿಸಿದೆ.



ಕೊಳಕೇರಿ ಗ್ರಾಮದಲ್ಲಿ ಕಾಳಿಂಗ ಸರ್ಪ ರಕ್ಷಣೆ



ಕೊಳಕೇರಿ ಗ್ರಾಮದ ಕನ್ನಂಬೀರ ಪವನ್ ಪೂವಯ್ಯ ಎಂಬವರ ಕಾಫಿ ತೋಟ ದಲ್ಲಿದ್ದ ಬೃಹತ್ ಗಾತ್ರದ ಕಾಳಿಂಗ ಸರ್ಪವನ್ನು ಉರಗ ತಜ್ಞ ಪ್ರಜ್ವಲ್ ಕುಮಾರ್ ಹಿಡಿದು ರಕ್ಷಿಸಿದರು.

ನಾಪೋಕ್ಲು, ಆ.1– ಇಲ್ಲಿಗೆ ಸಮೀಪದ ಕೊಳಕೇರಿ ಗ್ರಾಮದ ಕಾಫಿ ತೋಟದಲ್ಲಿ ಕಂಡು ಬಂದ ಬಾರಿ ಗಾತ್ರದ ಕಾಳಿಂಗ ಸರ್ಪವನ್ನು ಹಿಡಿದು ರಕ್ಷಿಸಲಾಗಿದೆ.

ನಾಪೋಕ್ಲು ಗ್ರಾಮ ಪಂಚಾಯಿತಿಯ ಕೊಳಕೇರಿ ಗ್ರಾಮದ ಕನ್ನಂಬೀರ ಪವನ್ ಪೂವಯ್ಯ ಎಂಬವರ ಕಾಫಿ ತೋಟದಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿರುವಾಗ ಸುಮಾರು 14ಅಡಿ ಉದ್ದದ ಬೃಹತ್ ಗಾತ್ರದ ಕಾಳಿಂಗ ಸರ್ಪ ಪತ್ತೆಯಾಗಿದೆ. ಬಳಿಕ ಮೂರ್ನಾಡು ಕೋಡಂಬೂರು ವಿನ ಉರಗತಜ್ಞ ಪ್ರಜ್ವಲ್ ಕುಮಾರ್ ರನ್ನು ಸಂಪರ್ಕಿಸಿ ಹಾವನ್ನು ಹಿಡಿದು ಮಾಕುಟ ರಕ್ಷಿತಾ ಅರಣ್ಯದಲ್ಲಿ ಬಿಡುವುದರ ಮೂಲಕ ಕಾಳಿಂಗ ಸರ್ಪವನ್ನು ರಕ್ಷಿಸಿದ್ದಾರೆ.

ಕೊಳಕೇರಿ ಗ್ರಾಮ ಅಭಿವೃದ್ಧಿ ಸಂಘದ ಕಾರ್ಯದರ್ಶಿ ಕುಂಡಿಯೋಳಂಡ ವಿಶು ಪೂವಯ್ಯ, ಕೇಟೋಳಿರ ಶಮ್ಮಿ ಸುಬ್ಬಯ್ಯ ಗ್ರಾಮದ ಹಿರಿಯರಾದ ಕನ್ನಂಬೀರ ಎನ್.ಚಂಗಪ್ಪ, ಕಾಂಡಂಡ ಚೋಂದವ್ವ, ಕುಂಡಿಯೋಳಂಡ ಜತ್ತಿ ಸುಬ್ಬಯ್ಯ, ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು. ಇಂತಹ ವಿಷಕಾರಿ ಹಾವುಗಳು ಕಂಡು ಬಂದಲ್ಲಿ ಕೊಲ್ಲಬೇಡಿ. ಭಯಪಡುವ ಅವಶ್ಯಕತೆ ಇಲ್ಲ. ನನಗೆ ಮಾಹಿತಿ ನೀಡಿ ದರೆ ಹಾವುಗಳನ್ನು ಹಿಡಿದು ರಕ್ಷಿಸಲಾಗು ವುದು ಎಂದು ಉರಗತಜ್ಞ ಪ್ರಜ್ವಲ್ ಕುಮಾರ್ ತಿಳಿಸಿದರು.

ನಾಳೆ ಕೆಸರುಗದ್ದೆ ಕ್ರೀಡಾಕೂಟ

ವಿರಾಜಪೇಟೆ: ಅಮ್ಮತ್ತಿ ಕೊಡವ ಸಮಾಜ, ಕೊಡವ ಸಮಾಜ ಪೊಮ್ಮಕ್ಕಡ ಕೂಟ, ಲಯನ್ಸ್‌ಕ್ಲಬ್ ಸಹಯೋಗ ದಲ್ಲಿ ಅಮ್ಮತ್ತಿ ಕೊಡವ ಸಮಾಜದ ಸದಸ್ಯರು ಮತ್ತವರ ಕುಟುಂಬದವರಿಗೆ ಆ.3 ರಂದು 2ನೇ ವರ್ಷದ ಕೆಸರುಗದ್ದೆ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ ಎಂದು ಅಮ್ಮತ್ತಿ ಕೊಡವ ಸಮಾಜದ ಅಧ್ಯಕ್ಷ ಐನಂಡ ಪ್ರಕಾಶ್ ಗಣಪತಿ ಹೇಳಿದರು.

ವಿರಾಜಪೇಟೆ ಪ್ರೆಸ್ ಕ್ಲಬ್‌ನಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಬಿಳುಗುಂದ ಗ್ರಾಮದ ಐನಂಡ ನವೀನ್ ಚಂಗಪ್ಪ ಸಹೋ ದರರ ಗದ್ದೆಯಲ್ಲಿ ನಡೆಯುವ ಕ್ರೀಡಾಕೂಟ ದಲ್ಲಿ ನಾಟಿ ನೆಡುವುದು, ನಾಟಿಓಟ, ಪುರು ಷರಿಗೆ ಮತ್ತು ಮಹಿಳೆಯರು, ಮಕ್ಕಳಿಗೆ ಹಗ್ಗ ಜಗ್ಗಾಟ, ವಿಷದಚೆಂಡು ಸೇರಿದಂತೆ ಇನ್ನಿತರ ಕ್ರೀಡಾಕೂಟವನ್ನು ನಡೆಸಲಾ ಗುವುದು. ಕ್ರೀಡಾಕೂಟಕ್ಕೆ ಯಾವುದೇ ಪ್ರವೇಶ ಶುಲ್ಕ ಇರುವುದಿಲ್ಲವೆಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ದಾನಿಗಳಾದ ಪಟ್ಟಡ ದೀಪಕ್ ಕಾರ್ಯಪ್ಪ ನೆಲ್ಲವಂಡ ಮನು ಕುಶಾಲಪ್ಪ ಐನಂಡ ನವೀನ್ ಚಂಗಪ್ಪ ಲಯನ್ಸ್ ಕ್ಲಬ್ ಅಧ್ಯಕ್ಷ ಸೋಮೆ ಯಂಡ ಎಸ್ ಪೂಣಚ್ಚ, ಅಮ್ಮತ್ತಿ ಕೊಡವ ಸಮಾಜದ ಅಧ್ಯಕ್ಷ ಐನಂಡ ಪ್ರಕಾಶ್ ಗಣಪತಿ ಉಪಸ್ಥಿತರಿ ರುವರು ಎಂದರು. ಗೋಷ್ಠಿಯಲ್ಲಿ ಅಮ್ಮತ್ತಿ ಕೊಡವ ಸಮಾಜದ ಉಪಾಧ್ಯಕ್ಷ ಮಚ್ಚಾರಂಡ ಇಗ್ಗುಮಣಿ ಅಚ್ಚಯ್ಯ, ಖಜಾಂಚಿ ಮಾಚಿ ಮಂಡ ಜಯ ಉತ್ತಪ್ಪ, ಸೋಮೆಯಂಡ ಎಸ್.ಪೂಣಚ್ಚ ಉಪಸ್ಥಿತರಿದ್ದರು.

ಶಾಲಾ ಮಕ್ಕಳಿಗೆ ಶೂ ಸಾಕ್ಸ್‌ಗಳ ವಿತರಣೆ



ಸುಂಟಿಕೊಪ್ಪದ ನಲ್ಲೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಶೂ, ಸಾಕ್ಸ್‌ನ್ನು ಗ್ರಾಪಂ ಸದಸ್ಯ ಆರ್.ಆರ್. ಮೋಹನ್ ವಿತರಿಸಿದರು. ಶಾಲಾ ಸಿಬ್ಬಂದಿ ಹಾಜರಿದ್ದರು.

ಮಂಡ್ಯ ಜಿಲ್ಲೆಯಲ್ಲಿ ಯೂರಿಯಾ ಕೊರತೆ ಇಲ್ಲ: ಡಿಸಿ ಕುಮಾರ್

ಮಂಡ್ಯ: ಜಿಲ್ಲೆಯಲ್ಲಿ ಯೂರಿಯಾ ಕೊರತೆ ಇಲ್ಲ. ಹೀಗಾಗಿ ರೈತರು ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಧಿಕಾರಿ ಗಳ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 5000 ಮೆಟ್ರಿಕ್ ಟನ್ ಯೂರಿಯಾ ದಾಸ್ತಾನಿದ್ದು, ಕೆಲವೇ ದಿನದಲ್ಲಿ 1800 ಮೆ.ಟನ್ ಯೂರಿಯಾ ಬರಲಿದೆ. ಜಿಲ್ಲೆಯಲ್ಲಿ ಕೃಷಿಗೆ ಸಂಬಂಧಿಸಿದ ಚಟು ವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ರಸಗೊಬ್ಬರ ಮಾರಾಟಗಾರರು ತಮ್ಮಲ್ಲಿರುವ ಭೌತಿಕ ಹಾಗೂ ಆನ್‌ಲೈನ್ ದಾಸ್ತಾನು ಒಂದೇ ರೀತಿ ಇರುವಂತೆ ನೋಡಿಕೊಳ್ಳಬೇಕು. ಮಾರಾಟ ವಾದ ತಕ್ಷಣ ನಮೂದಿಸಿದರೆ ಸರಿಯಾದ ಲೆಕ್ಕ ಸಿಗುತ್ತದೆ. ರಸಗೊಬ್ಬರದ ಕೃತಕ ಕೊರತೆ ಉಂಟಾ ಗುವ ಸನ್ನಿವೇಶ ಸೃಷ್ಟಿಸುವುದು. ಹೆಚ್ಚಿನ ದರಕ್ಕೆ ಮಾರಾಟ ಮಾಡುವುದು ಕಂಡು ಬಂದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು.

ರಸಗೊಬ್ಬರ ಹಾಗೂ ಬಿತ್ತನೆ ಬೀಜ ಮಾರಾಟ ಗಾರರು ತಮ್ಮ ಬಳಿ ಇರುವ ರಸಗೊಬ್ಬರ ಹಾಗೂ



ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿದರು.

ದಾಸ್ತಾನು ವಿವರದ ಫಲಕವನ್ನು ಅನಾವರಣಗೊಳಿ ಸಬೇಕು. ರೈತರಿಗೆ ನ್ಯಾನೋ ಯೂರಿಯಾ ಉಪಯು ಕ್ತತೆ ಹಾಗೂ ಬಳಕೆ ಬಗ್ಗೆ ಕೃಷಿ ಅಧಿಕಾರಿಗಳು ಜಾಗೃತಿ ಮೂಡಿಸಬೇಕು. ತಹಸೀಲ್ದಾರ್ ಹಾಗೂ ತಾಲೂಕು ಸಹಾಯಕ ಕೃಷಿ ನಿರ್ದೇಶಕರು ನಿಯಮಿತವಾಗಿ ರಸಗೊಬ್ಬರ ಮಾರಾಟ ಅಂಗಡಿಗಳಿಗೆ ಹಾಗೂ ರೈತ ಚಟುವಟಿಕೆ ಇರುವ ಸ್ಥಳಗಳಿಗೆ ಭೇಟಿ ನೀಡಿ ಕೆಲಸಗಳು ನಿಯಮಾನುಸಾರ ನಡೆಯುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಿ ಎಂದರು.

ಯೂರಿಯಾವನ್ನು ಕೃಷಿಯೇತರ ಚಟುವಟಿಕೆ ಗಳಿಗೆ ಬಳಕೆ ಮಾಡುವುದನ್ನು ತಡೆಗಟ್ಟಲು ಉಪ ವಿಭಾಗಾಧಿಕಾರಿ ಮುಂದಾಳತ್ವದಲ್ಲಿ ತಂಡಗಳನ್ನು ರಚಿಸಲಾಗಿದೆ. ತಂಡದಲ್ಲಿ ಕೈಗಾರಿಕಾ, ವಾಣಿಜ್ಯ ತೆರಿಗೆ, ಪೊಲೀಸ್ ಇಲಾಖೆ ಅಧಿಕಾರಿಗಳು ಕಾರ್ಯ ನಿರ್ವಹಿಸಲಿದ್ದಾರೆ ಎಂದರು.

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಮಾತನಾ ಡಿದರು. ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕ ಅಶೋಕ್, ಕೈಗಾರಿಕಾ ಇಲಾಖೆ ಜಂಟಿ ನಿರ್ದೇಶಕ ದಿನೇಶ್ ಸೇರಿದಂತೆ ಇನ್ನಿತರೆ ಅಧಿಕಾರಿಗಳಿದ್ದರು.

ಪವಿತ್ರ ಸ್ಥಳಗಳ ಮೇಲಿನ ಅಪನಂಬಿಕೆ ದೂರಾಗಬೇಕು

ಮಂಡ್ಯ: ಧರ್ಮಸ್ಥಳ ಸೇರಿದಂತೆ ಹಿಂದೂಗಳ ಪವಿತ್ರ ಸ್ಥಳಗಳ ಮೇಲಿನ ಅಪ ನಂಬಿಕೆ ದೂರಾಗಬೇಕಿದೆ. ಪಿಎಫ್‌ಐ, ಎಸ್‌ಎಫ್‌ಐ ನಂತಹ ಸಂಘಟನೆಗಳು ನಮ್ಮ ನಂಬಿಕೆ ಕೇಂದ್ರಗಳ ಬಗ್ಗೆ ಮಾತನಾಡುವಂತಾಗಿದ್ದು, ಇದಕ್ಕೆ ಪೂರಕವಾಗಿ ಕುಮ್ಮಕ್ಕು ಕೊಡುವವರು ನಮ್ಮಲ್ಲಿಯೇ ಇದ್ದಾರೆ ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ ಕಿಡಿಕಾರಿದರು.



ಅಶ್ವತ್ಥ್ ನಾರಾಯಣ

ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಧರ್ಮಸ್ಥಳ ಪ್ರಕರಣಕ್ಕೆ ಸಂಬಂ ಧಿಸಿದವರು ಅಗ್ನಿ ಪರೀಕ್ಷೆ ಎದುರಿಸಲು ಸಿದ್ಧ ರಿದ್ದಾರೆ. ಬೇಗ ತನಿಖೆ ನಡೆದು ಸತ್ಯ ಹೊರಬರಲಿ. ಧರ್ಮಸ್ಥಳದ ಯೂಟ್ಯೂಬರ್ ಮಾಡಿರುವ ವಿಡಿಯೋ ನೋಡಿದರೆ ಎಲ್ಲಾ ವ್ಯವಸ್ಥಿತ ಅನಿಸುತ್ತದೆ. ನಮ್ಮ ನಂಬಿಕೆ ಕೇಂದ್ರಗಳ ಬಗ್ಗೆ ಸುಳ್ಳು ಹೇಳುವವರು ಅಲ್ಲಿದ್ದಾರೆ. ಅವರ ಮೇಲೂ ಸೂಕ್ತ ತನಿಖೆ ಆಗಬೇಕು. ಆರೋಪ ಮಾಡಿರುವವರನ್ನು ಕೂಡ ಸರ್ಕಾರ ತನಿಖೆಗೆ ಒಳಪಡಿಸಬೇಕು. ಇವರಿಗೆ ಹಣ ಎಲ್ಲಿಂದ ಬರುತ್ತದೆ. ಹಿಂದೆ ಯಾರಿದ್ದಾರೆ ಅಂತಲೂ ತನಿಖೆ ಆಗಲಿ ಎಂದು ಆಗ್ರಹಿಸಿದರು.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ದೋಷಿ ವಿಚಾ ರದ ಬಗ್ಗೆ ಮಾತನಾಡಿ, ಕಾನೂನನ್ನು ಎಲ್ಲರೂ ಗೌರ ವಿಸಬೇಕು. ಮುಂದೆ ಏನಾಗುತ್ತೆ ಅನ್ನುವುದನ್ನು ಕಾದು ನೋಡೋಣ. ನ್ಯಾಯಾಲಯದ ಮುಂದೆ ಎಲ್ಲರೂ ಸರಿಸಮಾನರು ಎಂದರು.

ಚುನಾವಣಾ ಆಯೋಗದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ವಿಚಾರದ ಬಗ್ಗೆ ಮಾತನಾಡಿ, ಲೋಕಸಭೆ ಚುನಾವಣೆ ವೇಳೆ ರಾಜ್ಯದಲ್ಲಿ ಅವರದೆ ಸರ್ಕಾರ ಇತ್ತು ಅಧಿಕಾರಿಗಳು ಅವರ ಅಡಿಯ ಲ್ಲಿದ್ದಾರೆ. ಮತದಾರ ಪಟ್ಟಿ ನೋಂದಾಯಿಸುವವರು ಇವರ ಅಡಿಯಲ್ಲಿ ಇರುವವರೇ ಆಗಿದ್ದಾರೆ. ಈಗ ಸಾಕ್ಷಿ ಮಾತ್ರ ರಾಹುಲ್ ಗಾಂಧಿ ಬಳಿ ಅಂತಾರೆ. ಕೆಪಿಸಿಸಿ ಅಧ್ಯಕ್ಷರ ಬಳಿ ಸಾಕ್ಷಿ ಇರಲಿಲ್ವ ಎಂದು ಪ್ರಶ್ನಿಸಿದ ಅವರು, ಇದನ್ನು ಸಂಸತ್ ಅಧಿವೇಶನದಲ್ಲಿ ಪ್ರಸ್ತಾಪಿಸ ಬಹುದಿತ್ತು ಆದರೆ ಅವರು ಹೊರಗೆ ಮಾತಾಡ್ತಿದ್ದಾರೆ ಇದು ರಾಜಕೀಯ ಪ್ರೇರಿತ ಎಂದು ಪ್ರಶ್ನಿಸಿದರು.

ನನ್ನ ಬಗ್ಗೆಯೂ ಕೀಳು ಮಾತುಗಳು ಹೊಸದಲ್ಲ

ಮಾಜಿ ಸಂಸದೆ ಸುಮಲತಾ ಅಂಬರೀಶ್ ಅಸಮಾಧಾನ

ಮಂಡ್ಯ, ಆ.1– ನನಗೂ ಆನ್‌ಲೈನ್ ಟ್ರೋಲ್, ಕೀಳು ಮಾತುಗಳೇನು ಹೊಸದಲ್ಲ. ಐದಾರು ವರ್ಷಗಳಿಂದ ನಾನು ಅನುಭವಿಸುತ್ತಾ ಬರುತ್ತಿದ್ದು, ನಾನು ಈ ನೋವನ್ನು ಸಾಕಷ್ಟು ಬಾರಿ ಅನುಭವಿ ಸಿದ್ದೇನೆ ಎಂದು ಮಾಜಿ ಸಂಸದೆ ಸುಮಲತಾ ಅಂಬರೀಶ್ ಅಸಮಾಧಾನ ವ್ಯಕ್ತಪಡಿಸಿದರು.

ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಕೆ.ಆರ್.ನಗರದಲ್ಲಿ ನನ್ನ ಮೇಲೆ ಹಲ್ಲೆ ನಡೆದಿತ್ತು. ನಾನು ಆಗ ಪೊಲೀಸ್ ಠಾಣೆಗೆ ದೂರು ನೀಡಿದ್ದೆ. ಆದರೆ ಇಲ್ಲಿವರೆಗೆ ನನಗೆ ನ್ಯಾಯ ದೊರೆತಿಲ್ಲ. ಹಲ್ಲೆ ಮಾಡಿದವರನ್ನು ಪೊಲೀಸರು ಬಂಧಿಸಿಲ್ಲ ಎಂದು ನೋವು ತೋಡಿಕೊಂಡರು.

ಸೋಶಿಯಲ್ ಮೀಡಿಯಾವನ್ನು ಹೇಗೆ ಬಳಸಬೇಕೆಂದು ಯುವ ಸಮೂಹ ಯೋಚಿಸ ಬೇಕು. ಸೋಶಿಯಲ್ ಮೀಡಿಯಾವನ್ನು ಬೇರೆಯವರನ್ನು ಟಾರ್ಗೆಟ್ ಮಾಡುವ ವೆಪನ್ ಅಂದುಕೊಂಡಿದ್ದಾರೆ. ಅನಾಮಿಕರಾಗಿ ಪೋಸ್ಟ್ ಮಾಡುತ್ತಿದ್ದೇವೆ ಎಂದುಕೊಂಡಿರುವ ಕಿಡಿಗೇಡಿ ಗಳನ್ನು ಕಂಡು ಹಿಡಿಯುವ ತಂತ್ರಜ್ಞಾನ ಮುಂದುವರಿದಿದೆ. ಸೋಶಿಯಲ್ ಮೀಡಿಯಾ ದಲ್ಲಿ ಟಾರ್ಗೆಟ್ ಮಾಡುವ ಮುನ್ನ ಯೋಚನೆ ಮಾಡಬೇಕು ಎಂದರು.

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುವುದರಿಂದ ಯಾವುದೇ ಉಪಯೋಗ ಇಲ್ಲ. ನನ್ನ ಬಗ್ಗೆ 6 ವರ್ಷಗಳಿಂದ ಟ್ರೋಲ್ ಆದಾಗ ಯಾರೂ ಮಾತಾಡಿಲ್ಲ. ನಮಗೆ ಹೆಸರಿರುವ ಕಾರಣ ಎಲ್ಲವೂ ಸುಲಭವಾಗಿ ಸಿಗುತ್ತದೆ. ಸದ್ಯ ಮಾಜಿ ಸಂಸದೆ ರಮ್ಯಾ ದೂರು ನೀಡಿದ್ದು, ಅವರದ್ದೇ ಸರ್ಕಾರ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದು, ಅವರಿಗೆ ಸಹಕಾರ ಸಿಗಬಹುದು. ಜೊತೆಗೆ ಪೊಲೀಸರು ಅವರ ದೂರಿನ ಆಧಾರದಲ್ಲಿ ಬೇಗ ಕ್ರಮಕೈಗೊಳ್ಳಲಿ ಎಂದರು.



ಹೆಣ್ಣು ಮಕ್ಕಳಿಗೆ ಕೆಟ್ಟ ಕಾಮೆಂಟ್ ಮಾಡಬಾರದು. ನಾನು ರಮ್ಯಾರ ಸಾಮಾಜಿಕ ಜಾಲತಾಣ ನೋಡಿಲ್ಲ. ಅವರಿಗೆ ಯಾವ ರೀತಿಯ ಕಾಮೆಂಟ್ ಮಾಡಿದ್ದಾರೆ ಯಾರು ಮಾಡಿದ್ದಾರೆ ಎಂದು ಗೊತ್ತಿಲ್ಲ. ಮಾಧ್ಯಮಗಳಲ್ಲಿ ಅಷ್ಟೇ ನಾನು ಇದನ್ನು ನೋಡಿದ್ದೇನೆ. ರಮ್ಯಾ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ತನಿಖೆ ನಡೆಸಿ ತಪ್ಪು ಮಾಡಿದವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಾರೆ. ನಮ್ಮ ಸರ್ಕಾರ ಮತ್ತು ಪೊಲೀಸರು ರಮ್ಯಾಗೆ ಸ್ಪಂದಿಸು ವಂತೆ ಸಾರ್ವಜನಿಕರಿಗೂ ಸ್ಪಂದಿಸಬೇಕೆಂದು ಸಲಹೆ ನೀಡಿದರು.

ಈ ಎಲ್ಲಾ ಬೆಳವಣಿಗೆಗಳ ಬಗ್ಗೆ ನಟ ದರ್ಶನ್‌ಗೆ ಮಾಹಿತಿ ಇದೆಯೋ ಇಲ್ಲವೋ ಗೊತ್ತಿಲ್ಲ. ಅವರು ಯಾವ ಮಾಧ್ಯಮಗಳಿಗೂ ಈ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ. ಅವರು ತಮ್ಮ ಅಭಿಮಾನಿಗಳಿಗೆ ಸ್ಪಷ್ಟ ಸಂದೇಶ ಕೊಡಬಹುದಿತ್ತಾ ಎಂಬ ಬಗ್ಗೆ ಅವರೇ ಮಾತನಾಡಬೇಕು. ಈ ವಿಚಾರದಲ್ಲಿ ನಾನು ದರ್ಶನ್ ಪರ ಹೇಳಿದರೆ ತಪ್ಪಾಗುತ್ತದೆ. ನಾನು ಯಾವ ನಟನ ಅಭಿಮಾನಿಗೂ ವಿಶೇಷವಾಗಿ ಹೇಳಲ್ಲ. ಜೊತೆಗೆ ಅಶ್ಲೀಲ ಸಂದೇಶಗಳನ್ನು ದರ್ಶನ್ ಅಭಿಮಾನಿಗಳೇ ಮಾಡಿದ್ದಾರೆ ಎನ್ನುವು ದಕ್ಕೆ ಆಧಾರ ಇಲ್ಲ. ಒಂದು ವೇಳೆ ದರ್ಶನ್ ಅಭಿಮಾನಿಗಳೇ ಮಾಡಿದ್ದರೆ ಮುಂದೆ ಈ ರೀತಿ ಮಾಡದಂತೆ ಸಲಹೆ ನೀಡುತ್ತೇನೆ. ನಿಮ್ಮ ಕುಟುಂಬ ಮತ್ತು ಭವಿಷ್ಯ ನೋಡಿಕೊಳ್ಳಿ ಎಂದು ಸಲಹೆ ನೀಡುತ್ತೇನೆ ಎಂದರು.

ದರ್ಶನ್ ಅವರು ಜೈಲಿನಿಂದ ಬಿಡು ಗಡೆಯಾದ ಬಳಿಕ ನಾನು ಅವರೊಂ ದಿಗೆ ಮಾತನಾಡಿಲ್ಲ. ಮಾತನಾಡಲು ಅಥವಾ ಪ್ರತಿಕ್ರಿಯೆ ನೀಡಲು ಹಲವು ವಿಚಾರಗಳಿವೆ. ಈ ವಿಚಾರ ಬೇಡ ಎಂದು ನುಣುಚಿಕೊಂಡರು.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ದೋಷಿ ಎಂದು ಕೋರ್ಟ್ ತೀರ್ಪು ಪ್ರಕಟ ಬಗ್ಗೆ ಮಾತನಾಡಿ, ಕೋರ್ಟ್ ಆದೇಶವನ್ನು ಯಾರೇ ಆಗಲಿ ಪಾಲಿಸಬೇಕು. ಈ ವಿಚಾರದ ಬಗ್ಗೆ ನಾನು ಹೆಚ್ಚು ಕಮೆಂಟ್ ಮಾಡಲು ಏನು ಇಲ್ಲ. ಕೋರ್ಟ್ ತೀರ್ಪು ಕೊಟ್ಟ ಮೇಲೆ ಮಾತ ನಾಡೋಕೆ ಏನು ಇಲ್ಲ. ಕೋರ್ಟ್ ದೋಷಿ ಎಂದು ಹೇಳಿದ ಮೇಲೆ ಮುಗಿಯಿತು. ಶಿಕ್ಷೆ ಏನು ಪ್ರಕಟ ಆಗುತ್ತದೆಂಬುದನ್ನು ನೋಡೋಣ ಎಂದರು.

ಧರ್ಮಸ್ಥಳದಲ್ಲಿ ಎಸ್‌ಐಟಿ ತಂಡದಿಂದ ಉತ್ಖನನ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿ, ಆರೋಪ ಮಾಡುವುದು ಸುಲಭ. ಆರೋಪ ಸಾಬೀತು ಆಗುವವರೆಗೆ ಏನೇನೋ ಮಾತನಾ ಡುವುದು ಸರಿಯಲ್ಲ. ಯಾರೋ ಒಬ್ಬರು ಏನೋ ಹೇಳಿದ ತಕ್ಷಣ ನಿಜ ಆಗಬೇಕು ಅಂತಾ ಇಲ್ಲ. ಜವಾಬ್ದಾರಿ ಇರುವ ಅಧಿಕಾರಿ ಗಳು ತನಿಖೆ ನಡೆಸುತ್ತಿದ್ದಾರೆ. ತನಿಖೆಯಿಂದ ಸತ್ಯಾ ಸತ್ಯತೆ ಹೊರ ಬರುತ್ತದೆ. ಪ್ರತಿಯೊಬ್ಬರು ಒಂದೊಂದು ಜಡ್ಜ್‌ಮೆಂಟ್ ಕೊಡಬಾರದು ಎಂದು ಸಲಹೆ ನೀಡಿದರು.

ಒಳಮೀಸಲಾತಿ ಜಾರಿಗಾಗಿ ಪ್ರತಿಭಟನೆ

ಚಾಮರಾಜನಗರ, ಆ.1–ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆಧಾರದ ಮೇಲೆ ಪರಿಶಿಷ್ಟ ಸಮುದಾಯದಲ್ಲಿ ಒಳ ಮೀಸಲಾತಿ ಜಾರಿ ಮಾಡುವಂತೆ ಒತ್ತಾಯಿಸಿ ಜಿಲ್ಲಾ ಮಾದಿಗ ಒಳ ಮೀಸಲಾತಿ ಹೋರಾಟ ಒಕ್ಕೂಟದ ವತಿಯಿಂದ ನಗರದಲ್ಲಿ ಜನಾಕ್ರೋಶ ಪ್ರತಿಭಟನೆ ನಡೆಸಿದರು

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಸೇರಿದ ಪ್ರತಿಭಟನಾಕಾ ರರು ಅಲ್ಲಿಂದ ಮೆರವಣಿಗೆ ಹೊರಟು ಭುವ ನೇಶ್ವರಿ ವೃತ್ತದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಾನವ ಸರ ಪಳಿ ರಚಿಸಿ ಕೆಲಕಾಲ ರಸ್ತೆತಡೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡರ ಮುಖಾಂತರ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಒಕ್ಕೂಟದ ಅಧ್ಯಕ್ಷ ಅರಕಲವಾಡಿ ನಾಗೇಂದ್ರ ಮಾತನಾಡಿ, ಪರಿಶಿಷ್ಟ ಸಮುದಾಯದಲ್ಲಿ ಒಳಮೀಸಲಾತಿ ಜಾರಿ ಮಾಡುವಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿ ಇಂದಿಗೆ ಒಂದು ವರ್ಷ ತುಂಬಲಿದೆ. ಹೀಗಿದ್ದರೂ ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಲು



ಒಳ ಮೀಸಲಾತಿ ಜಾರಿ ಮಾಡುವಂತೆ ಒತ್ತಾಯಿಸಿ ಒಳಮೀಸಲಾತಿ ಹೋರಾಟ ಸಮಿತಿ ಪ್ರತಿಭಟನೆ ನಡೆಸಿತು.

ವಿಳಂಬ ಧೋರಣೆ ಅನುಸರಿಸುತ್ತಿದೆ. ಮುಂಬರುವ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ನಿರ್ಧಾರ ಕೈಗೊಳ್ಳದಿದ್ದರೆ, ಅಸಹಕಾರ ಚಳವಳಿ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸುಪ್ರೀಂಕೋರ್ಟ್ ತೀರ್ಪು ಬಳಿಕ ತೆಲಂ ಗಾಣ, ಆಂಧ್ರಪ್ರದೇಶ, ಪಂಜಾಬ್‌ನಲ್ಲಿ ಒಳ ಮೀಸಲಾತಿ ಜಾರಿ ಮಾಡಲಾಗಿದೆ. ಹೀಗಿ ದ್ದರೂ ಕರ್ನಾಟಕದಲ್ಲಿ ಅನಗತ್ಯವಾಗಿ ವಿಳಂಬ ಮಾಡಲಾಗುತ್ತಿದೆ. ಇದು ಸರಿಯಲ್ಲ. ಒಳ ಮೀಸಲಾತಿ ಜಾರಿಯಾಗಬೇಕು ಎನ್ನುವುದು ಕಳೆದ ಮೂರೂವರೆ ದಶಕಗಳಿಂದ ನಡೆಯು ತ್ತಿರುವ ಹೋರಾಟವಾಗಿದೆ. ಒಳ ಮೀಸಲಾತಿ ಶೀಘ್ರ ಜಾರಿ ಮಾಡಬೇಕು, ಇಲ್ಲದಿದ್ದರೆ ಹೋರಾಟ ಅನಿವಾರ್ಯ ಎಂದರು.

ಜಿಲ್ಲಾ ಮಾದಿಗ ಒಳಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಬಸವನಪುರ ರಾಜ ಶೇಖರ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಶೋಷಿತ ಸಮು ದಾಯಗಳಿಗೆ ಸಾಮಾಜಿಕ ನೆಲೆಗಟ್ಟಿನಲ್ಲಿ ನಮಗೆ ಮೀಸಲಾತಿ ಕೊಟ್ಟಿದ್ದಾರೆ. 101 ಜಾತಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಸಮಾನ ವಾಗಿ ಹಂಚಿಕೆ ಆಗಬೇಕು. ಒಳ ಮೀಸಲಾತಿ ಜಾರಿಗಾಗಿ ಮಾದಿಗ ಸಮು ದಾಯ 25 ವರ್ಷಗಳಿಂದಲೂ ಹೋರಾಟ ಮಾಡುತ್ತಿದೆ. ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದ್ದು, ಒಳ ಮೀಸಲಾತಿ ನೀಡಲು ಆಯಾಯ ರಾಜ್ಯಗಳಿಗೆ ಅವಕಾಶ ನೀಡಿದೆ. 15 ದಿನಗಳೊಳಗೆ ಒಳಮೀಸಲಾತಿ ಜಾರಿ ಯಾಗದಿದ್ದರೆ ಪಕ್ಷಾತೀತವಾಗಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು

ಪ್ರತಿಪ್ರತಿಭಟನೆಯಲ್ಲಿ ಮೂಡಹಳ್ಳಿ ಮೂರ್ತಿ, ರಂಗಸ್ವಾಮಿ, ಸುಂದರ, ಚಾ.ಗು. ನಾಗರಾಜ್, ವಕೀಲರಾದ ಬೂದಿತಿಟ್ಟು, ರಾಜೇಂದ್ರ ಸಿದ್ದೇಶ್, ಮಹದೇವಯ್ಯ, ನಿವೃತ್ತ ಅಧಿಕಾರಿ ಜವರಯ್ಯ, ರಾಮಸಮುದ್ರ ಶಿವಣ್ಣ, ಶಿವಕುಮಾರ್, ಸಿದ್ದರಾಜು, ಸಿದ್ದಯ್ಯ, ಮಹೇಶ್, ಹನೂರು ಮಹದೇವು, ಚೆನ್ನ ಬಸಪ್ಪ, ರವಿ, ಬಸವಣ್ಣ, ಮಹದೇವ, ಮಹ ದೇವು, ಸಂಪತ್, ಅಪ್ಪು, ದೇವರಾಜು, ಗುರುಲಿಂಗಯ್ಯ, ರವಿ, ಮಹದೇವಸ್ವಾಮಿ, ಚಿನ್ನಸ್ವಾಮಿ ಇತರರು ಭಾಗವಹಿಸಿದ್ದರು.

ಹುಲಿಗೆ ವಿಷ ಪ್ರಾಶನ ಪ್ರಕರಣದಲ್ಲಿ ನಿರಪರಾಧಿಗಳಿಗೆ ಶಿಕ್ಷೆ: ಎಆರ್‌ಕೆ

ಕೊಳ್ಳೇಗಾಲ: ರಾಷ್ಟ್ರಪ್ರಾಣಿ ಹುಲಿಗೆ ವಿಷ ಪ್ರಾಶನ ನಿಜಕ್ಕೂ ಘೋರವಾದುದು, ಆದರೆ ಈ ಪ್ರಕರಣದಲ್ಲಿ ನಿರಪರಾಧಿಗ ಳಿಗೂ ಶಿಕ್ಷೆ ವಿಧಿಸಿದ್ದು ಸರಿಯಾದ ಕ್ರಮ ವಲ್ಲ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿಪ್ರಾಯಿಸಿದ್ದಾರೆ.

ಆದರ್ಶ ಶಾಲೆಯಲ್ಲಿ ನಡೆದ ವನ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತ ನಾಡಿದ ಅವರು, ಮಹದೇಶ್ವರ ವನ್ಯಧಾಮ ದಲ್ಲಿ ರೈತರ ಹಸು ಹುಲಿ ತಿಂದಿದೆ ಎಂಬ ಕಾರಣಕ್ಕೆ ಆ ರೈತ ಕುಟುಂಬ ಸತ್ತ ಹಸುವಿಗೆ ಕ್ರಿಮಿನಾಶಕ ಸಿಂಪಡಿಸಿ ಹುಲಿಗಳ ಸಾವಿಗೆ ಕಾರಣವಾದದ್ದು ಘೋರ ದುರಂತ, ಇದು ರಾಷ್ಟ್ರಮಟ್ಟದಲ್ಲೂ ಪ್ರಾಣಿಪ್ರಿಯರ ಆಕ್ರೋ ಶಕ್ಕೆ ಕಾರಣವಾಗಿದೆ. ಆದರೆ ಇದೇ ವಿಚಾರವನ್ನು ಸರ್ಕಾರ ಗಮನದಲ್ಲಿಟ್ಟು ಕೊಂಡು ಇಲಾಖಾ ಸಿಬ್ಬಂದಿಗಳಿಗೆ ವೇತನ ನೀಡಿರಲಿಲ್ಲ ಎಂಬ ಕಾರಣಕ್ಕೆ ಕೆಲ ಅಧಿ ಕಾರಿಗಳನ್ನು ಹೊಣೆಗಾರರನ್ನಾಗಿ ಮಾಡ ಲಾಗಿದೆ. ಈ ಪ್ರಕರಣದಲ್ಲಿ ಹಿಂದಿದ್ದ ಸಂತೋಷ್ ಕುಮಾರ್ ಅವರನ್ನು ಹೊಣೆ ಗಾರರನ್ನಾಗಿಸಬೇಕಿತ್ತು, ಹಾಗಾಗಿ ಈಗ



ಕೊಳ್ಳೇಗಾಲದ ಆದರ್ಶ ಶಾಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿದರು.

ಈ ಭಾಗದಲ್ಲಿ ಕರ್ತವ್ಯ ನಿರ್ವಹಿಸು ತ್ತಿರುವ ಅಧಿಕಾರಿಗಳು ಅದನ್ನ ಅರ್ಥ ಮಾಡಿಕೊಂಡು ಜಾಗೃತರಾಗಿ ಕೆಲಸ ಮಾಡುವಂತೆ ತಿಳಿಹೇಳಿದರು

ಆದರ್ಶ ಸರ್ಕಾರಿ ವಿದ್ಯಾಲಯದ ಮಕ್ಕಳು ಕಲಿಕೆಯಲ್ಲಿ ಮುಂಚೂಣಿ ಕಾಯ್ದುಕೊಂಡಿ ದ್ದಾರೆ. ಸರ್ಕಾರ ಗ್ರಾಮೀಣ ಪ್ರದೇಶದ ಮಕ್ಕಳು ಕಲಿಕೆಯಲ್ಲಿ ಮುಂದೆ ಬರಬೇಕೆಂದು ಅನೇಕ ಕಾರ್ಯಕ್ರಮ ರೂಪಿಸಿದೆ. ಇದನ್ನ ಮಕ್ಕಳು ಸದ್ಬಳಕೆ ಮಾಡಿಕೊಳ್ಳಬೇಕೆಂದರು. ಚಾ.ನಗರ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೊಂಗನೂರು ಚಂದ್ರು, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸುರೇಶ್, ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್, ಸಹಾಯಕ ಅರಣ್ಯ ಸಂರಕ್ಷಣಾ ಧಿಕಾರಿ ಅಕ್ಷಯ್ ಕುಮಾರ್, ಚಾ.ನಗರ ಎಸಿಎಫ್ ಸಂದೀಪ್, ವಲಯ ಅರಣ್ಯಾಧಿ ಕಾರಿ ರವಿಕುಮಾರ ಪುರಾಣಿಕಮಠ, ಸಾಮಾ ಜಿಕ ಅರಣ್ಯ ವಲಯಾಧಿಕಾರಿ ಪ್ರಫುಲ್ಲಾ ಕೆ.ಪಿ, ಬಿಆರ್‌ಟಿ ವಲಯ ಅಧಿಕಾರಿ ವಾಸು, ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ, ಆದರ್ಶ ಶಾಲೆಯ ಮುಖ್ಯಶಿಕ್ಷಕಿ ಪ್ರಿಯದರ್ಶಿನಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಎಸ್‌ಡಿ ಎಂಸಿ ಅಧ್ಯಕ್ಷ ಲಿಂಗರಾಜು, ಉಪಾಧ್ಯಕ್ಷೆ ವನಿತಾ ಮಂಜೇಶ್, ಮಾಜಿ ಅಧ್ಯಕ್ಷ ಪ್ರಕಾಶ್ ಇದ್ದರು

ಡಾ.ರಾಜ್‌ಕುಮಾರ್ ಸಹೋದರಿ ನಾಗಮ್ಮ ನಿಧನ



ಚಾಮರಾಜನಗರ: ವರನಟ ದಿ.ಡಾ. ರಾಜ್‌ಕುಮಾರ್ ಸಹೋದರಿ ನಾಗಮ್ಮ(94) ಶುಕ್ರವಾರ ಬೆಳಗ್ಗೆ ವಯೋಸಹಜ ಕಾಯಿಲೆಯಿಂದ ನಿಧನರಾದರು.


ತಮಿಳುನಾಡಿನ ಗಾಜನೂರಿನಲ್ಲಿ ರಾಜ್‌ಕುಮಾರ್ ಕಟ್ಟಿಸಿದ್ದ ಮನೆಯಲ್ಲಿ ತಮ್ಮ ಪುತ್ರನೊಂದಿಗೆ ವಾಸವಾಗಿದ್ದ ಅವರು, ಹಲವು ವರ್ಷಗ ಳಿಂದ ವಯೋಸಹಜ ಖಾಯಿಲೆಯಿಂದ ಬಳಲುತ್ತಿದ್ದರು ಎಂದು ತಿಳಿದು ಬಂದಿದೆ. ಡಾ.ರಾಜ್‌ಕುಮಾರ್ ತಲೆಮಾರಿನ ಹಿರಿಯ ಸದಸ್ಯೆ ಸಹೋದರಿ ನಾಗಮ್ಮ, ಐವರು ಪುತ್ರರು, ಮೂವರು ಪುತ್ರಿ ಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಗಾಜನೂರಿನಲ್ಲಿ ಅಂತ್ಯಕ್ರಿಯೆ: ನಾಗಮ್ಮ ನಿಧನದ ಸುದ್ದಿ ತಿಳಿದ ಕೂಡಲೇ ಕಾರ್ಯನಿಮಿತ್ತ ಇಂದು ಬೆಳಗ್ಗೆಯಷ್ಟೇ ಗೋವಾಗೆ ತೆರಳಿದ್ದ ಶಿವಣ್ಣ ಮರಳಿ ಬರುತ್ತಿದ್ದಾರೆ ಎಂದು ತಿಳಿದು ಬಂದಿದೆ. ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಮತ್ತು ದೊಡ್ಮನೆಯ ಕುಟುಂಬದವರು ಗಾಜ ನೂರಿಗೆ ತೆರಳಿದ್ದಾರೆ. ಅಂತ್ಯಕ್ರಿಯೆ ಶನಿವಾರ ಗಾಜನೂರಿನಲ್ಲಿಯೇ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇಶ್ವರ ಬೆಟ್ಟದಲ್ಲಿ ಗಡಿನಾಡ ಸಾಂಸ್ಕೃತಿಕ ಉತ್ಸವ ಯಶಸ್ವಿ

ಚಾಮರಾಜನಗರ, ಆ.1 – ರಾಜ್ಯ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿ ಕಾರ ಹಾಗೂ ಹನೂರು ತಾಲೂಕು ಆಡ ಳಿತ ಸಹಯೋಗದಲ್ಲಿ ಮಲೆ ಮಹದೇ ಶ್ವರಬೆಟ್ಟದಲ್ಲಿ ಗಡಿನಾಡ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ ಇಂದು ನಡೆಯಿತು.

ಮಲೆಮಹದೇಶ್ವರ ಬೆಟ್ಟದ ದೇವಾಲಯ ಪಕ್ಕದ ರಂಗಮಂದಿರದಲ್ಲಿ ಆಯೋಜಿಸ ಲಾಗಿದ್ದ ಗಡಿನಾಡ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮವು ಶಾಸಕ ಎಂ.ಆರ್. ಮಂಜು ನಾಥ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸೋಮಣ್ಣ ಬೇವಿನಮರದ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಮಹ ದೇಶ್ವರ ಬೆಟ್ಟ ಗಾಪಂ ಅಧ್ಯಕ್ಷೆ ಅರ್ಚನಾ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿ ಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ ಭಾಗವಹಿಸಿದ್ದರು. ಹನೂರು ತಾಲೂಕು ತಹಶೀಲ್ದಾರ್ ಕೆಎನ್. ಚೈತ್ರಾ, ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ರಘು, ಕಸಾಪ ತಾಲೂಕು ಅಧ್ಯಕ್ಷರು, ಗ್ರಾ. ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ, ಎಂಡಿಸಿಸಿ ಬ್ಯಾಂಕಿನ ಅಧ್ಯಕ್ಷರು, ಉಪಾ ಧ್ಯಕ್ಷರು ಹಾಗೂ ಸದಸ್ಯರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಕಾರ್ಯ ಕ್ರಮದಲ್ಲಿ ಉಪಸ್ಥಿತರಿದ್ದರು.



ಸೋಮಣ್ಣ ಬೇವಿನಮರದ ಅಧ್ಯಕ್ಷತೆಯಲ್ಲಿ ಮಹದೇಶ್ವರ ಬೆಟ್ಟದಲ್ಲಿ ನಡೆಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–2496522/23

ಉಚಿತ ವೃದ್ಧಾಶ್ರಮ
ವೃದ್ಧ ಮಹಿಳೆಯರಿಗೆ ಮಾತ್ರ
ಉತ್ತಮ ವ್ಯವಸ್ಥೆಯೊಂದಿಗೆ ವಯಸ್ಸಾದವರನ್ನು ನೋಡಿಕೊಳ್ಳಲಾಗುವುದು
6364693043

ಮನೆ ಬಾಡಿಗೆಗೆ ಇದೆ
1st floor, 1BHK, T. K. Layout ,
Mob : 9738444665

FARM LAND FOR SALE
Gated Community Managed FARM LAND attached to Kapila River @ Airport Road, Nanjangudu.
Mob: 9886048471

RERA APPROVED — RAI ESTATES — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

MUDA SITE FOR SALE
ಇನ್ಫೋಸಿಸ್ ಪಕ್ಕ "KBL ಸಿಲಿಕಾನ್ ಸಿಟಿ" ಸೈಟುಗಳು ಲಭ್ಯ.
Mob: 9886048471

ಸೈಟ್ ಮಾರಾಟಕ್ಕಿದೆ
ಬೆಳವಾಡಿಯಲ್ಲಿರುವ 30X40 ನಾರ್ತ್ ಫೇಸ್ ರೆವೆನ್ಯೂ ಸೈಟ್ ಮಾರಾಟಕ್ಕೆ ಇದೆ. ಕೆನರಾ ಬ್ಯಾಂಕ್ ಮುಂಭಾಗದ ರಸ್ತೆ. ನಮೂನೆ 3A ಲಭ್ಯವಿದೆ. ಸಿಂಗಲ್ ಬೆಡ್ ರೂಮ್ ಶೀಟ್ ಹೌಸ್ ಒಳಗೊಂಡಿದ್ದು, ವಿದ್ಯುತ್ ಹಾಗೂ ನೀರಿನ ಸಂಪರ್ಕವಿರುತ್ತದೆ.
9845430098
9342220221

ಎಂ.ಎಂ. ಎಲೆಕ್ಟ್ರಿಕಲ್ಸ್
Govt. Licensed Electrical Contractor
ಗಿರಿದರ್ಶಿನಿ ಬಡಾವಣೆ, ಮೈಸೂರು – 570028
ಹೊಸ ಮನೆಗಳಿಗೆ ಎಲೆಕ್ಟ್ರಿಕ್ ಕಾಮಗಾರಿ ಹಾಗೂ ಎಲ್ಲಾ ರೀತಿಯ ಎಲೆಕ್ಟ್ರಿಕ್ ರಿಪೇರಿ ಕೆಲಸ ಮಾಡಿಕೊಡಲಾಗುತ್ತದೆ.
ಸಂಪರ್ಕಿಸಿ : ಎಂ. ದಯಾನಂದ
89705 75179

ಹೊಸ ಮನೆ ಮಾರಾಟಕ್ಕಿದೆ
30X35, 4BHK
3ಪ್ಲೆಕ್ ದಟ್ಟಗಳ್ಳಿ ಆದಿತ್ಯ ಸರ್ಕಲ್ ಹತ್ತಿರ ಮೈಸೂರು
Mob : 7204401199

HOUSE FOR SALE
DUPLEX HOUSE NEAR MALL OF MYSORE ITTIGEGUD, INDIRA NAGAR, MYSORE
FOR DETAILS CONTACT
MOb: 9035561512

GODOWN FOR RENT
Of 1200 Square Feet Opposite to APMC Attached to Ringroad, Mysore
98863 86698

GNANA BHARATHI HOUSING SOCIETY
MUDA PLOTS FOR SALE
Behind Mysore Airport
@3000/- per sq.ft.
Just 5 mins drive from J.P. Nagar Ring Road.
Mob: 9538459944

ಸುವರ್ಣ ಯಾತ್ರಾ
3 ದಿನಗಳ ಶಿರಡಿ ಪ್ರವಾಸ 15–8–25
3 ದಿನಗಳ ಪುರಿ ಪ್ರವಾಸ 15–8–25
4 ದಿನಗಳ ಕಾಶಿ ಪ್ರವಾಸ 29–8–25
7 ದಿನಗಳ ರಾಮೇಶ್ವರಂ ಮತ್ತು ನವಗ್ರಹ ಪ್ರವಾಸ 1–9–24
9 ದಿನಗಳ ಅಯೋಧ್ಯಾ ನೇಪಾಳ ಪ್ರವಾಸ 11–9–25
13 ದಿನಗಳ ಚಾರ್ ಧಾಮ್ ಪ್ರವಾಸ 11–9–25
9019462508, 6360146483

ನಿವೇಶನ ಮಾರಟಕ್ಕಿದೆ
ಮೈಸೂರಿನ ಇಲವಾಲ, ಗುಂಗ್ರಾಲ್ ಛತ್ರದ ಕೆ.ಆರ್.ಎಸ್. ನಿಸರ್ಗ ಬಡಾವಣೆಯ ಕೆ.ಹೆಚ್.ಬಿ. ಬ್ಲಾಕ್–1 ಹೆಚ್.ಐ.ಜಿ.–1, 40X60 ಅಳತೆಯ ಉತ್ತರ ದಿಕ್ಕಿನ ವಸತಿ ನಿವೇಶನ ಮಾರಟಕ್ಕಿದೆ ಆಸಕ್ತರು ಸಂಪರ್ಕಿಸಿ :
9886145599

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
90x60, Nadig Nagar Husnsur Road, 30x40, 40x60 corner Parashuram nagar, Bannur road, Bugathagally 30x50, Karle Habitat
30x40 Nithyanandha sagar.
Wanted MUDA Site / House Apartment
Mob: 9448938989

LUXURY PROPERTIES
NEXT TO PRAGATHI ELITE SCHOOL
LOOKING FOR EXPERIENCED BOGADI SIGNAL
1. SALES EXECUTIVES - 5MEMBERS
2. ACCOUNTANT - 1 MEMBERS
3. TELE CALLERS - 5 MEMBERS
4. MANAGER - 1 MEMBER
5. TEAM LEADER - 2 MEMBERS
BEST SALARY WILL BE GIVEN ACCORDING TO EXPERIENCE. INTERVIEW DATE: 04-08-2025
9482598035, 8762874697

ಬೇಕಾಗಿದ್ದಾರೆ
ನಜರ್‌ಬಾದ್‌ನಲ್ಲಿರುವ ಆಫೀಸ್‌ಗೆ ವಿದ್ಯಾವಂತ ಮಹಿಳಾ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ :
7259389106

HOUSE FOR SALE
- 3 BHK, Duplex House 20x30
- 3 BHK, Ground & First Floor House 30x40 at Lalithadrinagar, MUDA Clear Title Deed, Architect Building.
- Wanted 3 BHK Apartment for immediate purchase.

Call: 94489 38989 / 78920 35789

COMMERCIAL COMPLEX FOR SALE
at Vivekananda Circle, 3 floor building with Cellar
Total built-up area 10,800sq.ft.,
Site Dimension 45x60
Sale Price : 5.3 Crore
Call : 94489 38989 / 78920 35789

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

PART TIME JOB OPPORTUNITES
For Senior Citizen, House Wife and 45+ above. Fix Salary / PF/ESI+ Incentive and we are hiring Female for Telecalling with Good Communication Skills. More Details contact
9538436622 / 7208872090

TEACHERS TRAINING
Montessori, Nursery & Pre-school
SSLC Pass, PUC Any Degree Can Apply
Limited Seats Only.
100% Job Assurance At PRE-SCHOOL OR PRIVATE SCHOOL.
LITTLE STAR, ABC Montessori.
Vijaynagar 4th Stage, 1st Phase Mysore- 570017.
CALL 8884970282

ಬೇಕಾಗಿದ್ದಾರೆ
ಸಸ್ಯಾಹಾರಿ ಮತ್ತು ಮಾಂಸಾಹಾರ ಮಾಡುವ ಅಡುಗೆಯವರು ಬೇಕಾಗಿದ್ದಾರೆ.
ಸಂಪರ್ಕಿಸಿ:
8431315761

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

SBIT ಟ್ರಾವೆಲ್ಸ್
ಬಾಲಿಪ್ರವಾಸ
05N-06D 2025
ಸೆಪ್ಟೆಂಬರ್:14
ವಿಮಾನಟಿಕೆಟ್‌ಗಳು| ಹೋಟೆಲ್ ವೀಸಾ | ಊಟ | ಪ್ರವೇಶಟಿಕೆಟ್‌ಗಳು |ಎಲ್ಲಾಪ್ರವಾಸಗಳು
9343524127
(ಸರಸ್ವತಿಪುರಂ, ಮೈಸೂರು)


ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

PRAKRUTHI PROPERTIES
FOR SALE
30x40@ 22 lakhs Near RT Nagar
BSNL Lyt Sites Also Avl.
Apartments @ Ramakrishna Nagar
Residential & Commercial Plots in & around Mysore
20x30 New 2BHK House, As Per your Plan With Interiors @ Just 40 Lakh in Bogadi
95386 90359, 90359 90359

ಸೋಲಾರ್ ಸರ್ವೀಸ್
ಅನ್ನು ಕಂಪನಿ ಕಡೆಯಿಂದ 700 ರೂ. ಗೆ 1–7–2025 ರಿಂದ 15–8–2025 ರವರೆಗೆ ಮಾಡಿಕೊಡಲಾಗುತ್ತದೆ.
Mob: 9008711654

R S CONSTRUCTION
ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,85,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009
7019151884

ಮನೆ ಬಾಡಿಗೆಗೆ
ಶ್ರೀರಾಂಪುರ 2ನೇ ಹಂತ BEML ಆರ್ಚ್ ಹತ್ತಿರ, ಎಲ್ಲಾ ಸೌಲಭ್ಯವಿರುವ 1 Floorನಲ್ಲಿರುವ 2 BHK ಮನೆ ಬಾಡಿಗೆಗೆ ಲಭ್ಯವಿರುತ್ತದೆ.
ಸಂಪರ್ಕಿಸಿ:
7760968422



Solar Water Heater
SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್ ಹಾಗೂ ಕಾರ್ ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ
ಸಂಪರ್ಕಿಸಿ:
99014 60603

SITE FOR SALE
ಇಲವಾಲ ಸಮೀಪ ಬಿಳಿಕೆರೆಗೆ ಹೊಂದಿಕೊಂಡಂತೆ 30x40 ಅಳತೆಯ A ಖಾತಾ ನಿವೇಶನಗಳು ಮಾರಾಟಕ್ಕಿದೆ. ರಿಜಿಸ್ಟರ್ ಮಾಡಲು ಮತ್ತು ಮನೆ ಕಟ್ಟಲು ಸಿದ್ಧವಾಗಿದೆ. ಲೋನ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ
DSS 9945245946
9845114304

MUDA SITE FOR SALE
ಕಡಕೊಳ ಪಕ್ಕ, ತಾಂಡವಪುರದಿಂದ ಕೇವಲ ಒಂದು ಕಿ.ಮೀ.ನಲ್ಲಿ ಮನೆ ಕಟ್ಟಲು, ಯೋಗ್ಯವಾದ 30x40 Muda ನಿವೇಶನಗಳು ಮಾರಾಟಕ್ಕಿವೆ. Loan ಸೌಲಭ್ಯವಿದೆ.
DSS. 9845114304
9845114307

REQUIRED IMMEDIATELY
Candidate required for Delivery and Office work, attrative Salary contact
99005 56687

ಮನೆ ಮಾರಾಟಕ್ಕಿದೆ
20x30 ಹೊಸ ಮನೆ, ಪೂರ್ವದಿಕ್ಕು, ನೆಲ ಮತ್ತು ಮೊದಲ ಅಂತಸ್ತು. ಹೆಬ್ಬಾಳ ಒಂದನೇ ಹಂತ, ನಿಸರ್ಗ ಬಡಾವಣೆ, ಮೈಸೂರು
7204253999 / 9972124626

SITE FOR SALE
Total Feet : 2160Sq, Feet 'L' Shape
Near Kamakshi Hospital
No : 9902890008

HOUSE FOR RENT
3BHK Semi Furnished House at Ground Floor Available for Rent at Vijayanagar 1st Stage, Behind Vishal Mart, 11th 'A' Main Road. Interested may Please Contact
0821-2512181
9481529280
Expected Rent Rs. 25K

3BHK FLAT FOR RENT
3BHK Semi Furnished well Ventilated Car Park. 1700 Sq.Ft for Rent, Ready to Occupy, Broker Excuse Interested Contact
9480308402
9004470423

SITE FOR SALE
K H B LAYOUT KENCHALAGUDU
60X40 East Face
50 Feet Road
No Broker
94487 62348

S.K. CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ 20x30 ಮನೆ ಅಥವಾ ಸೈಟ್ ದಟ್ಟಗಳ್ಳಿ, ರಾಜರಾಜೇಶ್ವರಿನಗರ ಮತ್ತು Christ Public School ಹತ್ತಿರ 80% Loan ಸಹಿತ ಮಾಡಿಕೊಡಲಾಗುತ್ತದೆ
96862 41281

ಬಂಧನ ಮ್ಯಾರೇಜಸ್
ವಧು–ವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆಮಾಡಿ
63617 40552
94494 08551

WANTED TEACHERS
CANDIDATES WITH FLUENCY IN ENGLISH COMMUNICATION CAN APPLY
PLACE : NANJANGUD
9731179651

ಬೇಕಾಗಿದ್ದಾರೆ
ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡಲು ತುರ್ತಾಗಿ ಉತ್ಸಾಹಿ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. * ಫೀಲ್ಡ್ ಕೋ–ಆರ್ಡಿನೇಟರ್ಸ್– 500 ಹುದ್ದೆಗಳು * ಟೆಲಿಕಾಲರ್ಸ್– 100 ಹುದ್ದೆಗಳು * ನರ್ಸ್– 500 ಹುದ್ದೆಗಳು * ಡಾಕ್ಟರ್ಸ್ (ಎಂಬಿಬಿ–ಎಸ್, ಬಿಎಎಂಎಸ್)– 50 ಹುದ್ದೆಗಳು. ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೊಮೋ, ಎನಿ ಡಿಗ್ರಿ ಸಂಬಳ: 15,000/– ರಿಂದ 50,000 ವರೆಗೆ
9632082448 / 9036961447

ನಿಮ್ಮ ಮನೆಯನ್ನು ನಿರ್ಮಿಸಿಕೊಡಲಾಗುತ್ತದೆ.
ನಿಮ್ಮ ಇಚ್ಛೆಯಂತೆ ಸಿವಿಲ್ ಕಂಟ್ರಾಕ್ಟರ್, ಮೈಸೂರು ಸುತ್ತಮುತ್ತ ಸಂಪರ್ಕಿಸಿ
9036751306

ಮನೆ ಬಾಡಿಗೆಗೆ ಬೇಕಾಗಿದೆ
3BHK ಪೂರ್ವ ಅಥವಾ ಉತ್ತರ ದಿಕ್ಕು ಶುದ್ಧ ಸಸ್ಯಹಾರಿ
ಏರಿಯಾ : ಕುವೆಂಪುನಗರ, ಅರವಿಂದನಗರ, ರಾಮಕೃಷ್ಣನಗರ, ವಿವೇಕಾನಂದ ನಗರ, ನೆಲ ಮಹಡಿ ಅಥವಾ ಇಂಡಿಪೆಂಡೆಂಟ್ ಮನೆ
9945706848

ನಿವೇಶನ ಮಾರಾಟಕ್ಕಿದೆ
30x50 ಪೂರ್ವ ದಿಕ್ಕು, ಕೆ.ಹೆಚ್.ಬಿ. ಕೆಂಚಲಗೂಡು ಮಾಲೀಕರನ್ನು ನೇರ ಸಂಪರ್ಕಿಸಿ
9901114874

ಅಂಗಡಿ ಅಥವಾ ಗೋಡೌನ್‌ಗಾಗಿ ಮಳಿಗೆ ಬಾಡಿಗೆಗೆ ದೊರೆಯುತ್ತದೆ
ಗಾಂಧಿಸ್ಕ್ವೇರ್ M.C.O ಬ್ಯಾಂಕ್ ಹಿಂಭಾಗ
ಉದ್ದ : 22 ಅಡಿ
ಅಗಲ : 9 ಅಡಿ
ದಿಕ್ಕು : ಉತ್ತರ
7975677995

ಬಾಡಿಗೆಗೆ ಇದೆ
2ನೇ ಮಹಡಿ, ಸಿಂಗಲ್ ಬೆಡ್‌ರೂಂ, ಕಿಚನ್, ಬಾತ್‌ರೂಂ, ಅದಕ್ಕೆ ಸಂಬಂಧಪಟ್ಟಂತೆ 25x45 ಹಾಲ್ ಶೀಟ್‌ಹಾಕಿ ಕವರ್ ಮಾಡಿರುತ್ತೆ. ಟ್ಯೂಷನ್ ಮತ್ತು ಯೋಗ ಮಕ್ಕಳಿಗೆ ಸಂಗೀತ, ಡ್ಯಾನ್ಸ್ ಮಾಡಬಹುದಾಗಿದೆ. ನಾಗೇಗೌಡ, ಎಂ ಬ್ಲಾಕ್ ಬಸ್‌ಸ್ಟಾಪ್ ಹತ್ತಿರ, ಕುವೆಂಪುನಗರ
6362429022

ತಕ್ಷಣ ಬೇಕಾಗಿದ್ದಾರೆ
ಅಪೋಲೋ ಹಾಸ್ಪಿಟಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟು
ಸಂಬಳ : 18500 + W/o (8hrs)
22000+ W/o (12hrs)
ಊಟ ತಿಂಡಿ ಸೌಲಭ್ಯವಿರುತ್ತದೆ.
ಸಂಪರ್ಕಿಸಬೇಕಾದ ಸಂಖ್ಯೆಗಳು :
9880727819 / 9620667819

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ ಟಿವಿಎಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟು
ವಯೋಮಿತಿ 45 ವರ್ಷದೊಳಗೆ
ಸಂಬಳ : 18000 + 26Days(8hrs)
ESI, PF, ಮತು ಊಟ, ತಿಂಡಿ ವಸತಿ ಸೌಲಭ್ಯವಿದೆ.
9620777819 / 9620667819

ಹೊಸಮನೆ ಮಾರಾಟಕ್ಕಿದೆ
20x30, S/F, Ground and First Floor
ವಿನಾಯಕ ಗಾರ್ಡನ್ ಸಿಟಿ ಗೋಲ್ಡ್
9686969813
8904500433

WANTED
For Delivery ನಂಜನಗೂಡು
Job Role: Delivery Executive (Delivery Boy) ಸಂಬಳ ಮಾಸಿಕ ಪಾವತಿ & ಪರ್ ಶಿಫ್ಟ್‌ಮೆಂಟ್ ಪಾವತಿ 15,000/– – 25,000/–. ರೂ. ಪೆಟ್ರೋಲ್ ಭತ್ಯೆ, ಮೊಬೈಲ್ ರೀಚಾರ್ಜ್ + ಸೌಲಭ್ಯಗಳು. ESI&PF ಅಗತ್ಯ : ಬೈಕ್ ಮತ್ತು ಸ್ಮಾರ್ಟ್ ಮೊಬೈಲ್
Hurry Up and Join Today
9513851227 / 8073831098

ಬೇಕಾಗಿದ್ದಾರೆ
ಮನೆ ಕೆಲಸ, ಅಡುಗೆ ಕೆಲಸಕ್ಕೆ ಹೆಲ್ಪರ್ ಆಗಿ ಮಹಿಳೆಯರು ಬೇಕಾಗಿದ್ದಾರೆ
ಸರಸ್ವತಿಪುರಂನಲ್ಲಿರುವ ಮನೆ
ಮನೆ ಕೆಲಸ ಬೆಳಿಗ್ಗೆ 7 ರಿಂದ 3
ಹೆಲ್ಪರ್ : ಬೆಳಿಗ್ಗೆ 6.30 ರಿಂದ 2, ಸಂಜೆ 4 ರಿಂದ 8
ಆಕರ್ಷಕ ವೇತನ
ಅಪೋಲೋ ಆಸ್ಪತ್ರೆ ಸಮೀಪ ಇರುವ ಬಸವಮಾರ್ಗ ಸಂಸ್ಥೆಯಲ್ಲಿ (03–08–2025) ಭಾನುವಾರ ಸಂದರ್ಶನ
96060 51232

ಮನೆ ಭೋಗ್ಯ / ಬಾಡಿಗೆಗೆ
ಕುವೆಂಪುನಗರ ನಿಮಿಷಾಂಬ ಬಡಾವಣೆ, 13ನೇ ಕ್ರಾಸ್‌ನಲ್ಲಿ 1BHK ಮನೆ 2ನೇ ಮಹಡಿ ಮೇಲೆ ಭೋಗ್ಯ / ಬಾಡಿಗೆಗೆ ಇದೆ.
94480 92818

DON BOSCO
3 Month Training and Job
- Computer (Basics & Tally)
- Spoken English
- Life Skills

9036081098 / 9036061098
NR Mohalla, Mysore

ಸೈಟು ಮಾರಾಟಕ್ಕಿದೆ
30x40 ವಿಜಯನಗರ 4ನೇ ಹಂತ ಹೊಂದಿಕೊಂಡಿರುವ ರೇಷಬ್ ಲೇಔಟ್ ಮೂಡ ಅಪ್ರೂವ್ E/F ಸೈಟ್ 40 feet ರೋಡ್‌ಗೆ ಇದೆ, ಬೆಲೆ 6000 per sq.ft
88846 16461
74113 56023

ನಿವೇಶನಗಳು ಮಾರಾಟಕ್ಕಿವೆ
1. 26x40 KNS Calisto ಹತ್ತಿರ ಮೂಲೆ ನಿವೇಶನ ಕೇರ್ಗಳ್ಳಿ, ದಟ್ಟಗಳ್ಳಿ
2. 22x40 ತುಮಖಾನೆ ನಗರ, ಬನ್ನೂರು ರಸ್ತೆ

Call: ಮಾಲೀಕರು
86607 26140

ಬೇಕಾಗಿದ್ದಾರೆ
MAX SOLAR ಆಫೀಸ್‌ನಲ್ಲಿ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. ವಯೋಮಿತಿ 24 ರಿಂದ 35. ವಿದ್ಯಾರ್ಹತೆ Any Degree
8431811770

WANTED
Security Field Officer (Male) (Min 2-3yrs Exp. in Security Agency),
Security Guard (Male) (Min 1yrs Exp. As Security Guard),
Salary: 12,000/-
Call between 10AM to 5PM
7337888385 / 9620624999
Mail your CV to: acpltd123@gmail.com

ನಿವೇಶನ ಮಾರಾಟಕ್ಕಿದೆ
20x30, S/F, Opposite Park
ಯುನಿವರ್ಸಿಟಿ ಲೇಔಟ್
Near Ring road, ದಟ್ಟಗಳ್ಳಿ, ಮೈಸೂರು
9945900167

ನಿವೃತ್ತರಿಗೆ ಉದ್ಯೋಗಾವಕಾಶದ ಸೆಮಿನಾರ್
ಕೇಂದ್ರ / ರಾಜ್ಯ ಸರ್ಕಾರದ ನೌಕರರಿಗೆ ಹಾಗೂ ಸಾರ್ವಜನಿಕ ಸಂಸ್ಥೆಯವರಿಗೂ ಉದ್ಯೋಗ ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. ಸೆಮಿನಾರ್ ನಡೆಯುವ ಸ್ಥಳ: ಹೋಟೆಲ್ ಮೌರ್ಯ ರೆಸಿಡೆನ್ಸಿ, ನಂ.2718, ವುಡ್‌ಲ್ಯಾಡ್ ಟಾಕೀಸ್ ಹತ್ತಿರ, ಮೈಸೂರು. ದಿ: 04–08–2025, ಸಮಯ: ಬೆಳಿಗ್ಗೆ : 11 ಗಂಟೆಗೆ ಬೇಕಾಗಿರುವ ದಾಖಲಾತಿಗಳು. 1. ಫೋಟೋ 2. ಪಾನ್‌ಕಾರ್ಡ್ 3. ಆಧಾರ್ ಕಾರ್ಡ್ 4. ವಿದ್ಯಾರ್ಹತೆ SSLC & Above 5. ಬ್ಯಾಂಕ್ ಪಾಸ್‌ಪುಸ್ತಕ 1st Page. Followed by Lunch, Call
9449068132 / 7022034200

CHANGE OF NAME
I, ZAFARULLA BAIG S/o Late. Mahboob Ali Baig, Residing at #4, Belavatha Grama main Road, Kesare, Narasimharaja Mohalla, Mysuru - 570007, have changed my name ZAFARULLA BAIG To ZAFRULLA BAIG vide affidavit sworn before Notary C.R. Seetharam, Mysore, Dated: 31.07.2025
Sd/- ZAFRULLA BAIG

ಜಮೀನು ಬೇಕಾಗಿದೆ
ಮೈಸೂರು ನಗರದಿಂದ 15 ಕಿ.ಮೀ. ವ್ಯಾಪ್ತಿಯೊಳಗೆ ಬಡಾವಣೆ ನಿರ್ಮಿಸಲು ಯೋಗ್ಯವಾದ ಜಮೀನುಳ್ಳ ಮಾಲೀಕರು ಮಾತ್ರ ಸಂಪರ್ಕಿಸಿ
80733 00783
74113 56023

Looking for **40X60** and **30X40** East or North Facing Site in SBM Bogadi Vijayanagara 1st / 2nd/3rd/4th Dattagalli to buy Immediately only owners can call
80733 00783
88846 16461

ತಕ್ಷಣ ಬೇಕಾಗಿದ್ದಾರೆ
Sri Sapthagiri Builders and Developers, Mysuru (Hebbal 1st Stage)
1. Tele Callers - 02
2. Basic Salary 10K + Incentive Earn upto 17K+
3. Marketing Head - 02 Experience Basic Salary 20K+ Incentive

9980524644 / 9591828444

ಕಳೆದಿದೆ
ಗೌರಮ್ಮ, ನಂ. 5/ಬಿ, ಮಥುರಾನಗರ, ಮೇಟಗಳ್ಳಿ, ಮೈಸೂರು ಇಲ್ಲಿ ವಾಸವಿದ್ದು, ನನ್ನ ಸ್ವತ್ತಿನ ನಂ. 217, 1ಎ ಕ್ರಾಸ್, ರೈಲ್ವೇಟ್ರಾಕ್ ಹತ್ತಿರ, ಬೃಂದಾವನ ಬಡಾವಣೆ, ದೇವರಾಜ ಮೊಹಲ್ಲಾ, ಮೈಸೂರು. ಈ ಸ್ವತ್ತಿನ ಮಂಜೂರಾತಿ ಪತ್ರ (Allotment Letter) ಮತ್ತು ಸ್ವಾಧೀನ ಪತ್ರಗಳು (Possession Letter) ಕಳೆದುಹೋಗಿದ್ದು, ಸಿಕ್ಕವರು ಸಂಪರ್ಕಿಸಿ.
8867007674

ಹೊಸ ಮನೆ ಮಾರಾಟಕ್ಕಿದೆ
ಇಲವಾಲದ ಸೇಂಟ್ ಜೋಸೆಫ್ ಸ್ಕೂಲ್, ಆಚಾರ್ಯ ವಿದ್ಯಾಕುಲ ಶಾಲೆಯ ಹತ್ತಿರ MUDA ಅನುಮೋದಿತ ಬಡಾವಣೆಯಲ್ಲಿ 20x30 ಅಳತೆಯ ಡ್ಯೂಪ್ಲೆಕ್ಸ್ ಮನೆಯಲ್ಲಿ 3 ಬೆಡ್‌ರೂಂ, 3 ಬಾತ್‌ರೂಂ, ಓನ್ ಬೋರ್‌ವೆಲ್ ಇರುವ ಫುಲ್ ಫರ್ನಿಶ್ಡ್ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
ನಂಜುಂಡಸ್ವಾಮಿ ಹೆಚ್.ಎಸ್ (ಮಾಜಿ ಸೈನಿಕರು)
9483862050 / 8660625801

ಸೈಟ್ ಮಾರಾಟಕ್ಕಿದೆ
40x56 ಸೌತ್ ಫೇಸ್ 160 ಅಡಿ ರಸ್ತೆ, ಕಮರ್ಷಿಯಲ್ ಬೋಗಾದಿ ಗದ್ದಿಗೆ ರಸ್ತೆ ಹಾಗೂ 40x60 ಪೂರ್ವಮುಖ ನಿವೇಶನ ನಿವೇದಿತ ನಗರ
99451 48025

WANTED
ಮೈಸೂರಿನ ಹೆಸರಾಂತ MNC ಕಂಪನಿಗಳಿಗೆ 7th, 10th, PUC, ITI, Diploma, Any Degree Pass/Fail, M.Com, MBA ಆದ Packing & Helper, MechineOpertor Q/C Checking Accounts, Billing, Cashier, Admin, HR Tellicolling Data Entry, Security Drivers ಇತ್ಯಾದಿ ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ.
ESI, PF+OT
ಸಂಬಳ 15,000/– ರಿಂದ 60,000/–
9036559663 / 9964977103

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ Benefits: Fixed Salary + PF+ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು: ಫೋಟೋ, ಪಾನ್ ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಎಸ್.ಎಸ್.ಎಲ್.ಸಿ. ಅಂಕಪಟ್ಟಿ
ಸ್ಥಳ: ಮಯೂರ ರೆಸಿಡೆನ್ಸಿ, ಶ್ರೀಹರ್ಷ ರೋಡ್, ಮೈಸೂರು
ಸಮಯ : 11 ಗಂಟೆ, ದಿ: 04–08–2025
Followed by Lunch
9448376423 / 9886883858

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ ಸಪ್ತ ಮಾತೃಕ ಲೇಔಟ್ ಪೋಲೀಸ್ ಲೇಔಟ್ ಜೆ.ಎಸ್.ಎಸ್. ಲೇಔಟ್
98444 36672

ಮನೆಯಿಂದಲೇ ಕೆಲಸಗಳು
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್‌ಟೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ–ಎಂಟ್ರಿ, ವಾಟ್‌ಆಫ್ ಟೈಪಿಂಗ್, ಫ್ಲವರ್ ಪ್ಯಾಕಿಂಗ್, ಜ್ಯುವೆಲರಿ ಪ್ಯಾಕಿಂಗ್, ಗುಡ್‌ಲೀಫ್ ಕವರ್ ಪ್ಯಾಕಿಂಗ್ ಹಾಗೂ ಕರಕುಶಲ ವಸ್ತುಗಳ ಪ್ಯಾಕಿಂಗ್ ಕೆಲಸಗಳು ಲಭ್ಯ – ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 20,000/– ದಿಂದ 35,000/–ರ ವರೆಗೆ.
7259816020 / 7829483767

ಸೈಟುಗಳು ಮಾರಾಟಕ್ಕಿವೆ
ಜೆ.ಎಸ್.ಎಸ್. 3ನೇ ಹಂತ ಮತ್ತು ಜೆ.ಎಸ್.ಎಸ್. ಯುನಿವರ್ಸಿಟಿ ಹತ್ತಿರ, ವರುಣ ಸರ್ಕಲ್, ಟಿ. ನರಸೀಪುರ ರಸ್ತೆ
96860 71750

ಜಮೀನು ಮಾರಾಟಕ್ಕಿದೆ
ಮೈಸೂರು ಜಿಲ್ಲೆ ಜಯಪುರ ಹೋಬಳಿ ಗ್ರಾಮ ಜಮೀನು ಮಾರಾಟಕ್ಕಿದೆ 19 ಕುಂಟೆ
9731937223

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕಾಡಂಚಿನ ಜನರಿಗೆ ರಕ್ಷಣೆ ಅಗತ್ಯ

ಶಾಸಕ ಜಿ.ಡಿ.ಹರೀಶ್‌ಗೌಡ



ಹುಲಿ ದಾಳಿಗೆ ಬಲಿಯಾದ ಹರೀಶ್ ಕುಟುಂಬದವರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಪರಿಹಾರ ಮಂಜೂರಾತಿ ಪತ್ರ ವಿತರಿಸಿದರು

ಹುಣಸೂರು, ಆ.1– ಕಾಡಂಚಿನಲ್ಲಿ ವಾಸಿಸುವ ಜನರಿಗೆ ರಕ್ಷಣೆ ಅಗತ್ಯವಾಗಿದ್ದು, ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಶಾಸಕ ಜಿ.ಡಿ.ಹರೀಶ್‌ಗೌಡ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನ ನಾಗಪುರ ಹಾಡಿಯಲ್ಲಿ ಹುಲಿ ದಾಳಿಗೆ ಬಲಿಯಾಗಿದ್ದ ಹರೀಶ್ ಮನೆಗೆ ಭೇಟಿ ನೀಡಿ ಪರಿಹಾರ ಮಂಜೂರಾತಿ ಪತ್ರ ವಿತರಿಸಿ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಅಸುಪಾಸಿನ ಗ್ರಾಮ ವ್ಯಾಪ್ತಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುರಕ್ಷತೆ ಕೈಗೊಳ್ಳುವಂತೆ ಸೂಚನೆ ನೀಡಿದರು.

ಬಡವರು, ಆದಿವಾಸಿಗಳು ವಾಸಿಸಬೇಕು. ಆ ನಿಟ್ಟಿನಲ್ಲಿ ಅವರಿಗೆ ಭೂಮಿ ನೀಡಬೇಕು. ಆದಿವಾಸಿಗಳಿಗೆ ವಸತಿ ಕಲ್ಪಿಸುವ ನಿಟ್ಟಿನಲ್ಲಿ ಈಗಾಗಲೇ ಭರವಸೆ ನೀಡಲಾಗಿದೆ. ಅದರಂತೆ ನಡೆದುಕೊಳ್ಳಬೇಕು. ಮಾನವೀಯತೆಯಿಂದ ನೋಡಬೇಕು ಎಂದರು.

ಅರಣ್ಯ ಅಂಚಿನಲ್ಲಿಯೂ ಸಾಕಷ್ಟು ಭೂಮಿ ಒತ್ತುವರಿಯಾಗಿದೆ. ಆದಿವಾಸಿಗಳು, ಬಡವರಿಗೆ ಸಹ ವಾಸಕ್ಕೆ ಜಾಗ ಒದಗಿಸಬೇಕಿದೆ ಎಂದ ಅವರು ಹುಲಿ ಸೆರೆ ಕಾರ್ಯಾಚರಣೆಗೆ ಸಾಕಾನೆಗಳನ್ನು ಬಳಸಿಕೊಳ್ಳಲಾಗಿದೆ. ಈ ಸಂಬಂಧ 3 ತಿಂಗಳಿಂದ ಹುಲಿ ಸೆರೆ ಹಿಡಿಯುವ ಕಾರ್ಯಾಚರಣೆ ಆರಂಬಿಸಲಾಗಿದೆ ಎಂದರು. ಈ ವೇಳೆ ಜನರು ತಕ್ಷಣ ಹುಲಿ ಸೆರೆ ಹಿಡಿಯಿರಿ, ನಮ್ಮನ್ನು ಕಾಪಾಡಿ ಎಂದು ಮನವಿ ಮಾಡಿದರು.

ಎಸಿಎಫ್ ಮಹಾದೇವಯ್ಯ ಮಾತನಾಡಿ, ಹುಲಿ ಚಲನವಲನದ ಬಗ್ಗೆ ನಿಗಾ ವಹಿಸಲಾಗುತ್ತಿದೆ. ಈ ಸಂಬಂಧ ಕ್ಯಾಂಪ್‌ಗಳನ್ನು ಮಾಡಿ ಹುಲಿ ಸೆರೆ ಹಿಡಿಯಲು ಕಾರ್ಯಾಚರಣೆ ಕೈಗೊಳ್ಳಲಾಗಿದೆ. ಹಲವು ಸಿಬ್ಬಂದಿ ಪಾಲ್ಗೊಂಡಿದ್ದಾರೆ ಎಂದರು.

ವಲಯ ಅರಣ್ಯಾಧಿಕಾರಿ ನಂದಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ಅಣ್ಣಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ.ಮಹೇಶ್, ಸತೀಶ್, ಪಾಪಣ್ಣ, ಹರವೆ ಶ್ರೀಧರ್, ವಿಜಿ, ವಸಂತ, ಶಿವಣ್ಣ, ಸಿಬ್ಬಂದಿ ಭಾಗವಹಿಸಿದ್ದರು.

ನಿವೃತ್ತ ಪುರಸಭೆ ಮುಖ್ಯಾಧಿಕಾರಿಗೆ ಬೀಳ್ಕೊಡುಗೆ



ತಿ.ನರಸೀಪುರ ಪುರಸಭೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಆ.1– ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಪಟ್ಟಣದ ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಡಲಾಯಿತು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ 2 ವರ್ಷಗಳ ಕಾಲ ಮುಖ್ಯಾಧಿಕಾರಿಯಾಗಿ ಯಶಸ್ವಿ ಸೇವೆ ಸಲ್ಲಿಸಿ ನಿವೃತ್ತರಾದ ಬಿ.ಕೆ.ವಸಂತ ಕುಮಾರಿ ಅವರನ್ನು ಪುರಸಭೆ ಅಧ್ಯಕ್ಷ ಸಿ. ಪ್ರಕಾಶ್, ನಿಕಟಪೂರ್ವ ಅಧ್ಯಕ್ಷ ಎಸ್.ಮದನ್ ರಾಜ್ ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರ ಕೆಂಪಯ್ಯನಹುಂಡಿ ಮಾಧು ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಟ್ಟರು.

ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಮಾತನಾಡಿ, ವಯೋ ನಿವೃತ್ತಿ ಸಹಜ ಪ್ರಕ್ರಿಯೆಯಾದರೂ ಅಧಿಕಾರಿಗಳು ಸೇವೆಯಲ್ಲಿರುವ ವೇಳೆ ಸಲ್ಲಿಸಿದ ಉತ್ತಮ ಸೇವೆಯಿಂದ ಮನಸ್ಸನ್ನು ಗೆಲ್ಲುತ್ತಾರೆ. ಹಾಗೆಯೇ ಮುಖ್ಯಾಧಿಕಾರಿಯವರು ತಮ್ಮ ಸೇವಾವಧಿಯಲ್ಲಿ ಕಳಂಕರಹಿತವಾದ ಸೇವೆ ಸಲ್ಲಿಸಿದ್ದಾರೆ. ಯಾವುದೇ ಒತ್ತಡಕ್ಕೆ ಮಣಿಯದೇ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿ ತಮ್ಮ ಹುದ್ದೆಗೆ ಗೌರವ ತಂದು ಕೊಡುವ ಕೆಲಸ ಮಾಡಿದ್ದಾರೆ. ಕೆಲವೊಮ್ಮೆ ಯಾರೋ ಮಾಡಿದ ತಪ್ಪಿಗೆ ಮುಖ್ಯಾಧಿಕಾರಿಯವರು ಹೊಣೆಯಾಗುವ ಪರಿಸ್ಥಿತಿ ಒದಗಿ ಬಂದಿದೆ.

ಆದರೂ ಎದೆಗುಂದದೆ ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸಿ ನಿವೃತ್ತರಾಗಿದ್ದಾರೆ. ಅವರ ನಿವೃತ್ತ ಜೀವನ ಸುಖಕರವಾಗಿರಲಿ ಎಂದು ಆಶಿಸಿದರು.

ನಿಕಟಪೂರ್ವ ಅಧ್ಯಕ್ಷ ಎಸ್.ಮದನ್ ರಾಜ್ ಮಾತನಾಡಿ, ಯಾರು ಏನೇ ಹೇಳಿದರೂ ಮುಖ್ಯಾಧಿಕಾರಿಗಳು ತಮ್ಮ ಸೇವಾವಧಿಯಲ್ಲಿ ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಪುರಸಭೆಯಲ್ಲಿ ಮಧ್ಯವರ್ತಿಗಳಿಗೆ ಅವಕಾಶ ನೀಡದೇ ಸಾರ್ವಜನಿಕರ ಕೆಲಸಗಳು ಸುಲಲಿತವಾಗಿ ಆಗುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಜರುಗಿಸಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕೆಲವೊಮ್ಮೆ ಬೇಡದ ವಿವಾದಗಳು ಅವರನ್ನು ವಿಚಲಿತ ಮಾಡಿವೆಯಾದರೂ ಪ್ರಾಮಾಣಿಕ ಸೇವೆ ಮುಂದೆ ಅವೆಲ್ಲಾ ಗೌಣವಾಗಿವೆ. ಮತ್ತಷ್ಟು ಕಾಲ ಅವರ ಸೇವೆ ಬೇಕು ಎಂದಾದರೂ ಸರ್ಕಾರಿ ನೌಕರರಿಗೆ ನಿವೃತ್ತಿ ಸಹಜವಾದ ಪ್ರಕ್ರಿಯೆಯಾಗಿದೆ. ಹಾಗಾಗಿ ನಿವೃತ್ತರಾದ ಅವರು ಉತ್ತಮ ಆರೋಗ್ಯದೊಂದಿಗೆ ತಮ್ಮ ನಿವೃತ್ತ ಜೀವನ ಅನುಭವಿಸಲಿ ಎಂದು ಹಾರೈಸಿದರು. ಈ ವೇಳೆ ಪ್ರಥಮ ದರ್ಜೆ ಗುತ್ತಿಗೆದಾರ ಕೆಂಪಯ್ಯನಹುಂಡಿ ಮಾಧು ಹಾಜರಿದ್ದರು.

ತಿ.ನರಸೀಪುರ ಪುರಸಭೆಗೆ ಬಸವರಾಜು ಮುಖ್ಯಾಧಿಕಾರಿ



ತಿ.ನರಸೀಪುರ: ಪಟ್ಟಣದ ಪುರಸಭೆ ಮುಖ್ಯಾಧಿಕಾರಿಯಾಗಿ ಪಿ.ಬಸವರಾಜು ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ.

ಈ ಹಿಂದಿನ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ ಅವರು ಜು.31ರಂದು ನಿವೃತ್ತರಾದ ಹಿನ್ನಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಬನ್ನೂರು ಪುರಸಭೆಯಲ್ಲಿ ಕಂದಾಯ ಅಧಿಕಾರಿಯಾಗಿದ್ದ ಬಸವರಾಜು ಅವರಿಗೆ ಬಡ್ತಿ ನೀಡಿ ಮುಖ್ಯಾಧಿಕಾರಿಯಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಅಡಕನಹುಂಡಿಯಲ್ಲಿ ಗ್ರಾಪಂ ಸದಸ್ಯ ಆತ್ಮಹತ್ಯೆ

ನಂಜನಗೂಡು, ಆ.1– ಜನಾಂಗದ ಕೂಟ ಹಾಗೂ ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಕಿರುಕುಳ ನೀಡಿದ್ದರಿಂದಾಗಿ ಮನನೊಂದು ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಅಡಕನಹಳ್ಳಿಹುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮ ಪಂಚಾಯಿತಿ ಸದಸ್ಯ ಮಾದಪ್ಪ (64) ಆತ್ಮಹತ್ಯೆ ಮಾಡಿಕೊಂಡವರು. ಗ್ರಾಮದ ಕುರುಬ ಜನಾಂಗದ ಕೂಟಕ್ಕೆ ಮಾದಪ್ಪ ಮುಖ್ಯಸ್ಥರಾಗಿದ್ದು, ಮಾದಪ್ಪ ಅವರ ಸುಪರ್ದಿಯಲ್ಲಿ ಗ್ರಾಮದ ಕೂಟಕ್ಕೆ ಸೇರಿದ ಪಾತ್ರೆ ಮತ್ತು ಇನ್ನಿತರ ವಸ್ತುಗಳು ಇದ್ದವು ಎನ್ನಲಾಗಿದ್ದು, ಮಾದಪ್ಪ ಅವರ ತಮ್ಮ ಮರಾಳು ಅಲಿಯಾಸ್ ಮರಿಗೌಡರಿಗೆ ಸೇರಿದ ಜಮೀನು ಕೂಡ ಕೂಟದ ಹಣದಿಂದ ಖರೀದಿಸಿದ್ದಾಗಿದ್ದು, ಅದು ಜನಾಂಗದ ಕೂಟಕ್ಕೆ ಸೇರಿದ್ದಾಗಿದೆ. ಆದ್ದರಿಂದ ನಿಮ್ಮ ಸುಪರ್ದಿಯಲ್ಲಿರುವ ಪಾತ್ರೆ ಮತ್ತು ಇನ್ನಿತರ ವಸ್ತುಗಳು, ತಮ್ಮ ಜಮೀನನ್ನು ಜನಾಂಗದ ಕೂಟಕ್ಕೆ ವಾಪಸ್ ನೀಡಬೇಕು ಎಂದು ಗ್ರಾಮದ ಕರಿಗೌಡ, ಕುಮಾರ, ಕೆಂಪನಂಜೇಗೌಡ, ಕುಂದಪ್ಪನ ಮಹದೇವ, ಮಹದೇವ ಅಲಿಯಾಸ್ ಮಲ್ಲೇಶ, ಕೆಂಚೇಗೌಡ ಎಂಬವರು ಜೀವ ಬೆದರಿಕೆ ಹಾಕಿ ಕಿರುಕುಳ ನೀಡಿದ್ದರಿಂದಾಗಿ ನಮ್ಮ ಯಜಮಾನರು ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಮೃತನ ಪತ್ನಿ ಸುಶೀಲಮ್ಮ ನಂಜನಗೂಡು ಗ್ರಾಮಾಂತರ ಪೊಲೀಸರಿಗೆ ದೂರು ನೀಡಿದ್ದಾರೆ.

ದೂರು ದಾಖಲಿಸಿಕೊಂಡಿರುವ ನಂಜನಗೂಡು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ಸ್ಥಳ ಪರಿಶೀಲಿಸಿ ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ವಾರಸುದಾರರಿಗೆ ಹಸ್ತಾಂತರಿಸಿ ತನಿಖೆ ಮುಂದುವರಿಸಿದ್ದಾರೆ

ಚನ್ನನಾಯಕ ನಿಧನ



ಸರಗೂರು, ಆ.1– ಪಪಂ ಸದಸ್ಯ ಶ್ರೀನಿವಾಸ್ ಅವರ ಚಿಕ್ಕಪ್ಪ ಚನ್ನನಾಯಕ (80) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ, ಅಂತ್ಯಕ್ರಿಯೆ ಪಟ್ಟಣದ ನಾಯಕ ಸಮಾಜದ ರುದ್ರಭೂಮಿಯಲ್ಲಿ ಶುಕ್ರವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಣ್ಣೂರಲ್ಲಿ ಉಪ ಠಾಣೆ ತೆರೆಯಲು ಮನವಿ



ಉಪಪೊಲೀಸ್ ಠಾಣೆ ತೆರೆಯುವಂತೆ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.

ಹೆಚ್.ಡಿ.ಕೋಟೆ, ಆ.1– ತಾಲೂಕಿನ ಅಣ್ಣೂರು ಗ್ರಾಮದಲ್ಲಿ ಉಪ ಪೊಲೀಸ್ ಠಾಣೆ ತೆರೆಯುವಂತೆ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರಿಗೆ ಮನವಿ ಸಲ್ಲಿಸಿದರು.

ಬೆಂಗಳೂರಿನಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಮಾತನಾಡಿದ ಅವರು, ಕೋಟೆ ತಾಲೂಕಿನ ಅಣ್ಣೂರು ಗ್ರಾಮ ಗ್ರಾಪಂ ವ್ಯಾಪ್ತಿಗೆ ಒಳಪಟ್ಟಿದ್ದು, ಜಿಪಂ ಕೇಂದ್ರ ಸ್ಥಾನವಾಗಿದೆ. ಅಲ್ಲದೇ ಗ್ರಾಮದಲ್ಲಿ 5 ಸಾವಿರ ಮಂದಿ ವಾಸಿಸುತ್ತಿದ್ದಾರೆ. ಅಕ್ಕಪಕ್ಕ 25 ರಿಂದ 30 ಗ್ರಾಮಗಳು ಒಳಗೊಂಡಿದ್ದು, ಗ್ರಾಮದಲ್ಲಿ ಸರ್ಕಾರಿ ಪ್ರೌಢ ಶಾಲೆ, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಕಾವೇರಿ ಗ್ರಾಮೀಣ ಬ್ಯಾಂಕ್ ಇದೆ. ಈ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿದ್ದು, ಭಾರೀ ವಾಹನ ಸಂಚರಿಸುತ್ತವೆ. ಅಲ್ಲದೇ ಹೆಚ್ಚಿನ ಭಾಗ ಅರಣ್ಯ ಪ್ರದೇಶದಿಂದ ಕೂಡಿದ್ದು, ಹೆಚ್ಚಾಗಿ ಗಿರಿಜನರು ವಾಸಿಸುತ್ತಾರೆ. ಆದ್ದರಿಂದ ಇಲ್ಲಿನ ಜನರಿಗೆ ಅನುಕೂಲವಾಗುವಂತೆ ಅಣ್ಣೂರು ಗ್ರಾಮದಲ್ಲಿ ಉಪ ಠಾಣೆ ತೆರೆಯುವಂತೆ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮನವಿ ಸಲ್ಲಿಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಬಿ.ವಿ.ಬಸವರಾಜು, ಹಾಪ್ ಕಾವ್ಸ್ ಮಾಜಿ ಜಿಲ್ಲಾಧ್ಯಕ್ಷ ಬಿ.ಪಿ.ಬೋರೇಗೌಡ, ಚಂದ್ರಶೇಖರ್ ಇನ್ನಿತರರಿದ್ದರು.



ನಿವೃತ್ತ ಶಿಕ್ಷಕನಿಗೆ ಸನ್ಮಾನ

ಪಿರಿಯಾಪಟ್ಟಣ ತಾಲೂಕಿನ ದೊಡ್ಡೇಗೌಡನಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದ ಶಿಕ್ಷಕ ಕಾಳಮರಿಗೌಡ ಅವರನ್ನು ಶಿಕ್ಷಕರು, ಗ್ರಾಮಸ್ಥರು ಸನ್ಮಾನಿಸಿ ಬೀಳ್ಕೊಟ್ಟರು. ಈ ವೇಳೆ ಸಿಆರ್‌ಪಿ ಚಂದ್ರಶೇಖರ್, ಶಿಕ್ಷಕರಾದ ಬಿ.ಸಿ.ಮಹಾದೇವಪ್ಪ, ಕೃಷ್ಣ ನಾಯಕ್, ಕೃಷ್ಣೇಗೌಡ ಸೇರಿದಂತೆ ಇತರ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

ಐದನೇ ಪುಟದಿಂದ

ಪ್ರಜ್ವಲ್ ರೇವಣ್ಣ ದೋಷಿ

ಪ್ರಜ್ವಲ್ ಪರ ವಕೀಲ ವಿಪುಲ್ ಜೈನ್ ವಾದ ಮಂಡಿಸಿ, ಬೇರೊಂದು ಮೊಕದ್ದಮೆಗೆ ಸಂಬಂಧಿಸಿದಂತೆ ಮೊಬೈಲ್ ಫೋನ್ ವಶಕ್ಕೆ ಪಡೆದಿದ್ದು, ಸದರಿ ಕೇಸ್‌ನಲ್ಲಿ ಅಲ್ಲ, ಎಫ್‌ಎಸ್‌ಎಲ್ ವರದಿಯಲ್ಲಿ ಫೋನ್ ಸ್ವೀಕರಿಸಿದ ಬಗ್ಗೆ ದಾಖಲೆಯಿಲ್ಲ. ತನಿಖಾಧಿಕಾರಿ ಬಳಿ ಈ ಮೊಬೈಲ್ ಫೋನ್ ಇರಲೇ ಇಲ್ಲ, ಆದ್ದ ರಿಂದ ಈ ಸಾಕ್ಷ್ಯಕ್ಕೆ ಬೆಲೆಯಿಲ್ಲ ಎಂದಿದ್ದರು. ಪ್ರಜ್ವಲ್ ರೇವಣ್ಣ ಮೇಲೆ ಸರಣಿ ಅತ್ಯಾಚಾರ ಆರೋಪವಿದ್ದು, ಇದರಲ್ಲಿ ಮೈಸೂರು ಜಿಲ್ಲೆ ಕೆ.ಆರ್. ನಗರದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪವೂ ಒಂದಾಗಿದೆ.

ಪ್ರಜ್ವಲ್ ಮೊದಲ ಬಾರಿಗೆ ತಮ್ಮ ಮನೆ ಕೆಲಸದವಳೂ ಆದ ಸಂತ್ರಸ್ತೆ ಮೇಲೆ ಹಾಸನ ಜಿಲ್ಲೆ ಹೊಳೆನರಸೀಪುರದ ಗನ್ನಿಗಢ ಫಾರಂ ಹೌಸ್ ಮತ್ತು ನಂತರ ಬೆಂಗಳೂರಿನ ಬಸವನಗುಡಿಯಲ್ಲಿನ ರೇವಣ್ಣ ನಿವಾಸದಲ್ಲಿ ಅತ್ಯಾಚಾರ ಎಸಗಿ, ಕೃತ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು ಎಂದು ಆರೋಪಿಸಲಾಗಿತ್ತು.

ಅತ್ಯಾಚಾರ ಪ್ರಕರಣ ಬೆಳಕಿಗೆ ಬರಬಾರದೆಂದು ಮಹಿಳೆಯನ್ನು ಅಪಹರಿಸಿ ಹುಣಸೂರು ಬಳಿಯ ತೋಟದ ಮನೆಯಲ್ಲಿ ಕೂಡಿಹಾಕಲಾಗಿತ್ತು ಎಂಬ ಆರೋಪದಡಿ ದೂರು ದಾಖಲಾಗಿತ್ತು. ಈ ಅಪಹರಣ ಪ್ರಕರಣದಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಮತ್ತು ಅವರ ಪತ್ನಿ ಭವಾನಿ ರೇವಣ್ಣ ಸೇರಿದಂತೆ ಒಟ್ಟು 9 ಆರೋಪಿಗಳಿದ್ದು, ರೇವಣ್ಣ ಹಾಗೂ ಭವಾನಿ ರೇವಣ್ಣಗೆ ಜಾಮೀನು ದೊರೆತಿದೆ.

ಹಾಸನ ಜಿಲ್ಲೆಯ ಹೊಳೆನರಸೀಪುರದ ಗನ್ನಿಗಢ ಫಾರಂ ಹೌಸ್ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣಗೆ ಸೇರಿದೆ. ಪ್ರಕರಣದ ತನಿಖೆ ನಡೆಸಿದ ಎಸ್‌ಐಟಿ ಅಧಿಕಾರಿಗಳು 123 ಸಾಕ್ಷ್ಯಗಳನ್ನು ಸಂಗ್ರಹಿಸಿ, ಸುಮಾರು 2 ಸಾವಿರ ಪುಟಗಳ ಆರೋಪ ಪಟ್ಟಿಯನ್ನು ಕಳೆದ ವರ್ಷಾಂತ್ಯದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಆರೋಪಿ ಪ್ರಜ್ವಲ್ ರೇವಣ್ಣ 2024ರ ಮೇನಲ್ಲಿ ವಿದೇಶದಿಂದ ಮರಳುತ್ತಿದ್ದಂತೆ ಎಸ್‌ಐಟಿ ಅಧಿಕಾರಿಗಳು ಬಂಧಿಸಿದ್ದರು. ಅಂದಿನಿಂದ ಇಂದಿನವರೆಗೂ ಪ್ರಜ್ವಲ್ ನ್ಯಾಯಾಂಗ ಬಂಧನದಲ್ಲಿದ್ದಾರೆ. ಪ್ರಾಸಿಕ್ಯೂಷನ್ ಪರ ಬಿ.ಎನ್.ಜಗದೀಶ್, ಅಶೋಕ್ ನಾಯಕ್ ಮತ್ತು ಪ್ರಜ್ವಲ್ ಪರ ಅರುಣ್ ಹಾಗೂ ವಿಪುಲ್ ಜೈನ್ ಹಾಜರಿದ್ದರು.

ರಾಣಿ ಮುಖರ್ಜಿ ಅತ್ಯುತ್ತಮ ನಟಿ

ಚಿತ್ರಕ್ಕಾಗಿ ವಿಕ್ರಾಂತ್ ಮೆಸ್ಸಿ ಈ ಬಾರಿ ಅತ್ಯುತ್ತಮ ನಟ ಪ್ರಶಸ್ತಿ ಹಂಚಿಕೊಂಡಿದ್ದಾರೆ. ವಿಕ್ರಾಂತ್ ಮೆಸ್ಸಿ ಅಭಿನಯದ ವಿಧು ವಿನೋದ್ ಚೋಪ್ರಾ ನಿರ್ದೇಶನದ '12th fail' ಚಿತ್ರ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿದೆ. 'ಮಿಸೆಸ್ ಚಟರ್ಜಿ Vs ನಾರ್ವೆ' ಚಿತ್ರದ ಅಭಿನಯಕ್ಕಾಗಿ ರಾಣಿ ಮುಖರ್ಜಿ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿದ್ದಾರೆ. 'ಪೂಕ್ಕಳಂ' ಚಿತ್ರದ ಅಭಿನಯಕ್ಕಾಗಿ ನಟ ವಿಜಯರಾಘವನ್ ಅತ್ಯುತ್ತಮ ಪೋಷಕ ನಟ, ನಟಿ ಊರ್ವಶಿಗೆ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಪಡೆದಿದ್ದಾರೆ.

71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿಜೇತರು: **ಅತ್ಯುತ್ತಮ ನಟ** – ಜವಾನ್ ಚಿತ್ರಕ್ಕಾಗಿ ಶಾರುಖ್ ಖಾನ್ ಮತ್ತು 12th fail ಚಿತ್ರಕ್ಕಾಗಿ ವಿಕ್ರಾಂತ್ ಮೆಸ್ಸಿ, **ಅತ್ಯುತ್ತಮ ನಟಿ** – ಶ್ರೀಮತಿ ಚಟರ್ಜಿ Vs ನಾರ್ವರಿ ಚಿತ್ರಕ್ಕಾಗಿ ರಾಣಿ ಮುಖರ್ಜಿ, **ಅತ್ಯುತ್ತಮ ಚಲನಚಿತ್ರ** – 12th fail, ಅತ್ಯುತ್ತಮ ನಿರ್ದೇಶಕ – ದಿ ಕೇರಳ ಸ್ಟೋರಿ ಚಿತ್ರಕ್ಕಾಗಿ ಸುದೀಪ್ತೋ ಸೇನ್, ಅತ್ಯುತ್ತಮ ಚಿತ್ರಕಥೆ – ಪಾರ್ಕಿಂಗ್ (ತಮಿಳು) ಮತ್ತು ಬೇಬಿ (ತೆಲುಗು), ಅತ್ಯುತ್ತಮ ಧ್ವನಿ ವಿನ್ಯಾಸ – ಅನಿಮಲ್ ಚಿತ್ರಕ್ಕಾಗಿ ಸಚಿನ್ ಸುಧಾಕರನ್ ಮತ್ತು ಹರಿಹರನ್ ಮುರಳೀಧರನ್, ಅತ್ಯುತ್ತಮ ಸಂಕಲನ – ಮಿಥುನ್ ಮುರಳಿ ಅವರ ಪೂಕಲಂ (ಮಲಯಾಳಂ), ಅತ್ಯುತ್ತಮ ನಿರ್ಮಾಣ ವಿನ್ಯಾಸ – 2018: ಮೋಹನ್ ದಾಸ್ ಅವರ ಎವರಿಒನ್ ಇಸ್ ಎ ಹೀರೋ.

ಉತ್ತಮ ವೇಷಭೂಷಣ ವಿನ್ಯಾಸ – ಸಚಿನ್ ಲಾವಲೇಕರ್ ಅವರ ಸ್ಯಾಮ್ ಬಹದ್ದೂರ್, ದಿವ್ಯಾ ಗಂಭೀರ್ ಮತ್ತು ನಿಧಿ ಗಂಭೀರ್, ಅತ್ಯುತ್ತಮ ಮೇಕಪ್ – ಶ್ರೀಕಾಂತ್ ದೇಸಾಯಿ ಅವರ ಸ್ಯಾಮ್ ಬಹದ್ದೂರ್, ಹಿನ್ನೆಲೆ ಸಂಗೀತಕ್ಕಾಗಿ ಅತ್ಯುತ್ತಮ ಸಂಗೀತ ನಿರ್ದೇಶನ – ಪ್ರಾಣಿ, ಉತ್ತಮ ಸಂಗೀತ ನಿರ್ದೇಶನ – ಜಿವಿ ಪ್ರಕಾಶ್ ಕುಮಾರ್ ಅವರ ವಾಥಿ (ತಮಿಳು), ಉತ್ತಮ ಸಾಹಿತ್ಯ – ಬಾಲಗಂ (ತೆಲುಗು), ಉತ್ತಮ ನೃತ್ಯ ಸಂಯೋಜನೆ – 'ಧೋಡೋರ' ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿಯಲ್ಲಿ ಬಜೆ ರೇ'

ದೂರ ಉಳಿದ ಸಚಿವ ರಾಜಣ್ಣ!

ಸಚಿವ ರಾಜಣ್ಣ ಮಾಡಬೇಕಿತ್ತು. ಆದರೆ, ಶಿವಕುಮಾರ್ ಮತ್ತವರ ಬೆಂಬಲಿಗರೇ ಬ್ಯಾಂಕ್‌ನ ಆಡಳಿತ ಮಂಡಳಿ ಸದಸ್ಯರಾಗಿರುವುದರಿಂದ ರಾಜಣ್ಣ ದೂರ ಉಳಿದರು.

ದೆಹಲಿಗೆ ತೆರಳುವ ತರಾತುರಿಯಲ್ಲಿದ್ದರೂ ಉಪಮುಖ್ಯಮಂತ್ರಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ತೆರಳಿದರು. ಇತ್ತೀಚೆಗೆ ನಡೆದಿರುವ ಕೆಲವು ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿವಕುಮಾರ್ ಅವರೊಂದಿಗಿನ ಮುಖಾಮುಖಿಯನ್ನು ರಾಜಣ್ಣ ಉದ್ದೇಶ ಪೂರ್ವಕವಾಗಿಯೇ ತಪ್ಪಿಸುತ್ತಿದ್ದಾರೆ.

ಛಾಟಿ; ದೂರುದಾರರಿಗೆ ಕಾನೂನು ಪಾಠ

ಎಂದು ಪದೇ ಪದೆ 3–4 ಬಾರಿ ಹೇಳಿದರು. ಇದರಿಂದ ಕೋಪಗೊಂಡ ಉಪಲೋಕಾಯುಕ್ತರು, ಒಂದೇ ವಿಷಯವನ್ನು ಪದೇ ಪದೆ ಹೇಳುತ್ತೀಯಾ. ನನಗೆ ಕಿವುಡಾ, ನಾನೇನು ದಡ್ಡನಾ? ನಿನಗೆ ಕಾಮನ್‌ಸೆನ್ಸ್ ಇಲ್ಲವೇ? ಎಂದು ಸಿಡಿಮಿಡಿ ಗೊಂಡರು. ಬಳಿಕ ಖಾತೆ ಬದಲಾವಣೆ ಕುರಿತು ತಿ.ನರಸೀಪುರ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸ್ಥಳ ಪರಿಶೀಲನೆ ಮಾಡಿ, ಈ ಪ್ರಕರಣವನ್ನು ಕಾನೂನು ಪ್ರಕಾರ ಇತ್ಯರ್ಥಪಡಿಸಬೇಕು. ಈ ಹಂತದಲ್ಲಿ ದೂರುದಾರರಿಗೆ ನ್ಯಾಯ ದೊರೆಯದಿದ್ದರೆ ಮತ್ತೊಮ್ಮೆ ಲೋಕಾಯುಕ್ತರಿಗೆ ದೂರು ಸಲ್ಲಿಸಲು ಅವಕಾಶ ಕಲ್ಪಿಸಿದರು.

ಹೀಗೆ ಮಾಡಿ ಎನ್ನಲು ದೂರುದಾರರಿಗೆ ಅಧಿಕಾರ ಇಲ್ಲ: ಬನ್ನೂರಿನ ಸರ್ವಮಂಗಳಾ ಎಂಬುವರು ಬನ್ನೂರಿನ ಸರ್ವೆ ನಂ.350ರಲ್ಲಿರುವ ನಮ್ಮ ಜಮೀನ ಜಾಗಕ್ಕೆ ಪೋಡಿ ಮಾಡಿ ಕೊಡುತ್ತಿಲ್ಲ ಎಂದು ನೀಡಿದ್ದ ದೂರಿನ ಕುರಿತು ವಿಚಾರಣೆ ನಡೆಸಿ ಉಪಲೋಕಾಯುಕ್ತರು, ಒಂದು ತಿಂಗಳ ಒಳಗೆ ಸರ್ವೆ ಮಾಡಿ ವರದಿ ನೀಡಬೇಕು. ಯಾವುದೇ ಪೋಡನ್ನು ಹೀಗೆ ಮಾಡಿ, ಹಾಗೆ ಮಾಡಬೇಡಿ ಎಂದು ಹೇಳಲು ಅರ್ಜಿದಾರಿಗೆ ಅಧಿಕಾರ ಇಲ್ಲ. ನಿಯಮಾವಳಿ ಪ್ರಕಾರ ಪೋಡು ಪೂರ್ಣಗೊಳಿಸಬೇಕು. ನಿರ್ದೇಶನ ನೀಡುವ ಅಧಿಕಾರ ಅರ್ಜಿದಾರರಿಗೆ ಇಲ್ಲ. ಹೀಗಾಗಿ, ಯಾರು ಬರುತ್ತಾರೋ ಬಿಡುತ್ತಾರೋ ಪೋಡು ಮಾಡಿ. ಸಮಸ್ಯೆ ಇದ್ದರೆ ಪೊಲೀಸ್ ರಕ್ಷಣೆ ತೆಗೆದುಕೊಳ್ಳಿ ಎಂದು ಎಲ್ಲ ಭೂಮಾಪಕರಿಗೆ ತಿಳಿಸಿದರು.

ಇದೇ ವೇಳೆ ಪೊಲೀಸ್ ಇನ್‌ಸ್ಪೆಕ್ಟರ್, ಉಪನೋಂದಣಾಧಿಕಾರಿ, ಇಬ್ಬರು ಖಾಸಗಿ ವ್ಯಕ್ತಿಗಳ ವಿರುದ್ಧ ನೀಡಿದ್ದ ದೂರಿನ ವಿಚಾರಣೆ ಮಾಡಿದ ಉಪಲೋಕಾಯುಕ್ತರು, ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಪ್ರಕರಣ ಮುಕ್ತಾಯಗೊಳಿಸಿದರು.

ಕಾನೂನು ತಿಳಿದುಕೊಳ್ಳಿ: ದೂರುದಾರರಿಗೆ ಕಾನೂನು ಗೊತ್ತಿಲ್ಲ. ಅದನ್ನು ತಿಳಿದುಕೊಳ್ಳಲೂ ಪ್ರಯತ್ನಿಸುವುದಿಲ್ಲ. ಯಾವ ಅರ್ಜಿಯನ್ನು ಎಲ್ಲಿ ಕೊಡಬೇಕು ಎಂಬ ಜ್ಞಾನವೂ ಇಲ್ಲ. ಬಹುಪಾಲು ಜನರು ಇದೇ ತಪ್ಪನ್ನೇ ಪುನರಾವರ್ತನೆ ಮಾಡುತ್ತಾರೆ. ಹೀಗಾಗಿ, ಮೊದಲು ಕಾನೂನು ತಿಳಿದುಕೊಳ್ಳಬೇಕು ಎಂದು ದೂರುದಾರ ಎಂ.ಲಿಂಗರಾಜು ಅವರಿಗೆ ಉಪ ಲೋಕಾಯುಕ್ತರು ತಾಕೀತು ಮಾಡಿದರು. ಸಾರ್ವಜನಿಕರಿಗೆ ಯಾರಿಗೆ ದೂರು ಕೊಡಬೇಕು ಎಂಬುದು ಗೊತ್ತಾಗಲ್ಲ. ಸಂಬಂಧವಿಲ್ಲದ ಕೇಸ್‌ಗಳನ್ನೆಲ್ಲವನ್ನೂ ಲೋಕಾಯುಕ್ತರಿಗೆ ಕೊಟ್ಟು ಕೈ ತೊಳೆದುಕೊಳ್ಳುತ್ತಾರೆ. ಇದು ರಾಜ್ಯಾದ್ಯಂತ ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಶನಿವಾರವೂ ವಿಚಾರಣೆ ಮುಂದುವರಿಕೆ: ತಿ.ನರಸೀಪುರ, ನಂಜನಗೂಡು, ಪಿರಿಯಾಪಟ್ಟಣ ತಾಲೂಕಿಗೆ ಸಂಬಂಧಿಸಿದ 73 ದೂರುಗಳ ವಿಚಾರಣೆ ಮಾಡಲಾಯಿತು. ಗುರುವಾರ ಹುಣಸೂರು, ಸರಗೂರು ಮತ್ತು ಕೆ.ಆರ್.ನಗರ ತಾಲೂಕಿನ ದೂರಿನ ವಿಚಾರಣೆ ಪೂರ್ಣಗೊಂಡಿದ್ದು, ಶನಿವಾರ ಮೈಸೂರು, ಹೆಚ್.ಡಿ.ಕೋಟೆ ತಾಲೂಕಿನ ದೂರುಗಳ ವಿಚಾರಣೆ ನಡೆಯಲಿದೆ.

ಈ ಸಂದರ್ಭದಲ್ಲಿ ಲೋಕಾಯುಕ್ತ ಜಂಟಿ ನಿಬಂಧಕರು (ವಿಚಾರಣೆ) ವಿ.ಎನ್.ವಿಮಲಾ, ಲೋಕಾಯುಕ್ತ ಕಾರ್ಯದರ್ಶಿ ಕಿರಣ್ ಪಾಟೀಲ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಪಂ ಸಿಇಒ ಯುಕೇಶ್‌ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ, ಪಾಲಿಕೆ ಆಯುಕ್ತ ತನ್ವೀರ್ ಆಸೀಫ್, ಮೈಸೂರು ಲೋಕಾಯುಕ್ತ ಎಸ್‌ಪಿ ಟಿ.ಜೆ.ಉದೇಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಶಿ ಸೇರಿದ 14 ಟನ್ ಎಲೆಕೋಸು!

ಮಾರಾಟ ಮಾಡಿಕೊಡೋಣ ಅಂದರು. ಆದರೆ, ಬೆಳಗ್ಗೆ ಮಾರಾಟವೇ ಆಗಲಿಲ್ಲ. ಮತ್ತೆ ಕೇಳಿದಾಗ ಸಂಜೆ ಅಂದ್ರು. ಸಂಜೆಯೂ ಮಾರಾಟವೇ ಆಗಲಿಲ್ಲ. ಆಮೇಲೆ ಮತ್ತೆ ಬೆಳಗ್ಗೆಗೆ(ಶುಕ್ರವಾರ) ಗ್ಯಾರಂಟಿ ಮಾರಾಟ ಮಾಡಿಸುತ್ತೇನೆ ಎಂದವರು ಬೆಳಗಾದ ಮೇಲೆ ನಿಮ್ಮ ಎಲೆಕೋಸು ಬೇಡ ಅಂದರು. ಅಲ್ಲಿಯವರೆಗೆ ಲಾರಿ ತುಂಬಾ ತುಂಬಿದ್ದ ಎಲೆಕೋಸಿಗೆ ಮುಚ್ಚಿದ್ದ ಟಾರ್ಪಲನ್ನೇ ಬಿಚ್ಚಿರಲಿಲ್ಲ. ಕೊನೆಗೆ ಬೇರೆ ದಾರಿಯಿಲ್ಲದೆ ರಸ್ತೆ ಬದಿ ಸುರಿಯಬೇಕಾಯಿತು ಎಂದು ವಿವರಿಸಿದರು.

ಎರಡ್ಮೂರು ದಿನ ಟಾರ್ಪಲ್ ಹೊದಿಸಿದ್ದರಿಂದ ಎಲೆಕೋಸು ತಾಜಾತನ ಇರುವುದಿಲ್ಲ. ಕಾವು ಹೆಚ್ಚಾಗಿ ಹಾಳಾಗುತ್ತೆ. ಟಾರ್ಪಲ್ ಬಿಚ್ಚಿಸಿ, ಸುರಿಸುತ್ತೇನೆ (ಮಾರಾಟಕ್ಕೆ ಅನುಕೂಲವಾಗುವಂತೆ) ಅಂದರು ಬೇಡ ಎಂದವರು ಕೊನೆಗೆ ಈಗ ಕೈಕೊಟ್ಟರು ಎಂದು ತಮ್ಮ ಅಸಹಾಯಕ ಸ್ಥಿತಿಯನ್ನು ಬಿಚ್ಚಿಟ್ಟರು.

ಮೂರು ತಿಂಗಳ ಪರಿಶ್ರಮ: ಎಲೆಕೋಸು ಒಂದು ಟನ್‌ಗೆ 9 ಸಾವಿರ ರೂ. ಇದೆ. ಒಟ್ಟು 14 ಟನ್ ಇತ್ತು. ಲಾರಿ ಬಾಡಿಗೆ 20 ಸಾವಿರ ರೂ., ಲೋಡ್ ಮಾಡಿದವರಿಗೆ 10 ಸಾವಿರ ರೂ. ಎಲ್ಲಾ ಸೇರಿ 1.50 ಲಕ್ಷ ರೂ.ನಷ್ಟವಾಯಿತು. ಇಷ್ಟು ಬೆಳೆ ಬೆಳೆಯಲು ಮೂರು ತಿಂಗಳು ಮನೆಮಂದಿಯೆಲ್ಲಾ ಕಷ್ಟಪಟ್ಟಿದ್ದೆವು. ಆದರೆ, ಬೇರೆ ದಾರಿ ಇಲ್ಲದೆ ಸುರಿಯಬೇಕಾಯ್ತು ಎಂದು ದುಃಖದಿಂದ ನುಡಿದರು.

ಕನ್ನಡಕ್ಕೆ ರಾಷ್ಟ್ರಪ್ರಶಸ್ತಿ ತಂದ 'ಕಂದೀಲು'

ವೇರ್ ದಿ ಫಸ್ಟ್ ಒನ್ಸ್ ಟು ನೋ' ಪ್ರತಿಷ್ಠಿತ ಕೇನ್ಸ್ ಫಿಲ್ಮ್ ಫೆಸ್ಟಿವಲ್‌ನಲ್ಲಿ 'ಲಾ ಸಿನೆಫ್ ಪ್ರಶಸ್ತಿ' ಜಯಿಸಿತ್ತು. ಈಗ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಲ್ಲಿ ನಾನ್ ಫೀಚರ್ ಫಿಲ್ಮ್ ವಿಭಾಗದ ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿ ಜಯಿಸಿದೆ.

ಯಶೋಧಾ ಪ್ರಕಾಶ್: ಮಡಿಕೇರಿಯ ಮೊಟ್ಟಮೊದಲ ನಿರ್ದೇಶಕಿಯಾಗಿರುವ ಯಶೋಧಾ ಪ್ರಕಾಶ್ ನಿರ್ದೇಶನದ ಕಂದೀಲು ಸಿನಿಮಾ ಈಗಾಗಲೇ ಹಲವು ಸಿನಿಮೋತ್ಸವಗಳಲ್ಲಿ ಪ್ರದರ್ಶನ ಕಂಡಿದೆ. 29ನೇ ಕೋಲ್ಕತ್ತಾ ಫಿಲ್ಮ್ ಫೆಸ್ಟಿವಲ್‌ನಲ್ಲಿ ಈ ಸಿನಿಮಾ ಪ್ರದರ್ಶನವಾಗಿತ್ತು. ಯಶೋದಾ ಪ್ರಕಾಶ್ ಈ ಹಿಂದೆ ಕೊಡವದಲ್ಲಿ ಮೂರು ಮತ್ತು ಕನ್ನಡದಲ್ಲಿ ಐದು ಚಿತ್ರಗಳನ್ನು ಒಳಗೊಂಡಂತೆ ಹಲವಾರು ಚಿತ್ರಗಳನ್ನು ನಿರ್ದೇಶಿಸಿ, ನಿರ್ಮಿಸಿದ್ದಾರೆ. ಉದ್ಯಮದಲ್ಲಿ ಅವರ ಸಕ್ರಿಯ ಪಾಲ್ಗೊಳ್ಳುವಿಕೆ ಹಲವಾರು ಗುಣಮಟ್ಟದ ನಿರ್ಮಾಣಗಳಿಗೆ ಕಾರಣವಾಗಿದೆ.

ಸೀಟು ಹಂಚಿಕೆ ತಾತ್ಕಾಲಿಕ ಫಲಿತಾಂಶ ಪ್ರಕಟ

ಪ್ರವೇಶಕ್ಕೆ ಸದ್ಯಕ್ಕೆ ರಾಜ್ಯದಲ್ಲೂ ಅವಕಾಶ ಇರುವುದಿಲ್ಲ, ಫಲಿತಾಂಶ ಪ್ರಕಟಣೆ ನಂತರ ಈ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಆರಂಭಿಸಲಾಗುತ್ತದೆ.

ಸೀಟು ಹಂಚಿಕೆ ನಂತರ ಅಭ್ಯರ್ಥಿಗಳು ತಮಗೆ ಸಿಕ್ಕಿರುವ ಸೀಟು ಇಷ್ಟ ಇದೆಯೊ/ಇಲ್ಲವೊ ಎಂಬುದನ್ನು ಕಡ್ಡಾಯವಾಗಿ ಛಾಯ್ಸ್ ದಾಖಲಿಸುವುದರ ಮೂಲಕ ತಿಳಿಸಬೇಕು, ಒಂದು ವೇಳೆ ಛಾಯ್ಸ್ ದಾಖಲಿಸದೇ ಇದ್ದಲ್ಲಿ, ಅಂತಹವರನ್ನು ನಂತರದ ಸುತ್ತಿನಲ್ಲಿ ಸೀಟು ಹಂಚಿಕೆಗೆ ಪರಿಗಣಿಸುವುದಿಲ್ಲ ಹಾಗೂ ಅಂತಹವರನ್ನು ಇಡೀ ಪ್ರಕ್ರಿಯೆಯಿಂದಲೇ ಹೊರಗಿಡಲಾಗುತ್ತದೆ.

ಅಭ್ಯರ್ಥಿಗಳು ತಮಗೆ ಸಿಕ್ಕಿರುವ ಕೋರ್ಸ್/ಕಾಲೇಜು ಇಷ್ಟ ಆಗಿದ್ದು, ಪ್ರವೇಶ ಪಡೆಯಲು ಇಚ್ಛಿಸುವವರು ಛಾಯ್ಸ್–1 ದಾಖಲಿಸಬೇಕು, ಸಿಕ್ಕಿರುವ ಕೋರ್ಸ್/ಕಾಲೇಜು ಪರ್ವಾಗಿಲ್ಲ, ಆದರೆ, ಇನ್ನೂ ಉತ್ತಮ ಕಾಲೇಜು ಸಿಕ್ಕಿದರೆ ಅಲ್ಲಿ ಪ್ರವೇಶ ಪಡೆಯುತ್ತೇವೆ ಎನ್ನುವವರು ಛಾಯ್ಸ್–2 ದಾಖಲಿಸಬೇಕು.

ಸಿಕ್ಕಿರುವ ಕಾಲೇಜು/ಕೋರ್ಸ್ ಇಷ್ಟ ಇಲ್ಲ ಎನ್ನುವವರು ಛಾಯ್ಸ್–3 ದಾಖಲಿಸಬೇಕು, ಅಂತಹವರಿಗೆ ಸಿಕ್ಕಿರುವ ಸೀಟು ಹೊರತುಪಡಿಸಿ, ದಾಖಲಿಸಿರುವ ಇತರ ಎಲ್ಲ ಇಚ್ಛೆ/ಆಯ್ಕೆಗಳನ್ನು ಎರಡನೇ ಸುತ್ತಿನಲ್ಲಿ ಪರಿಗಣಿಸಲಾಗುತ್ತದೆ.

ನನಗೆ ಯಾವುದೂ ಬೇಡ, ಕೆಇಎ ಸೀಟು ಹಂಚಿಕೆ ಪ್ರಕ್ರಿಯೆಯಿಂದ ಹೊರಹೋಗುತ್ತೇನೆ ಎನ್ನುವವರು ಛಾಯ್ಸ್–4 ದಾಖಲಿಸಬಹುದು, ಒಟ್ಟಿನಲ್ಲಿ ಯಾವುದೇ ಛಾಯ್ಸ್ ದಾಖಲಿಸುವುದಕ್ಕೂ ಮುನ್ನ ಪೋಷಕರ ಜತೆ ಹತ್ತಾರು ಬಾರಿ ಚರ್ಚೆ ಮಾಡಬೇಕು ಎಂದು ಪ್ರಸನ್ನ ಸಲಹೆ ನೀಡಿದ್ದಾರೆ.

ಮೈಸೂರು ಮಿತ್ರ

ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರು ಕೈ ಜೋಡಿಸಬೇಕು

● ಹಿರಿಯ ಶಾಸಕ ತನ್ವೀರ್ ಸೇಠ್ ಕರೆ ● ಮೈಸೂರಲ್ಲಿ ಅರ್ಥಪೂರ್ಣ ವ್ಯಸನ ಮುಕ್ತ ದಿನಾಚರಣೆ ● ಎಲ್ಲಾ ಅಭ್ಯಾಸ-ಹವ್ಯಾಸಗಳಿಗೆ ಮಿತಿ ಇರಬೇಕು

ಮೈಸೂರು, ಆ.1(ಎಂಕೆ)– ವ್ಯಸನ ಮುಕ್ತ ಸಮಾಜ ನಿರ್ಮಾಣದ ಸಂಕಲ್ಪದೊಂದಿಗೆ ಪ್ರತಿಯೊಬ್ಬರು ಕೈಜೋಡಿಸಬೇಕು. ಸ್ವಾಸ್ಥ್ಯ ಸಮಾಜಕ್ಕೆ ಮಾರಕವಾಗಿರುವ ವಸ್ತು ಹಾಗೂ ವಿಷಯಗಳನ್ನು ತ್ಯಜಿಸುವಂತೆ ಶಾಸಕ ತನ್ವೀರ್ ಸೇಠ್ ಕರೆ ನೀಡಿದರು.

ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಶುಕ್ರವಾರ ಜಿಲ್ಲಾಡಳಿತ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಡಾ.ಮಹಾಂತ ಶಿವಯೋಗಿಗಳ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ 'ವ್ಯಸನ ಮುಕ್ತ ದಿನಾಚರಣೆ' ಉದ್ಘಾಟಿಸಿ ಅವರು ಮಾತನಾಡಿದರು.

ವ್ಯಸನ ಮುಕ್ತ ಸಮಾಜವನ್ನು ನಿರ್ಮಾಣ ಮಾಡಬೇಕಾದರೆ ಮಾದಕ ವಸ್ತುಗಳನ್ನು ತ್ಯಜಿಸಬೇಕು, ಮೊಬೈಲ್ ಬಳಕೆ, ಸಾಮಾಜಿಕ ಜಾಲತಾಣ ಸೇರಿದಂತೆ ಇನ್ನಿತರೆ ವಿಚಾರಗಳಲ್ಲಿಯೂ ಇತಿಮಿತಿಯಲ್ಲಿರಬೇಕು. ಬೆಂಕಿ ಕಡ್ಡಿ ಕೈಯ್ಯಲ್ಲಿ ಇದ್ದಾಗ ಮಾತ್ರ ಅದು ಬೆಂಕಿ ಕಡ್ಡಿ, ವಿವೇಚನೆ ಇಲ್ಲದೆ ಒಮ್ಮೆ ಗೀರಿ ಎಸೆದರೆ, ಬೆಂಕಿಗೆ ಆಹುತಿಯಾಗಬೇಕಾಗುತ್ತದೆ. ತಿಳುವಳಿಕೆ ಹೇಳುವುದು ಸುಲಭ. ಅನುಸರಣೆ ಕಷ್ಟ ಹಾಗಾಗಿ ಪ್ರತಿಯೊಂದು ವಿಚಾರದಲ್ಲಿಯೂ ಎಚ್ಚರಿಕೆ ವಹಿಸಬೇಕು ಎಂದು ತಿಳಿಹೇಳಿದರು.

ಯಾರಿಂದ ಈ ಲೋಕಕ್ಕೆ ಬಂದಿದ್ದೇವೆ, ನಮ್ಮ ಜವಾಬ್ದಾರಿಗಳು ಏನು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅತೀ ಮುಖ್ಯವಾಗಿದೆ. ಸಮಾಜಕ್ಕೆ ಒಳ್ಳೆಯದಲ್ಲ ಎಂಬುದರ ಹತ್ತಿರ ಎಂದಿಗೂ ಸುಳಿಯ ಕೂಡದು. ಕ್ಷಣಿಕ ಸುಖದ ಹಿಂದೆ ಹೋಗದೆ, ಒಳಿತು ಮತ್ತು ಕೆಡುಕನ್ನು ಅರ್ಥ ಮಾಡಿಕೊಂಡು ಮುನ್ನಡೆಯ ಬೇಕು. ಆರೋಗ್ಯಕರ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಹೇಳಿದರು.


ಮೈಸೂರಿನ ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 'ವ್ಯಸನ ಮುಕ್ತ ದಿನಾಚರಣೆ' ಕಾರ್ಯಕ್ರಮವನ್ನು ಶಾಸಕ ತನ್ವೀರ್ ಸೇಠ್ ಉದ್ಘಾಟಿಸಿದರು.

ಅತಿಯಾದ ಮೊಬೈಲ್ ಬಳಕೆಯು ಕೂಡ ಒಂದು ವ್ಯಸನವಾಗಿದೆ. ಅವಶ್ಯಕತೆಗೆ ಅನುಗುಣವಾಗಿ ಮೊಬೈಲ್ ಬಳಕೆ ಮಾಡಬೇಕು. ವಿದ್ಯಾರ್ಥಿ ದೆಸೆಯಲ್ಲಿ ಓದಿನ ಕಡೆ ಹೆಚ್ಚಿನ ಗಮನ ಕೊಡಬೇಕು. ನನ್ನ ಒಬ್ಬನಿಂದ ಸಮಾಜವನ್ನು ಬದಲಾವಣೆ ಮಾಡಲು ಸಾಧ್ಯವಿಲ್ಲ ಎಂದುಕೊಳ್ಳಬಾರದು. ಪ್ರತಿಯೊಬ್ಬರು ಉತ್ತಮ ಗುಣಗಳನ್ನು ಅಳವಡಿಸಿಕೊಂಡರೆ ಉತ್ತಮ ಹಾಗೂ ವಾಸಕ್ಕೆ ಯೋಗ್ಯವಾದ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ಮಾತನಾಡಿ, ವ್ಯಸನ ಮುಕ್ತ ಸಮಾಜ ನಿರ್ಮಾಣ ಸಾಮಾಜಿಕ ಜವಾಬ್ದಾರಿಯಾಗಿದೆ. ಮಾದಕ ವಸ್ತುಗಳ ಬಳಕೆಯಿಂದ ದೇಹದ ಅಂಗಾಂಗಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ ಹಾಗಾಗಿ ಡ್ರಗ್ಸ್ ಅಂಶವಿರುವ ಯಾವ ಪದಾರ್ಥಗಳನ್ನೂ ಬಳಕೆ ಮಾಡಬಾರದು. ಅತಿಯಾದ ಮೊಬೈಲ್ ಬಳಕೆಯೂ ವ್ಯಸನ ವಾಗಿದ್ದು, ಹೆಚ್ಚೆಚ್ಚು ಮೊಬೈಲ್ ಬಳಕೆಯಿಂದ ಜ್ಞಾಪಕ ಶಕ್ತಿ ಕಡಿಮೆಯಾಗಲಿದೆ ಎಂದು ಸಂಶೋಧನೆಗಳಿಂದ ತಿಳಿದುಬಂದಿದೆ. ಹಾಗಾಗಿ ರೋಗ ಬರುವ ಮುನ್ನವೇ ಎಚ್ಚೆತ್ತು ಜಾಗೃತರಾಗಬೇಕು ಎಂದು ಸಲಹೆ ನೀಡಿದರು.

ವ್ಯಸನ ನಿರ್ಮೂಲನೆಗಾಗಿ ಜೋಳಿಗೆ: ಜಿಲ್ಲಾ ಆರೋಗ್ಯ ಸರ್ವೇಕ್ಷಣಾಧಿಕಾರಿ ಡಾ.ನಾಗರಾಜು ಮಾತನಾಡಿ, ಡಾ.ಮಹಾಂತ ಶಿವಯೋಗಿ ಸ್ವಾಮಿಜಿಯವರು ಭಕ್ತರ ಬಳಿ ಜೋಳಿಗೆ ಹಿಡಿದು ತಮ್ಮ ದುಶ್ಚಟಗಳನ್ನು ನನ್ನ ಜೋಳಿಗೆಯಲ್ಲಿ ಹಾಕಿ ಎನ್ನುವ ಮೂಲಕ ದುಶ್ಚಟಗಳನ್ನು ತ್ಯಜಿಸುವಂತೆ ಅರಿವು ಮೂಡಿಸಿದರು.

ಮಾದಕ ವಸ್ತುಗಳಿಂದ ಮೆದುಳು, ನರಮಂಡಲಕ್ಕೆ ಹಾನಿ...!

ಮಾದಕ ವಸ್ತುಗಳು ಎಂದರೆ, ಮೆದುಳು ಮತ್ತು ನರಮಂಡಲದ ಮೇಲೆ ದುಷ್ಪರಿಣಾಮ ಬೀರುವ ವಸ್ತುಗಳಾಗಿವೆ. ತಂಬಾಕು ಉತ್ಪನ್ನಗಳು, ಆಲ್ಕೋಹಾಲ್, ಗಾಂಜಾ, ಹೆರಾಯಿನ್, ಕೊಕೇನ್ ಇನ್ನಿತರೆ ಮಾದಕ ವಸ್ತುಗಳ ಬಳಕೆ ಕುತೂಹಲ ಮತ್ತು ಸ್ನೇಹಿತರ ಪ್ರಚೋದನೆಯಿಂದ ಪ್ರಾರಂಭಗೊಂಡು ವ್ಯಸನವಾಗಿ ಮಾರ್ಪಟ್ಟು ಕೊನೆಗೆ ಅವುಗಳಿಂದ ಜೀವನವೇ ಹಾಳಾಗಲಿದೆ. ಮಾದಕ ವ್ಯಸನಕ್ಕೆ ಒಳಗಾಗಿರುವವರನ್ನು ಮೊದಲು ಗುರುತಿಸಿ, ನಂತರ ಕೌನ್ಸಿಲಿಂಗ್ ನಡೆಸಿ, ಆರೋಗ್ಯ ಇಲಾಖೆಯ ವತಿಯಿಂದ ಚಿಕಿತ್ಸೆ ನೀಡಲಾಗುತ್ತದೆ. ಚಿಕಿತ್ಸೆ ಪಡೆಯಲು ಭಯ ಬೇಡ. ಚಿಕಿತ್ಸೆ ಪಡೆಯುವವರ ಮಾಹಿತಿಯನ್ನು ಬಹಿರಂಗ ಪಡಿಸುವುದಿಲ್ಲ. ಹಲವಾರು ಎನ್‌ಜಿಒಗಳ ಮೂಲಕ ಸಹ ಚಿಕಿತ್ಸೆ ನೀಡಲಾಗುತ್ತಿದೆ.

- ಡಾ.ಎಂ.ಎಸ್.ಮಂಜುಶ್ರೀ, ಮನೋರೋಗ ತಜ್ಞೆ

ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡಲು ಅವರು ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದರು. ಆದ್ದರಿಂದ ಅವರ ಜನ್ಮ ದಿನವನ್ನು ವ್ಯಸನ ಮುಕ್ತ ದಿನಾಚರಣೆಯಾಗಿ ಆಚರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಮಲೆಮಾದಪ್ಪ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ವಸಂತಕುಮಾರ್ ಮೈಸೂರ್, ಕಾಲೇಜು ಉಪನ್ಯಾಸಕರಾದ ಅರಸುಕುಮಾರ್, ಡಾ.ರಂಜಿತ್, ಟಿ.ಕೆ.ಮಹೇಂದ್ರ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸನ್ ಆಫ್ ಸರ್ದಾರ್-2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಎಲ್ಲುಮುತ್ತಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಹೌಸ್ ಮೇಟ್ಸ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಎಲ್ಲುಮುತ್ತಾ (ಕ) + ಕೊತಲ್ವಾಡಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್ ಕ್ಲಬ್‌ನಲ್ಲಿ ರಾಜ್ಯ ಬ್ರಿಜ್ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಚಾಲನೆ


ಮೈಸೂರಿನ ರೇಸ್ ಕ್ಲಬ್‌ನಲ್ಲಿ ರಾಜ್ಯ ಬ್ರಿಜ್ ಅಸೋಸಿಯೇಷನ್ ಹಾಗೂ ಮೈಸೂರು ಬ್ರಿಜ್ ಅಸೋಸಿಯೇಷನ್ ಆಯೋಜಿಸಿರುವ ಅಂತರ ರಾಜ್ಯ ಬ್ರಿಜ್ ಚಾಂಪಿಯನ್‌ಶಿಪ್ ಸ್ಪರ್ಧೆಗೆ ರಾಜ ವಂಶಸ್ಥರಾದ ಡಾ. ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಿದರು.

ಮೈಸೂರು, ಆ.1(ಜಿಎ)–ಮೈಸೂರಿನ ರೇಸ್ ಕ್ಲಬ್‌ನಲ್ಲಿ ರಾಜ್ಯ ಬ್ರಿಜ್ ಅಸೋಸಿಯೇಷನ್ ಹಾಗೂ ಮೈಸೂರು ಬ್ರಿಜ್ ಅಸೋಸಿಯೇಷನ್ ಆಯೋಜಿಸಿರುವ ಅಂತರ ರಾಜ್ಯ ಬ್ರಿಜ್ ಚಾಂಪಿಯನ್‌ಶಿಪ್ ಸ್ಪರ್ಧೆಗೆ ರಾಜ ವಂಶಸ್ಥರಾದ ಡಾ. ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಿದರು.

ಬ್ರಿಜ್ ಚಾಂಪಿಯನ್‌ಶಿಪ್ ಸ್ಪರ್ಧೆ ಆ.1ರಿಂದ 5ರವರೆಗೆ ನಡೆಯಲಿದ್ದು, ದೇಶದ ವಿವಿಧ ಭಾಗಗಳಿಂದ 220ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಾರೆ. ಈ ಆಟ ಇಸ್ಪೀಟ್ ಎಲೆಗಳನ್ನು ಬಳಸಿ ಆಡುವ ಆಟವಾಗಿದ್ದು, ಮಾನಸಿಕ ಸಾಮರ್ಥ್ಯ ವೃದ್ಧಿಸುತ್ತದೆ. ಗಣಿತದಲ್ಲಿ ಚಾಕಚಕ್ಯತೆ ದೊರೆಯುತ್ತದೆ. ಇದನ್ನು ಕಲಿತ ಮಕ್ಕಳು ಗಣಿತದಲ್ಲಿ ಮೊದಲು ಶೇ. 30 ಅಂಕ ಪಡೆಯುತ್ತಿದ್ದವರು ಶೇ. 70 ಅಂಕ ಪಡೆಯುವವರೆಗೂ ಸಾಧನೆ ಮಾಡುವುದು ಸಾಧ್ಯವಾಗಿದೆ. ಕೆಲವೊಂದು ಶಾಲೆಗಳಲ್ಲಿಯೂ ಇದನ್ನು ಕಲಿಸಲಾಗುತ್ತಿದೆ. ಬ್ರಿಜ್ ಬೆಟ್ಟಿಂಗ್ ಇಲ್ಲದ ಆಟವಾಗಿದೆ.

ಶ್ರೀ ಸಿಮೆಂಟ್ 2ನೇ ಅಂತರ ರಾಜ್ಯ ರಾಷ್ಟ್ರೀಯ ಚಾಂಪಿಯನ್‌ಶಿಪ್, ಸುಭಾಷ್ ಅಗರವಾಲ್ ಮತ್ತು 1ನೇ ರಾಷ್ಟ್ರೀಯ ಮಹಿಳಾ ತಂಡದ ಚಾಂಪಿಯನ್‌ಶಿಪ್ ಎಂಬ ವಿವಿಧ ಮೂರು ಹಂತದಲ್ಲಿ ಸ್ಪರ್ಧೆ ನಡೆಯುತ್ತಿದ್ದು, ಪ್ರತಿದಿನ ಬೆಳಗ್ಗೆ 7.30 ರಿಂದ ರಾತ್ರಿ 7.30 ರವರೆಗೆ ಬ್ರಿಜ್ ಸ್ಪರ್ಧೆ ನಡೆಯಲಿದೆ. ಇಲ್ಲಿ ಆಯ್ಕೆಯಾದವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಮೈಸೂರು ರೇಸ್ ಕ್ಲಬ್‌ನ ಅಧ್ಯಕ್ಷ ಜಿ.ವೆಂಕಟೇಶ್, ಬ್ರಿಜ್ ಫೆಡರೇಷನ್‌ನ ಕಾರ್ಯದರ್ಶಿ ದೇಬಾಶೀಶ್ ರಾಯ್, ಕರ್ನಾಟಕ ಬ್ರಿಜ್ ಅಸೋಸಿಯೇಷನ್ ಅಧ್ಯಕ್ಷ ಪ್ರಕಾಶ್ ಈಶ್ವರನ್, ಕಾರ್ಯದರ್ಶಿ ಕುನಾಲ್ ಜೈಸ್ವಾಲ್, ಜಿಲ್ಲಾ ಬ್ರಿಜ್ ಅಸೋಸಿಯೇಷನ್ ಅಧ್ಯಕ್ಷ ಹೆಚ್.ಎನ್. ಜಯಪಾಲ್, ಮೈಸೂರು ಜಿಲ್ಲಾ ಬ್ರಿಜ್ ಅಸೋಸಿಯೇಷನ್ ಕಾರ್ಯದರ್ಶಿ ಉಮಾಪತಿ, ಡಾ. ಪುಟ್ಟಬಸಪ್ಪ ಉಪಸ್ಥಿತರಿದ್ದರು.

ಸಿದ್ದರಾಜುಗೆ ಪಿಹೆಚ್.ಡಿ



ಮೈಸೂರು: ಗಣಿತಶಾಸ್ತ್ರ ವಿಷಯದಲ್ಲಿ ಡಾ. ಆರ್. ರಂಗರಾಜನ್ ಅವರ ಮಾರ್ಗದರ್ಶನದಲ್ಲಿ ಸಿದ್ದರಾಜು ಸಂಶೋಧನೆ ನಡೆಸಿ ಮಂಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗಾಗಿ ಅಂಗೀಕರಿಸಿದೆ.

ನೇಮಕ



ಮೈಸೂರು: ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಯನ್ನಾಗಿ ಮೈಸೂರು ವಿವಿ ಮೊಹಲ್ಲಾದ ಎಂ.ಬಿ. ಕೊಟ್ರೇಶ್‌ಬಾಬು ಅವರನ್ನು ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ ನೇಮಿಸಿದ್ದಾರೆ.

ಹುಟ್ಟುಹಬ್ಬದ ಶುಭಾಶಯ


ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕರಾದ ಕೆ.ಹರೀಶ್ ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಕನ್ನಡ ಸ್ನೇಹ ಬಳಗದ ವತಿಯಿಂದ ಅವರನ್ನು ಅಭಿನಂದಿಸಿ, ಶುಭಾಶಯ ಕೋರಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಪಿ.ಬಂದೇಗೌಡ್ರು, ಉಪಾಧ್ಯಕ್ಷ ರಾಜ್‌ಕುಮಾರ್, ಖಜಾಂಚಿ ಕಲಾಮಂದಿರ ರಮೇಶ್, ಪತ್ತಿನ ಸಹಕಾರ ಮಹಾಮಂಡಲದ ಅಧ್ಯಕ್ಷ ಎಸ್.ಚಂದ್ರಶೇಖರ್, ಭೈರವ ಗ್ರೂಪ್ ಮಾದೇವ್, ಮೋಹನ್ ಕುಮಾರ್, ಆರ್.ಮಾದೇವ, ಕೃಷ್ಣಪ್ಪ ರಾಜಪ್ಪ ಗುರು, ರಾಮು, ರವಿ, ಬಾಬಣ್ಣ, ದಿಲೀಪ್, ಗೋಪಿ, ಪಾಪಣ್ಣ, ಕೀರ್ತಿ ಇತರರು ಉಪಸ್ಥಿತರಿದ್ದರು.

ನಿಶಾತ್ ಅಂಡ್ ಮಿಸ್ಬಾ ಜೀವನಶೈಲಿ ವಸ್ತು ಪ್ರದರ್ಶನ ಆರಂಭ



ನಿಶಾತ್ ಅಂಡ್ ಮಿಸ್ಬಾ ಅವರು ಆಯೋಜಿಸಿರುವ ಎರಡು ದಿನಗಳ ಜೀವನಶೈಲಿ ಪ್ರದರ್ಶನ ಮೈಸೂರಿನ ಗ್ರ್ಯಾಂಡ್ ಮರ್ಕ್ಯೂರ್ ಹೋಟೆಲ್‌ನಲ್ಲಿ ಶುಕ್ರವಾರ ಆರಂಭವಾಯಿತು. ಮೈಸೂರು ಬುಕ್ ಕ್ಲಬ್ಸ್ ಸಂಸ್ಥಾಪಕರಾದ ಶುಭಾ ಸಂಜಯ್ (ಬಲದಿಂದ ಎರಡನೆಯವರು) ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು. ಚಿತ್ರದಲ್ಲಿ ಹೈದರಾಬಾದ್ ಸರ್ವಮಂಗಳ ಸಿಲ್ಕ್ಸ್ ಪ್ರಿಯಾ ರಾವ್ (ಎಡದಿಂದ), ಲೈಫ್‌ಸ್ಟೈಲ್ ಎಕ್ಸಿಬಿಷನ್‌ನ ಆಯೋಜಕರಾದ ಮಿಸ್ಬಾ ಉಮ್‌ರೀನ್ ಮತ್ತು ನಿಶಾಂತ್ ಮೊಹಸಿನ್ ಅವರನ್ನು ಕಾಣಬಹುದು. ವಸ್ತುಪ್ರದರ್ಶನದಲ್ಲಿ ಹಬ್ಬದ ಉಡುಪುಗಳ ಸಂಗ್ರಹ, ಜ್ಯೂವೆಲ್ಲರಿ ಮತ್ತು ಗೃಹ ಅಲಂಕಾರಿಕ ವಸ್ತುಗಳು ಪ್ರದರ್ಶನಗೊಂಡಿದ್ದು, ಬೆಳಗ್ಗೆ 11 ರಿಂದ ರಾತ್ರಿ 8.30 ರವರೆಗೆ ಸಾರ್ವಜನಿಕರಿಗೆ ಮುಕ್ತವಾಗಿರುತ್ತದೆ.

ಅಂತಾರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂನ ವಾರ್ಷಿಕ ಮಹಾಸಭೆ



ಮೈಸೂರು, ಆ.1– ಅಂತಾರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ ಮೈಸೂರು ಚಾಪ್ಟರ್‌ನ ವಾರ್ಷಿಕ ಮಹಾಸಭೆ ನಗರದ ಜಲ್‌ಮಹಲ್ ರೆಸಾರ್ಟ್ ಮತ್ತು ಸ್ಪಾದಲ್ಲಿ ಇತ್ತೀಚೆಗೆ ನಡೆಯಿತು. ಸಭೆಯಲ್ಲಿ 2025-26ನೇ ಸಾಲಿನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಕೆ.ಹೆಚ್.ಕಿರಣ್, ಉಪಾಧ್ಯಕ್ಷರಾಗಿ ಮಹೇಶ್ ಎಂ., ಕಾರ್ಯದರ್ಶಿಯಾಗಿ ಸಂತೋಷ್ ಎಸ್., ಜಂಟಿ ಕಾರ್ಯದರ್ಶಿಯಾಗಿ ರುದ್ರೇಶ್ ಹಾಗೂ ತೀರ್ಥ ಎಸ್.ಸ್ವಾಮಿ, ಖಜಾಂಚಿಯಾಗಿ ಮನು ಎ.ಪಿ., ಕಾರ್ಯಕಾರಿ ಸಮಿತಿ ಸದಸ್ಯರಾಗಿ ಅವಿನಾಶ್ ಪಾಳೇಗಾರ್, ಶೇಖರ ಪಿ., ಪ್ರದೀಪ್ ಎ.ಎಸ್., ವಿನಯ್ ಕುಮಾರ್, ಶೀಲಾ ಚಿರಂಜೀವಿ, ಶಿವಕುಮಾರ್ ಹಾಂಜಿ, ಪ್ರವೀಣ್ ಎಂ.ಸಿ., ಮಲ್ಲಿಕಾರ್ಜುನ ಸ್ವಾಮಿ, ಜಯಶಂಕರ್, ಕೃಷ್ಣಮೂರ್ತಿ, ರವಿಕಿರಣ್, ಸಂಯೋಜಕರಾಗಿ ಸ್ವಾಮಿ ಸಿ.ಬಿ. ಆಯ್ಕೆಯಾದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಉಪಸ್ಥಿತರಿದ್ದರು. ಅಂತಾರಾಷ್ಟ್ರೀಯ ಲಿಂಗಾಯತ್ ಯೂತ್ ಫೋರಂ ಟ್ರಸ್ಟ್‌ನ ಅಧ್ಯಕ್ಷ ಸಂತೋಷ್ ಕೆಂಚಾಂಬ, ಮೈಸೂರು ಚಾಪ್ಟರ್‌ನ ನಿಕಟಪೂರ್ವ ಅಧ್ಯಕ್ಷ ಕೆ.ಎಸ್. ಮಹದೇವ ಪ್ರಸಾದ್ ಹಾಜರಿದ್ದರು.

ಸಾಹಿತಿ-ಪತ್ರಕರ್ತ ಬನ್ನೂರು ರಾಜು ನೆರವಿಗೆ ಕಸಾಪ ಮನವಿ



ಮೈಸೂರು, ಆ. 1– ಪಾರ್ಶ್ವವಾಯು ಪೀಡಿತರಾಗಿರುವ ಹಿರಿಯ ಸಾಹಿತಿ ಹಾಗೂ ಪತ್ರಕರ್ತ ಬನ್ನೂರು ಕೆ ರಾಜು ಅವರ ಚಿಕಿತ್ಸಾ ವೆಚ್ಚಕ್ಕೆ ಸಂಘ-ಸಂಸ್ಥೆಗಳು ಮತ್ತು ಸರ್ಕಾರ ಆರ್ಥಿಕ ನೆರವು ನೀಡಬೇಕೆಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮನವಿ ಮಾಡಿದ್ದಾರೆ.

125ಕ್ಕೂ ಹೆಚ್ಚು ಪುಸ್ತಕ, ಪತ್ರಿಕೆಗಳಿಗೆ ನೂರಾರು ಅಂಕಣ ಬರಹಗಳನ್ನು ಬರೆದಿರುವ ಬನ್ನೂರು ರಾಜು ಇತ್ತೀಚೆಗೆ ಪಾರ್ಶ್ವವಾಯುವಿಗೆ ತುತ್ತಾಗಿದ್ದಾರೆ. ಬರಹವನ್ನೇ ವೃತ್ತಿಯಾಗಿಸಿಕೊಂಡು ಕಳೆದ 45 ವರ್ಷಗಳಿಂದ ಕನ್ನಡ ಸಾಹಿತ್ಯ ಸೇವೆ ಮಾಡಿರುವ ಬನ್ನೂರು ಕೆ. ರಾಜು ಅವರಿಗೆ ಸಾಹಿತಿ-ಕಲಾವಿದರಿಗೆ ನೀಡುವ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಆರ್ಥಿಕ ನೆರವು ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಆರ್ಥಿಕ ಸಂಕಷ್ಟವಿದ್ದರೂ ಯಾರ ಬಳಿಯೂ ನೆರವು ಕೋರದೆ ಸ್ವಾಭಿಮಾನದಿಂದ ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿರುವ ಸಾಹಿತಿ ಹಾಗೂ ಪತ್ರಕರ್ತ ಬನ್ನೂರು ಕೆ ರಾಜು ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ|| ಹೆಚ್.ಸಿ. ಮಹದೇವಪ್ಪ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದಾದರೂ ಆರ್ಥಿಕ ನೆರವು ದೊರಕಿಸಿಕೊಡಲು ಮುಂದಾಗಬೇಕು. ಹಾಗೇ, ಕನ್ನಡ ಸಂಸ್ಕೃತಿ ಪೋಷಕರಾದ ಸಾಹಿತಿಗಳು ಮತ್ತು ಕಲಾವಿದರು ವಯೋಸಹಜ ಅನಾರೋಗ್ಯದಿಂದ ಸಂಕಷ್ಟಕ್ಕೆ ಸಿಲುಕಿದಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸ್ಪಂದಿಸಿ, ಸರ್ಕಾರದಿಂದ ಆರ್ಥಿಕ ನೆರವು ದೊರಕಿಸಿಕೊಡಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಬನ್ನೂರು ರಾಜು ಭೇಟಿ ಮಾಡಿದ ಕಸಾಪ: ಪಾರ್ಶ್ವವಾಯು ಪೀಡಿತರಾಗಿರುವ ಹಿರಿಯ ಸಾಹಿತಿ ಹಾಗೂ ಪತ್ರಕರ್ತ ಬನ್ನೂರು ಕೆ. ರಾಜು ಅವರ ನಿವಾಸಕ್ಕೆ ತೆರಳಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಯೋಗ ಸಾಂತ್ವನ ಹೇಳಿ, ಅವರ ಆರೋಗ್ಯ ಸುಧಾರಣೆಗೆ ಹಾರೈಸಿತು. ಸಾಹಿತ್ಯ ಪರಿಷತ್ತಿನಿಂದ ಸಾಧ್ಯವಾದ ಎಲ್ಲಾ ನೆರವು ನೀಡುವುದಾಗಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರುಗಳಾದ ಎಂ.ಚಂದ್ರಶೇಖರ್, ವೈ.ಡಿ.ರಾಜಣ್ಣ, ಕಾರ್ಯದರ್ಶಿ ಶ್ರೀಮತಿ ಲತಾಮೋಹನ್, ಪತ್ರಕರ್ತರುಗಳಾದ ರಂಗನಾಥ್ ಮೈಸೂರು ಮತ್ತು ಎಸ್.ಪ್ರಕಾಶ್ ಬಾಬು ಉಪಸ್ಥಿತರಿದ್ದರು.

ಪಿಎಂ ಕುಸುಮ್-ಸಿ ಯೋಜನೆಯ ಕಾಮಗಾರಿ ಆರಂಭಿಸಲು ಆ. 20ರ ಗಡುವು

● ತಪ್ಪಿದರೆ ಸಂಬಂಧಿಸಿದ ಏಜೆನ್ಸಿಗಳ ಟೆಂಡರ್ ರದ್ದು ● ಸೆಸ್ಕ್ ಎಂಡಿ ಮುನಿಗೋಪಾಲರಾಜು ಎಚ್ಚರಿಕೆ

ಮೈಸೂರು,ಆ.1(ಎಂಟಿವೈ)– ಪಿಎಂ ಕುಸುಮ್-ಸಿ ಯೋಜನೆಯ ಕಾಮಗಾರಿಯನ್ನು ಆ.20ರೊಳಗೆ ಆರಂಭಿಸದ ಏಜೆನ್ಸಿಗಳ ಟೆಂಡರ್ ರದ್ದು ಮಾಡುವುದಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಎಚ್ಚರಿಸಿದ್ದಾರೆ.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ನಡೆದ ಕುಸುಮ್-ಸಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚೆಗಷ್ಟೇ ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ಕುಸುಮ್-ಸಿ ಯೋಜನೆ ಅನುಷ್ಠಾನ ಸಂಬಂಧ ನಡೆದ ಸಭೆಯಲ್ಲಿ ಕೆಲವು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದ್ದು, ನಿಗದಿತ ಅವಧಿಯೊಳಗೆ ಕುಸುಮ್-ಸಿ ಯೋಜನೆ ಜಾರಿಗೊಳಿಸುವಂತೆ ಟೆಂಡರ್ ಪಡೆದಿರುವ ಎಲ್ಲಾ ಏಜೆನ್ಸಿಗಳಿಗೆ ಸಂದೇಶ ರವಾನಿಸಲಾಗಿದೆ. ಯೋಜನೆ ಅನುಷ್ಠಾನ ಸಂಬಂಧ ಈಗಾಗಲೇ ಕೆಲವು ಏಜೆನ್ಸಿಗಳು ಚಟುವಟಿಕೆ ಆರಂಭಿಸಿವೆ. ಆದರೆ, ಇನ್ನಷ್ಟು ಏಜೆನ್ಸಿಗಳು ವಿಳಂಬ ಧೋರಣೆ ಅನುಸರಿಸುತ್ತಿರುವುದು ಗಮನಕ್ಕೆ ಬಂದಿದೆ. ಯೋಜನೆ ಆರಂಭಿಸಲು ಆ.20ರೊಳಗೆ ಕಾಲಮಿತಿ ನಿಗದಿ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಇಂಧನ ಖರೀದಿ ಕರಾರು(ಪಿಪಿಎ) ನೀಡಿದ್ದರೂ ಈವರೆಗೆ ಕೆಲಸ ಆರಂಭಿಸದ ಏಜೆನ್ಸಿಗಳಿಗೆ ನೋಟಿಸ್ ನೀಡಿ, ಟೆಂಡರ್ ರದ್ದುಪಡಿಸಲು ನಿರ್ಧಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ.


ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ನಡೆದ ಕುಸುಮ್-ಸಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ನೇತೃತ್ವದಲ್ಲಿ ನಡೆಯಿತು.

ಅಲ್ಲದೆ, ಮರು ಟೆಂಡರ್ ಕರೆಯುವಂತೆ ಇಂಧನ ಸಚಿವರು ಸೂಚನೆ ನೀಡಿದ್ದಾರೆ. ಆದ್ದರಿಂದ ಕುಸುಮ್-ಸಿ ಯೋಜನೆ ಅನುಷ್ಠಾನಕ್ಕೆ ಅಗತ್ಯ ಇರುವ ಜಾಗವನ್ನು ಗುರುತಿಸಿ, ಶೀಘ್ರವಾಗಿ ಕೆಲಸ ಆರಂಭಿಸಲು ಟೆಂಡರ್ ಪಡೆದ ಏಜೆನ್ಸಿಗಳು ಮುಂದಾಗಬೇಕು. ನಿಗಮದ ಅಧಿಕಾರಿಗಳು ಹೆಚ್ಚಿನ ಮುತುವರ್ಜಿಯಿಂದ ಕೆಲಸ ಮಾಡಬೇಕು ಎಂದರು.

ಕುಸುಮ್-ಸಿ ಮೂಲಕ ಸೆಸ್ಕ್ ವ್ಯಾಪ್ತಿಯಲ್ಲಿ 3 ತಿಂಗಳಲ್ಲಿ ಕನಿಷ್ಠ 5 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿ ನೀಡಲಾಗಿದೆ. ಟೆಂಡರ್ ಪಡೆದಿರುವ ಏಜೆನ್ಸಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು. ಜಾಗದ ಸಮಸ್ಯೆ ಸೇರಿದಂತೆ ಇನ್ನಿತರ ಯಾವುದೇ ಸಮಸ್ಯೆ ಎದುರಾಗಿದ್ದರೂ, ಅವುಗಳನ್ನು ಇತ್ಯರ್ಥಪಡಿಸಿ, ಕೆಲಸ ಆರಂಭಿಸಬೇಕು. ಇಲ್ಲದಿದ್ದರೆ ಅಂತಹ ಏಜೆನ್ಸಿಗಳ ಟೆಂಡರ್ ರದ್ದು ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಲಭ್ಯವಿರುವ ಸ್ಥಳದಲ್ಲೇ ಕೆಲಸ ಆರಂಭಿಸಿ: ಕುಸುಮ್-ಸಿ ಯೋಜನೆಗೆ ಎಲ್ಲೆಡೆ ಸರ್ಕಾರಿ ಜಾಗ ಸಿಗುವುದಿಲ್ಲ. ಸ್ಥಳ ಇಲ್ಲದಿದ್ದರೆ ಖಾಸಗಿ ಜಾಗ ಪಡೆದು ಕೆಲಸ ಆರಂಭಿಸಬೇಕು. ಎಷ್ಟು ಪ್ರಮಾಣದಲ್ಲಿ ಜಾಗ ಲಭ್ಯವಿರುತ್ತದೆಯೋ ಅಲ್ಲಿ ಕೆಲಸ ಆರಂಭಿಸಬೇಕು. ನಿಗಮದ ಕಾರ್ಯಪಾಲಕ ಅಭಿಯಂತರರು ಈ ನಿಟ್ಟಿನಲ್ಲಿ ಕಿರಿಯ ಇಂಜಿನಿಯರ್ ಮೂಲಕ ಸ್ಥಳೀಯವಾಗಿ ಲಭ್ಯವಿರುವ ಜಾಗಗಳನ್ನು ಗುರುತಿಸಿ, ಯೋಜನೆ ಅನುಷ್ಠಾನಗೊಳಿಸಲು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದರು.

ಸಭೆಯಲ್ಲಿ ನಿಗಮದ ತಾಂತ್ರಿಕ ನಿರ್ದೇಶಕ ಡಿ.ಜೆ. ದಿವಾಕರ್, ಮೈಸೂರು ವಲಯ ಕಚೇರಿಯ ಮುಖ್ಯ ಇಂಜಿನಿಯರ್ ಮೃತ್ಯುಂಜಯ, ಹಾಸನ ವಲಯ ಕಚೇರಿಯ ಮುಖ್ಯ ಇಂಜಿನಿಯರ್ ಹರೀಶ್, ಸೆಸ್ಕ್ ಐಟಿ ಮತ್ತು ಎಂಐಎಸ್ ವಿಭಾಗದ ಪ್ರಧಾನ ವ್ಯವಸ್ಥಾಪಕ ರಾಮಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.


ಭುವನ್‌ರಾಜ್ ಫೌಂಡೇಶನ್ ಸಂಸ್ಥಾಪಕರು ಹಾಗೂ
ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಯುವ ಮುಖಂಡರಾದ
ಚೇತನ್‌ರಾಜ್ ಎನ್. ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
9060363617
SHIVU PRINTERS
ಶುಭಕೋರುವವರು: ಭುವನ್‌ರಾಜ್ ಫೌಂಡೇಷನ್ ಪದಾಧಿಕಾರಿಗಳು
ಹಾಗೂ ಚೇತನ್‌ರಾಜ್ ಎನ್. ಅಭಿಮಾನಿಗಳ ಬಳಗ, ಮೈಸೂರು
ವಿಕಾಸ್ ಎಂ.
ನಗರ ಪ್ರಧಾನಕಾರ್ಯದರ್ಶಿ
ಯುವ ಕಾಂಗ್ರೆಸ್ ಸಮಿತಿ, ಮೈಸೂರು